ವಾರ್ಷಿಕ ಚಂದಾ ರೂ.25/-



# ಮಾಸಿಕ ಜನಪದ

ಸಂಪುಟ-04 • ಸಂಚಿಕೆ-05 • ಫೆಬ್ರವರಿ 2021


ಫೆಬ್ರವರಿ
2021

■ ಗಣರಾಜ್ಯೋತ್ಸವ ಸ್ತಬ್ಧಚಿತ್ರ ನಿರ್ಮಾಣದ ಹಿಂದಿನ ಕಥೆ

■ ರೈತರ ಸೇವೆಗೆ ಕೃಷಿ ಸಂಜೀವಿನಿ

■ ಕೊಪ್ಪಳದಲ್ಲಿ ದೇಶದ ಮೊದಲ ಬೃಹತ್ ಆಟಿಕೆ ಕ್ಲಸ್ಟರ್

■ ಪಡುಬಿದ್ರೆ ಬೀಚ್‌ಗೆ ಬ್ಲೂಫಾಗ್ ಕಿರೀಟ



## ರೈತಪರ ಸರ್ಕಾರದಿಂದ ರೈತ ಸ್ನೇಹಿ ಕಾಯಿದೆಗಳು

Download From : www.kpscvaani.com



ಜನವರಿ 16 ರಂದು ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ನಿಮಿತ್ತ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮರ್ ಕಟೀಲ್ ಅವರು ಸ್ವಾಗತಿಸುತ್ತಿರುವುದು.



ವಾರ್ತಾ ಜನಪದ ಮಾಸ ಪತ್ರಿಕೆಯ ನವೀಕೃತ ಜನವರಿ ಸಂಚಿಕೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬಿಡುಗಡೆ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಸಲಹೆಗಾರರಾದ ಎಂ.ಲಕ್ಮೀನಾರಾಯಣ, ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಅಂಜುಮ್ ಪರ್ವೇಜ್ ಹಾಗೂ ಆಯುಕ್ತರಾದ ಡಾ. ಪಿ. ಎಸ್. ಹರ್ಷ ಉಪಸ್ಥಿತರಿದ್ದರು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

ವಾರ್ತಾ ಜನಪದ

ಸಂಪುಟ-04 • ಸಂಚಿಕೆ-05 • ಫೆಬ್ರವರಿ 2021

ಫೆಬ್ರವರಿ 2021



06 ರೈತಪರ ಸರ್ಕಾರದಿಂದ ರೈತ ಸ್ನೇಹಿ ಕಾಯಿದೆಗಳು



21 ಗಣರಾಜ್ಯೋತ್ಸವ ಸ್ತಬ್ಧಚಿತ್ರ ನಿರ್ಮಾಣದ ಹಿಂದಿನ ಕಥೆ
• ಡಿ.ಪಿ.ಮುರಳೀಧರ್

16 ಕೊಪ್ಪಳದಲ್ಲಿ ದೇಶದ ಮೊದಲ ಬೃಹತ್ ಆಟಿಕೆ ಕ್ಲಸ್ಟರ್
• ಬಿ.ವಿ.ಅನುರಾಧ/ಜಿ.ಸುರೇಶ್

24 ಗೃಹರಕ್ಷಕ ದಳದವರಿಗೆ ಛಾಯಾಗ್ರಹಣ ಕಾರ್ಯಾಗಾರ
• ಜಡಿಯಪ್ಪ ಗೆದ್ಲಗಟ್ಟಿ

29 ಕೊರೊನಾ ನಿಗ್ರಹಕ್ಕೆ ಸರ್ಕಾರದಿಂದ ಲಸಿಕಾ ಅಭಿಯಾನ
• ಕೆ.ಎಸ್.ರಾಜಮನ್ನಾರ್



26 ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ಸ್ಯ ಸಂಪದ ಯೋಜನೆ
• ಎನ್. ನಾಗರತ್ನಮ್ಮ



41 ಪ್ರಕೃತಿ ಪ್ರಿಯರ ಸ್ವರ್ಗ: ಮೈದಾನ ಹಳ್ಳಿ
• ಡಾ. ಬಿ.ಆರ್. ಮಮತಾ



36 ವಿಭಿನ್ನ ಭತ್ತದ ತಳಿಯ ಸಂರಕ್ಷಣೆಯಲ್ಲಿ ತೊಡಗಿರುವ ಕೃಷಿಕ
• ಗಣಪತಿ ಹಾಸ್ಪುರ

34 ಆದಿಜಾಂಬವ ಅಭಿವೃದ್ಧಿ ನಿಗಮದ ಸೇವಾ ಸೌಲಭ್ಯ
• ಬಿ.ಜಿ.ಪೂರ್ಣಿಮ

39 ರೈತರ ಸೇವೆಗೆ ಕೃಷಿ ಸಂಜೀವಿನಿ
• ಹೆಚ್.ಶಿವಣ್ಣ

44 ಪಡುಬಿದ್ರೆ ಬೀಚ್‌ಗೆ ಬ್ಲೂಫ್ಲಾಗ್ ಕಿರೀಟ
• ಬಿ.ಶಿವಕುಮಾರ್

46 ಸ್ವಯಂ ದೀಪ ಕಲಿವೀಡು ಕಲಾ ಕೃಷಿ ಶಾಲೆ
• ಮಂಜುನಾಥ ಡಿ. ಡೊಳ್ಳಿನ

48 ದೇಹದಾನ: ಸಾವಿನಾಚೆಗೂ ಸಮಾಜಸೇವೆ
• ಸಂಗಮೇಶ ಎನ್. ಜವಾದಿ

50 ಪದಬಂಧ-15

ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು - 560 010

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ.

Download From : www.kpscvaani.com

# ನಿಮ್ಮ ಅನಿಸಿಕೆ

ಹೊಸ ವರ್ಷಕ್ಕೆ ವಾರ್ತಾ ಜನಪದ ಸಂಚಿಕೆಯು ಹೊಸ ವಿನ್ಯಾಸದಲ್ಲಿ ಸುಂದರವಾಗಿ ಮೂಡಿಬಂದಿದೆ. ಮುಖಪುಟವಂತೂ ತುಂಬಾ ಆಕರ್ಷಕವಾಗಿದೆ. ಇನ್ನು ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಲೇಖನಗಳು ಒಂದಕ್ಕಿಂತ ಒಂದು ಉತ್ತಮವಾಗಿವೆ. ಪತ್ರಿಕೆಗೆ ಹೊಸತನ ನೀಡಿರುವ ಸಂಪಾದಕ ಮಂಡಳಿಗೆ ಹಾರ್ದಿಕ ಅಭಿನಂದನೆಗಳು.

**-ಮಹಾಲಕ್ಷ್ಮಿ,**
ಹುಬ್ಬಳ್ಳಿ

---

ಜನವರಿ 2021 ರ ಜನಪದ ಮಾಸಿಕದಲ್ಲಿ ಡಿ.ಪಿ.ಮುರಳೀಧರ್ ಅವರು ಪ್ರೊ. ರೊದ್ದಂ ನರಸಿಂಹ ಅವರ ಕುರಿತು ಬರೆದಿರುವ ಲೇಖನ ತುಂಬ ಸೊಗಸಾಗಿ ಮೂಡಿ ಬಂದಿದೆ. ಹೆಚ್ಚು ಜನರಿಗೆ ಗೊತ್ತಿಲ್ಲದ ಪ್ರೊ.ರೊದ್ದಂ ಬಗ್ಗೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿರುವುದು ತುಂಬಾ ಶ್ಲಾಘನೀಯವೇ ಸರಿ.

ಪ್ರೊ. ರೊದ್ದಂ ಅವರು ವಿಶ್ವ ದರ್ಜೆಯ ಸಂಶೋಧಕರಾಗಿ ವಿಶೇಷವಾಗಿ ವೈಮಾನಿಕ ಕ್ಷೇತ್ರಕ್ಕೆ ಕಾಲಿಡಲು ಡಾ. ಸಿ.ವಿ.ರಾಮನ್ ಅವರ ಭಾಷಣವೊಂದು ಪ್ರಮುಖ ಕಾರಣವಾಯಿತೆಂದು ತಿಳಿದು ಬರುತ್ತದೆ. ಇವರ ಸಂಶೋಧನೆಗೆ ದೊರೆತ ಅನೇಕ ಪ್ರಶಸ್ತಿಗಳಲ್ಲಿ ಪದ್ಮವಿಭೂಷಣ, ಆರ್ಯಭಟ ಮುಂತಾದವು ಅವರ ಗರಿಮೆಗೆ ಮೆರಗು ನೀಡಿವೆ. ಶ್ರೀಯುತರು ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ.

**-ಗೌಡಯ್ಯ,**
ಮೈಸೂರು

2021 ಜನವರಿ ವಾರ್ತಾ ಜನಪದ ಸಂಚಿಕೆಯಲ್ಲಿ ಡಾ. ರವಿಪ್ರಸಾದ್ ಸಜ್ಜನ್ ಅವರು ಬರೆದಿರುವ "ಬೆಳೆಗಳನ್ನು ವೈಜ್ಞಾನಿಕವಾಗಿ ಒಣಗಿಸುವ ಸೌರಶಕ್ತಿ ಶಾಖ ಪೆಟ್ಟಿಗೆ" ಲೇಖನ ತುಂಬಾ ಉಪಯುಕ್ತವಾಗಿದೆ. ಬಹಳಷ್ಟು ರೈತರಿಗೆ ಬೆಳೆಗಳನ್ನು ವೈಜ್ಞಾನಿಕವಾಗಿ ಹೇಗೆ ಒಣಗಿಸಿ ಸಂಗ್ರಹಿಸಿ ಇಟ್ಟುಕೊಳ್ಳಬೇಕು ಎಂಬುದು ಗೊತ್ತಿರುವುದಿಲ್ಲ. ಹಾಗಾಗಿ ಅವರು ಬೆಳೆದ ಬೆಳೆಗೆ ಸರಿಯಾದ ಬೆಲೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಲೇಖನದಿಂದ ಸೌರಶಕ್ತಿಯ ಶಾಖಾ ಪೆಟ್ಟಿಗೆಗಳಲ್ಲಿ ಯಾವ ಯಾವ ಬೆಳೆಗಳನ್ನು ಹೇಗೆ ಒಣಗಿಸಿ ಸಂಗ್ರಹಿಸುವುದು ಎಂಬ ಮಾಹಿತಿಯನ್ನು ನೀಡುವ ಜೊತೆಗೆ, ಇದನ್ನು ಖರೀದಿಸಲು ಸಹಾಯಧನ ಇರುವ ಸೌಲಭ್ಯದ ಕುರಿತು ರೈತರಿಗೆ ಸಮಗ್ರವಾಗಿ ಮಾಹಿತಿಯನ್ನು ನೀಡಿದ್ದಾರೆ.

**-ಶಿವಕುಮಾರ್,**
ತುಮಕೂರು




ಜನವರಿ ಮಾಸಿಕದ ಜನಪದ ಸಂಚಿಕೆಯ ಮುಖಪುಟ ಅತ್ಯಂತ ಆಕರ್ಷಕವಾಗಿದ್ದು, ಮನಸ್ಸಿಗೆ ಮುದನೀಡುವಂತಿದೆ. ಮುಖಪುಟದ ಬೆಂಗಳೂರು ಮಿಷನ್ 2022 ರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಸುದೀರ್ಘ ಹೇಳಿಕೆಗಳು ಜನ ಮೆಚ್ಚುವಂತಹ ಕಾರ್ಯಗಳಾಗಿರುತ್ತದೆ. 2022 ರ ವೇಳೆಗೆ ಬೆಂಗಳೂರು ನಗರವನ್ನು ವಿಶ್ವದರ್ಜೆಗೆ ಏರಿಸುವ ಮುಖ್ಯಮಂತ್ರಿಗಳ ಆಸೆ ಈಡೇರಲು ಸಮಸ್ತ ಬೆಂಗಳೂರಿಗರು ಅವರ ಜೊತೆ ಕೈ ಜೋಡಿಸುವ ಮೂಲಕ ಬೆಂಗಳೂರು ನಗರವನ್ನು ಅತ್ಯಂತ ಸುಂದರ ನಗರವಾಗಿಸಬಹುದೆಂಬುದು ನನ್ನ ಅನಿಸಿಕೆ.

ರೇವಣ್ಣ
ಕೃಷ್ಣರಾಜ ನಗರ

ವಿನಯ್ ಅವರು ಬರೆದಿರುವ ಮಹಾನ್ ಸಂತ ಸ್ವಾಮಿ ವಿವೇಕಾನಂದರ ಲೇಖನ ಭಾರತದ ಯುವ ಸಮುದಾಯಕ್ಕೆ ದಾರಿದೀಪದಂತಿದೆ. ಯುವ ಜನರಿಗೆ ಸ್ಫೂರ್ತಿದಾಯಕ ಸಂದೇಶಗಳನ್ನು ನೀಡುವುದರ ಜೊತೆಗೆ ಸಮಾಜ ಸುಧಾರಣೆಗೆ ತಮ್ಮ ಜೀವಿತಾವಧಿಯನ್ನು ಮುಡುಪಾಗಿಟ್ಟ ಅತ್ಯಂತ ಉತ್ಸಾಹಿ ತರುಣ ಸ್ವಾಮಿ ವಿವೇಕಾನಂದರನ್ನು ಸ್ಮರಿಸಿಕೊಳ್ಳುವಂತೆ ಮಾಡಿತು.

**-ಆದರ್ಶ,**
ಬೋಗಾದಿ

---

ವಿಜ್ಞಾನ ಅದರಲ್ಲೂ ದೇಶದ ಏರೋನಾಟಿಕಲ್ ಅಭಿವೃದ್ಧಿಗೆ ಪ್ರೊ. ರೊದ್ದಂ ನರಸಿಂಹ ಅವರ ಕೊಡುಗೆ ಸರಳವಾಗಿ, ಮನೋಜ್ಞವಾಗಿ ಮೂಡಿಬಂದಿದೆ.ಈ ಲೇಖನ ವಿಜ್ಞಾನ ವಿದ್ಯಾರ್ಥಿಗಳಿಗೆ Inspirational ಆಗಿದೆ. ಅವರು ಬರೆದಿರುವ ಪುಸ್ತಕಗಳು ನಮ್ಮಂತಹ ಆಸಕ್ತ ವಿದ್ಯಾರ್ಥಿಗಳಿಗೂ ಮಾರ್ಗದರ್ಶನ ನೀಡುವಂತಾಗಲಿ. ವಿಜ್ಞಾನಿಯ ಬಗ್ಗೆ ಇನ್ನಷ್ಟು ಅರಿಯಲು, ಅವರ ಆಸಕ್ತಿಗಳನ್ನು ತಿಳಿಯಲು ಲೇಖನ ಸಹಕಾರಿಯಾಗಿದೆ.

ವೈಜ್ಞಾನಿಕ ಆವಿಷ್ಕಾರಗಳ ಜೊತೆಗೆ ಈ ಬಗ್ಗೆ ಅವರು ಅಧಿಕಾರಯುತವಾಗಿ ಬರೆದ ಲೇಖನಗಳು, ಪುಸ್ತಕಗಳು, ವಿಜ್ಞಾನಕ್ಕೆ, ವಿದ್ಯಾರ್ಥಿಗಳಿಗೆ ನೀಡಿದ ಜ್ಞಾನದ ಸಂಪತ್ತು.

**-ಋತು**
ಮಂಗಳೂರು

---

ವಾರ್ತಾ ಜನಪದ ಹೊಸತನದೊಂದಿಗೆ ಮೂಡಿ ಬಂದಿರುವುದು ಸಂತಸ ತಂದಿದೆ. ಯಾವುದೇ ಖಾಸಗಿ ಸಂಸ್ಥೆಗಳು ಹೊರತರುವ ಪತ್ರಿಕೆಗಳಿಗಿಂತ ಕಡಿಮೆ ಇಲ್ಲವೆಂದು ನಿರೂಪಿಸಿದೆ. ಸರ್ಕಾರದ ಯೋಜನೆ, ರೂಪರೇಷೆಗಳ ಚಿತ್ರಣವನ್ನು ನವೀನ ಮಾದರಿಯಲ್ಲಿ ಓದುಗರಿಗೆ ಮನಮುಟ್ಟಿಸುವುದು, ವಿದ್ಯಾರ್ಥಿಗಳಿಗೆ ಕಲಿಕೆ ದೃಷ್ಟಿಯಿಂದ ವಿಷಯವಾರು ಮಾಹಿತಿ ಒದಗಿಸುತ್ತಿದ್ದು, ಹೆಚ್ಚಿನ ಜ್ಞಾನಾರ್ಜನೆಗೆ ಸಹಕಾರಿಯಾಗಿದೆ. ಹೀಗೆಯೇ ವಾರ್ತಾ ಜನಪದದ ಸೊಬಗು ಇನ್ನೂ ಮೇಳೈಸಲಿ ಎಂದು ಆಶಿಸುವೆ.

**-ಪ್ರಾರ್ಥನಾ ಎಂ. ಆರ್,**
ವಿಜಯನಗರ

**'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ**

**ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.**

**ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.**

**Download From : www.kpscvaani.com**



## ಸಂಪಾದಕೀಯ...

# ಹೆಮ್ಮೆ ಮೂಡಿಸಿದ ಹೊಸ ವರ್ಷದ ಮೊದಲ ತಿಂಗಳ ಸಾಧನೆ

**ಪ್ರಿಯ ಓದುಗ ಮಿತ್ರರೆ !**

ಹೊಸ ವರ್ಷದಲ್ಲಿ ಈಗಾಗಲೇ ಒಂದು ತಿಂಗಳು ಕಳೆದಿದೆ. ಹೊಸ ವರ್ಷದ ಮೊದಲ ತಿಂಗಳ ಸಾಧನೆ ಏನು ? ಎಂಬುದನ್ನು ಒಮ್ಮೆ ಅವಲೋಕಿಸಿ, ಪರಾಮರ್ಶಿಸಿದರೆ ಹೆಮ್ಮೆಯಾಗುತ್ತದೆ.

ಹೊಸ ವರ್ಷದ ಮೊದಲ ಹಬ್ಬ ಸಂಕ್ರಾಂತಿ. ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗೋವಾ ಹಾಗೂ ಒಡಿಶಾದಲ್ಲಿ ಮಕರ ಸಂಕ್ರಾಂತಿ ಎಂದು ಕರೆಯಲ್ಪಡುವ ಸಂಕ್ರಾಂತಿ, ನೆರೆಯ ತಮಿಳು ನಾಡು ಮತ್ತು ಪುದುಚರಿ ರಾಜ್ಯಗಳಲ್ಲಿ ಪೊಂಗಲ್ ಎಂದೂ, ಅಸ್ಸಾಂನಲ್ಲಿ ಮಾಘ್ ಬಿಹು ಎಂದೂ, ಪಂಜಾಬ್, ಹರ್ಯಾಣ ಮತ್ತು ಹಿಮಾಚಲ್ ಪ್ರದೇಶ ರಾಜ್ಯಗಳಲ್ಲಿ ಬಿಹೂ ಎಂದೂ, ಪೌಶ್ ಸಂಕ್ರಾಂತಿ ಎಂದೂ, ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಉತ್ತರಾಯಣ್ ಎಂದೂ ಆಚರಿಸಲ್ಪಡುವ ಸಂಕ್ರಾಂತಿ ಮೂಲತಃ ಸುಗ್ಗಿಯ ಹಿಗ್ಗಿನ ಸಂಭ್ರಮವನ್ನು ಬಂಧು–ಮಿತ್ರರೊಡನೆ ಹಂಚಿಕೊಳ್ಳುವ ರೈತರ ಹಬ್ಬ.

ಸಂಕ್ರಾಂತಿ ಹಬ್ಬವು ಈ ಬಾರಿ ಆರೋಗ್ಯ ಕ್ಷೇತ್ರದಲ್ಲೇ ಕ್ರಾಂತಿಯನ್ನು ಉಂಟು ಮಾಡಿರುವುದು ಗಮನಾರ್ಹ. ತಮಗೆ ತಿಳಿದಂತೆ 2020 ಎಂಬುದು ಇಡೀ ವಿಶ್ವವೇ ಬೆಚ್ಚಿ ಬೀಳುವ ವರ್ಷವಾಗಿತ್ತು. ಕೋವಿಡ್–19 ಎಂಬ ಮಹಾಮಾರಿ ಆರೋಗ್ಯ ಲೋಕಕ್ಕೆ ಸವಾಲಾಗಿ ಪರಿಣಮಿಸಿತ್ತು. ಅಷ್ಟೇ ಅಲ್ಲ ! ವಿಶ್ವದ ಆರ್ಥಿಕತೆಯನ್ನೇ ಹಾಳುಗೆಡವಿತ್ತು. ಇಂತಹ ಸವಾಲುಗಳನ್ನು ಎದುರಿಸಿ ಜಯಿಸಿದ ರಾಷ್ಟ್ರಗಳಲ್ಲಿ ನಮ್ಮ ಭಾರತವೂ ಒಂದು ಎಂಬುದು ಅತ್ಯಂತ ಸಂತಸದ ಸಂಗತಿ.

ಇದೀಗ, ಕೋವಿಡ್–19 ಎಂಬ ಮಹಾಮಾರಿಯನ್ನು ಹೊರಗಟ್ಟಲು ಭಾರತವು ಸಜ್ಜಾಗಿದೆ. ಕೋವಿಡ್–19 ತಡೆಗಟ್ಟಲು ಹೈದರಾಬಾದ್‌ನ ಭಾರತ್ ಬಯೋಟೆಕ್ ಇಂಟರ್ ನ್ಯಾಷನಲ್ ಲಿಮಿಟೆಡ್ ಸಿದ್ಧಪಡಿಸಿರುವ ಕೋವ್ಯಾಕ್ಸಿನ್ ಹಾಗೂ ಆಸ್ಟ್ರಾ ಝೆನೆಕಾ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಔಷಧ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪುಣೆಯ ಸೆರಮ್ ಇನ್ಸ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸಿರುವ ಕೋವಿಶೀಲ್ಡ್ ಲಸಿಕೆಗಳು ಕೇವಲ ಭಾರತ ಮಾತ್ರವಲ್ಲ, ವಿಶ್ವದ 114 ರಾಷ್ಟ್ರಗಳಿಗೆ ಸಂಜೀವಿನಿಯಾಗಿದೆ.



Lovely image tweeted by Brazilian President to thank India for vaccine supply. Very evocative imagery of Hanuman transporting Sanjeevani across the oceans.

ಔಷಧ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಕೊಡುಗೆಯನ್ನು ಇಡೀ ವಿಶ್ವವೇ ಮುಕ್ತ ಕಂಠದಿಂದ ಪ್ರಶಂಸಿಸುತ್ತಿದೆ. ಭಾರತವನ್ನು ತನ್ನ ನಿಜವಾದ ಗೆಳೆಯ ಎಂದು ಅಮೆರಿಕಾ ಬಣ್ಣಿಸಿದರೆ, ಬ್ರೆಜಿಲ್ ದೇಶದ ಅಧ್ಯಕ್ಷ ಜೈರ್ ಬೋಲ್‌ಸೋನ್ಯಾರೋ ಅವರು ರಾಮಾಯಣದಲ್ಲಿ ಉಲ್ಲೇಖಿಸಿರುವ ಸಂಜೀವಿನಿ ಪರ್ವತವನ್ನು ಹೊತ್ತೊಯ್ಯುತ್ತಿರುವ ಹನುಮನ ಸಾಹಸಗಾಥೆಯ ಚಿತ್ರವನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬಿಂಬಿಸಿ ಭಾರತಕ್ಕೆ ಧನ್ಯವಾದ ಅರ್ಪಿಸಿದ್ದಾರೆ.

ಗಣರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ನಡೆದ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ವಿಜಯನಗರ : ವಿಜಯದ ನಗರ ಎಂಬ ವಿಷಯಾಧಾರಿತ ಸ್ತಬ್ಧಚಿತ್ರವು ಇಡೀ ದೇಶದ ಗಮನಸೆಳೆದದ್ದು ವಿಶೇಷ ಮಾತ್ರವಲ್ಲ, ನಮ್ಮೆಲ್ಲರಲ್ಲೂ ಅಭಿಮಾನ ಮೂಡಿಸುವ ವಿಚಾರ. ಅಲ್ಲವೇ ?


**ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿಶೇಷತೆಗಳೊಂದಿಗೆ ಭೇಟಿಯಾಗೋಣ.**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Download From : www.kpscvaani.com



# ರೈತಪರ ಸರ್ಕಾರದಿಂದ ರೈತ ಸ್ನೇಹಿ ಕಾಯಿದೆಗಳು



Download From : www.kpscvaani.com

## ಕೇಂದ್ರದ ಕೃಷಿ ಕಾಯಿದೆಗಳು, ಭೂಸುಧಾರಣೆ ಕಾಯಿದೆ ಮತ್ತು ಎಪಿಎಂಸಿ ಕಾಯಿದೆಯ ತಿದ್ದುಪಡಿಯಿಂದ ರೈತರಿಗೆ ಆಗುವ ಲಾಭ, ಅನುಕೂಲಗಳನ್ನು, ಸ್ವತಃ ಕೃಷಿ ಸಚಿವರಾದ ಬಿ.ಸಿ.ಪಾಟೀಲ್ ಅವರೇ ಈ ಲೇಖನದ ಮೂಲಕ ಮಾಹಿತಿಯನ್ನು ನೀಡಿದ್ದಾರೆ.



ನಿರೂಪಣೆ : ಸಂಧ್ಯಾ ಯು. ಎಲ್. ಸೊರಬ

ಸಾಮಾನ್ಯವಾಗಿ ಯಾವುದಾದರೊಂದು ವ್ಯವಸ್ಥೆಯಲ್ಲಾಗಲೀ ಕ್ಷೇತ್ರದಲ್ಲಾಗಲೀ ಬದಲಾವಣೆಯಾಗಬೇಕಾದರೆ ದಿಟ್ಟ ಹೆಜ್ಜೆ ಮುಖ್ಯ. ಅದಕ್ಕೆ ದೃಢ ನಿರ್ಧಾರ, ಅಚಲ ವಿಶ್ವಾಸವೂ ಮುಖ್ಯ. ಹೊಸತನವೆಂದರೆ ಹಳೆಯದನ್ನು ಸಂಪೂರ್ಣ ಬದಲಾಯಿಸುವುದಂತಲ್ಲ. ಕಾಲಕ್ಕೆ ತಕ್ಕಂತೆ ಕಾಯಿದೆಗಳನ್ನು ತಿದ್ದುಪಡಿ ಮಾಡುವ ಮೂಲಕ ಜನಸ್ನೇಹಿಯಾಗಿ ಮಾಡುವುದು ಮುಖ್ಯವಾಗುತ್ತದೆ.

ಹಿಂದಿನಿಂದಲೂ ಹೇಳಿಕೊಂಡು ಬಂದಂತೆಯೇ ಈಗಲೂ ನಮ್ಮದು ರೈತ ಪರ ಸರ್ಕಾರ. ಯಾವುದೇ ಹೊಸ ತೀರ್ಮಾನ ತೆಗೆದುಕೊಂಡರೂ ಅದರಲ್ಲಿ ರೈತರ ಹಿತ ಅಡಗಿರುತ್ತದೆ. ಇದರಲ್ಲಿ ರಾಜ್ಯವಾಗಲೀ ಕೇಂದ್ರ ಸರ್ಕಾರವಾಗಲೀ ಹೊರತೇನಿಲ್ಲ. ಸರ್ಕಾರ ಕೃಷಿಗೆ ಸಂಬಂಧಿಸಿದ ಮೂರು ಕಾಯಿದೆಗೆ ತಿದ್ದುಪಡಿ ಮಾಡಿರುವುದು ಮತ್ತು ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಕಾಯ್ದೆಗಳು ಇದರಿಂದೇನು ಹೊರತಾಗಿಲ್ಲ. ಈ ಕಾಯಿದೆಗಳು ರೈತರ ಹಿತವನ್ನು ಕಾಪಾಡುವುದಲ್ಲದೇ ಅವರ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತವೆ. ನನ್ನ ಬೆಳೆ ನನ್ನ ಹಕ್ಕು ಎಂದು ನಮ್ಮ ಅನ್ನದಾತ ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ವಿರೋಧ ಪಕ್ಷಗಳು ರೈತ ಸಂಘಟನೆಗಳು ಹಲವು ವರ್ಷಗಳಿಂದ ಕೇಳುತ್ತಿದ್ದನ್ನೇ ನೂತನ ಕೃಷಿ ಕಾಯಿದೆಗಳು ಒಳಗೊಂಡಿವೆ.

ಈ ಕಾಯಿದೆಗಳು ದಿಢೀರನೇ ಆಗಿ ರೂಪುಗೊಂಡ ಕಾಯಿದೆಗಳಲ್ಲ ಎಂಬುದು ಕಟು ವಾಸ್ತವ. ಹಳೆಯ ತುಕ್ಕು ಹಿಡಿದ ಕಾನೂನುಗಳಿಂದ





Download From : www.kpscvaani.com



**ಕೃಷಿಗೆ ಸಂಬಂಧಿಸಿದ ಮೂರು ಕಾಯಿದೆಗೆ ತಿದ್ದುಪಡಿ ಮಾಡಿರುವುದು ಮತ್ತು ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಕಾಯ್ದೆಗಳು ಇದರಿಂದೇನು ಹೊರತಾಗಿಲ್ಲ. ಈ ಕಾಯಿದೆಗಳು ರೈತರ ಹಿತವನ್ನು ಕಾಪಾಡುವುದಲ್ಲದೇ ಅವರ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತವೆ. ನನ್ನ ಬೆಳೆ ನನ್ನ ಹಕ್ಕು ಎಂದು ನಮ್ಮ ಅನ್ನದಾತ ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ.**



ರೈತರನ್ನು ಬಂಧಮುಕ್ತಗೊಳಿಸಲು ಹೊಸ ಕಾಯ್ದೆಗಳು ರೂಪುಗೊಂಡಿವೆ. ಆದರೆ ತಪ್ಪು ಪ್ರತಿಪಾದನೆ ತಪ್ಪು ತಿಳುವಳಿಕೆಗಳು ರೈತನನ್ನು ಆತಂಕಗೊಳಿಸುವಂತೆ ಮಾಡಿವೆ. ಅಂದ ಹಾಗೆ ಕೇಂದ್ರ ತಂದಿರುವ ಈ ಮೂರು ಕಾಯಿದೆಗಳು ಎರಡು ದಶಕಕ್ಕೂ ಹೆಚ್ಚುಕಾಲದಿಂದ ನೆನೆಗುದಿಯಲ್ಲಿ ಬಿದಿದ್ದ ಕಾಯಿದೆಗಳಿಗೆ ಸುಧಾರಣಾ ಕ್ರಮಗಳಾಗಿವೆ.

2000ದ ಇಸವಿಯಿಂದಲೂ ಈ ಕಾಯಿದೆಗಳು ಬದಲಾವಣೆಗಾಗಿ ರೂಪುಗೊಳ್ಳುತ್ತಾ ವಿವಿಧ ಸರ್ಕಾರಗಳ ಅವಧಿಯಲ್ಲಿ  ಗಿರಕಿ ಹೊಡೆಯುತಲೇ ಇತ್ತು. ಆದರೆ ಈ ವರ್ಷ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದೃಢ ಸಂಕಲ್ಪದಿಂದ ಗಟ್ಟಿ ಮನಸು ಮಾಡಿ ರೈತರ ಆದಾಯವನ್ನು 2022 ರಷ್ಟೊತ್ತಿಗೆ ದ್ವಿಗುಣಗೊಳಿಸುವ ಉದ್ದೇಶದಿಂದ ಜಾರಿಗೆ ತಂದಿದೆ. ಇದು ಮೆಚ್ಚಿಕೊಳ್ಳಬಹುದಾದ ವಿಚಾರವೇ ಹೊರತು ಪ್ರತಿಭಟಿಸುವಂತಹದಲ್ಲ.

ನಮ್ಮ ಸಂವಿಧಾನದ ಪ್ರಕಾರ ಕೃಷಿಯೆನ್ನುವುದು ಆಯಾ ರಾಜ್ಯಗಳ ವಿಷಯವಾದರೂ ಕೃಷಿಯ ಪ್ರಾಥಮಿಕ ಜವಾಬ್ದಾರಿ ರಾಜ್ಯಗಳ ಮೇಲಿದ್ದರೆ, ಈ ವಲಯಕ್ಕೆ ನಿಯಂತ್ರಣ ಚೌಕಟ್ಟನ್ನು ತರುವ ಕೆಲಸ ಕೇಂದ್ರದ್ದಾಗಿರುತ್ತದೆ. ಕೃಷಿಯಲ್ಲಿ ಸುಧಾರಣೆಗಳನ್ನು ತರುವುದು ಅಷ್ಟು ಸುಲಭದ ಮಾತಲ್ಲ. ಕೃಷಿಗೆ ರಾಷ್ಟ್ರೀಯ ಮಟ್ಟದ ಕಾರ್ಯತಂತ್ರದ ಅವಶ್ಯಕತೆಯಿದೆ. ಇದಕ್ಕೆ ಎಲ್ಲರ ಸಹಕಾರವೂ ಮುಖ್ಯವಾಗಿದೆ. ಇಂದಿನ ಡಿಜಿಟಲ್ ತಂತ್ರಜ್ಞಾನದ ಪ್ರಗತಿಯಿಂದ ರೈತರನ್ನು ಗ್ರಾಹಕರೊಂದಿಗೆ ಸಂಪರ್ಕಿಸುವುದು ಬಹಳ ನಿರ್ಣಾಯಕ. ಬೇಡಿಕೆ ಮತ್ತು ಪೂರೈಕೆಗೆ ಹೊಂದಾಣಿಕೆಯಾಗುವಂತೆ ರೈತರಿಗೆ ಉತ್ತಮ ಬೆಲೆಗಳನ್ನು ನೀಡುವುದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಉದ್ದೇಶವಾಗಿದೆ. ಇದಕ್ಕೊಂದು ಉತ್ತಮ ವೇದಿಕೆಯನ್ನು ಈ ಕೃಷಿ ಸುಧಾರಣಾ ತಿದ್ದುಪಡಿ ಕಾಯಿದೆಗಳು ಮಾಡುತ್ತಿದ್ದು, ಇದರ ಕುರಿತು ರೈತರಲ್ಲಿ ಜಾಗೃತಿ ಮತ್ತು ನಿಖರ ಮಾಹಿತಿ ಮೂಡಿಸಲು ಸರ್ಕಾರ ಪ್ರಯತ್ನಿಸುತ್ತಿದೆ.

ಹಳೆಯ ಕೃಷಿ ಮಸೂದೆಗಳಿಂದಾಗಿ ಕೃಷಿ ಉತ್ಪನ್ನವು ಗ್ರಾಹಕರನ್ನು ತಲುಪುವಷ್ಟರಲ್ಲಿ ಸುಮಾರು 8 ರಿಂದ 9 ಕೈಗಳಿಗೆ ಬದಲಾಗುತ್ತಿದೆ. ಹೀಗಾಗಿ  ಗ್ರಾಹಕರು ಪಾವತಿಸುವ ಬೆಲೆಯಲ್ಲಿ ಶೇ.30 ರಷ್ಟನ್ನೂ ಸಹ ರೈತ ಪಡೆಯುವುದು ಒಮ್ಮೊಮ್ಮೆ ಕಷ್ಟಸಾಧ್ಯವಾಗುತ್ತದೆ. ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಕಡ್ಡಾಯಗೊಳಿಸಿರುವ ಮಂಡಿಗಳು, ಗುಣಮಟ್ಟದಲ್ಲದ ಮೌಲ್ಯಮಾಪನ, ದೋಷಯುಕ್ತ ತೂಕ ವ್ಯವಸ್ಥೆ ಇತ್ಯಾದಿಗಳ ಜೊತೆ ಮಧ್ಯವರ್ತಿಗಳ ಕಬಂಧಬಾಹುವಿಗೆ ರೈತ ಒಳಗಾಗಿದ್ದಾನೆ. ಇದೆಲ್ಲವುಗಳನ್ನು ಪರಿಗಣಿಸಿ ರೈತನ ಬಾಳಿಗೆ ಬೆಳಕಾಗಲು ಕೃಷಿ ಕ್ಷೇತ್ರದಲ್ಲಿ ಕ್ರಾಂತಿದಾಯಕ ಬದಲಾವಣೆ ಮಾಡಲು ಈ ತಿದ್ದುಪಡಿಯನ್ನು ಸರ್ಕಾರ ಜಾರಿಗೊಳಿಸಿದೆ. ಕೃಷಿ ಕ್ಷೇತ್ರದಲ್ಲಿ ಈ ಕಾಯಿದೆ ತಿದ್ದುಪಡಿಗಳು ಮಹತ್ವದ ಪಾತ್ರವಹಿಸುತ್ತಿದ್ದು, ರೈತನ ಬಾಳಿಗೆ ಹೊಸ ದಿಕ್ಸೂಚಿಯನ್ನೇ ನೀಡಬಲ್ಲವು. ಆದರೆ ವಿಪಕ್ಷಗಳು ತಪ್ಪು ಮಾಹಿತಿ ನೀಡಿ ಕೃಷಿ ಸುಧಾರಣೆಯನ್ನು ರಾಜಕೀಯಕರಣಗೊಳಿಸುತ್ತಿರುವುದು ವಿಷಾದನೀಯ.



Download From : www.kpscvaani.com

ರೈತ ಮಸೂದೆಗಳು ದೂರದೃಷ್ಟಿಯ ಯೋಜನೆಗಳಾಗಿದ್ದು, ರೈತರಿಗೆ ಯಾವುದೇ ರೀತಿಯ ಅಡೆತಡೆಗಳಿಲ್ಲ. ದೇಶದ ಅನೇಕ ರಾಜ್ಯಗಳ ರೈತರು ಈ ಮಸೂದೆಗಳನ್ನು ಸ್ವೀಕರಿಸಿದ್ದು, ಅವುಗಳ ಉತ್ತಮ ಪ್ರತಿಫಲವನ್ನು ಎದುರು ನೋಡುತ್ತಿದ್ದಾರೆ. ನಮ್ಮ ಅನ್ನದಾತರಿಗೆ ಅನುಮಾನಗಳೇನಾದರು ಇದ್ದರೆ ನೇರವಾಗಿ ಸರ್ಕಾರದೊಂದಿಗೆ ಚರ್ಚಿಸಬಹುದು.

ಕೇಂದ್ರದ ಕೃಷಿ ತಿದ್ದುಪಡಿ ಕಾನೂನುಗಳು 20 ವರ್ಷಗಳ ಹಿಂದೆಯೇ ಬರಬೇಕಿತ್ತು. ಹಿಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ಆಗಿನ ವಿತ್ತಸಚಿವರಾಗಿದ್ದ ಡಾ.ಮನಮೋಹನ್ ಸಿಂಗ್ ಅವರ ಸಹಕಾರದಿಂದ 1991 ರಲ್ಲಿ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆ ತರಲಾಯಿತು. ಆದರೆ ಆ ಬದಲಾವಣೆಯಿಂದ ಕೃಷಿ ಕ್ಷೇತ್ರದಲ್ಲಿ ಅಂತಹ ಬದಲಾವಣೆಯೇನೂ ಆಗಲಿಲ್ಲ. ತರಲಿಲ್ಲ. ರೈತ ಎಪಿಎಂಸಿ ಮಂಡಿಗಳ ಮೂಲಕವೇ ತನ್ನ ಬೆಳೆಗಳನ್ನು ಮಾರಾಟ ಮಾಡಬೇಕೆಂಬ ನಿಯಮದಿಂದ ತನ್ನ ಬೆಳೆಗೆ ತಾನೇ ಬೆಲೆ ನಿಗದಿ ಮಾಡುವ ಸ್ವಾತಂತ್ರವೂ ಇಲ್ಲದಂತಾಯಿತು. ಆದರೀಗ ಎಪಿಎಂಸಿ ಕಾಯಿದೆಯಲ್ಲಿನ ಹೊಸ ತಿದ್ದುಪಡಿ ಮಧ್ಯವರ್ತಿಗಳ ಹಾವಳಿ ತಪ್ಪಿಸಿ ರೈತನ ಬೆಳೆ ಮಾರಾಟಕ್ಕೆ ಸರ್ವಸ್ವತಂತ್ರ ಸಿಕ್ಕಂತಾಗಿದೆ.

ಯಾರೂ ಯಾರಿಗೂ ಸಹ ಸ್ವತಂತ್ರ ಕೊಡಲು ಸಾಧ್ಯವಿಲ್ಲ. ಸ್ವತಂತ್ರ ಎನ್ನುವುದು ಪ್ರತಿಯೊಬ್ಬನ ಹಕ್ಕು ಎನ್ನುವ ಮಾತಿದೆ.

ಅಕ್ಕಿ, ಗೋಧಿ, ಹತ್ತಿ ಮತ್ತು ಕೆಲವು ಎಣ್ಣೆಕಾಳುಗಳಂತಹ ಬೆಳೆಗಳು ಜಾಗತಿಕ ಬೆಳೆಗಳಾಗಿವೆ ಮತ್ತು ಅವುಗಳ ಬೆಲೆಗಳು ಜಾಗತಿಕ ಬೇಡಿಕೆ-ಪೂರೈಕೆ ಸಂದರ್ಭಗಳಿಂದ ಪ್ರಭಾವಿತವಾಗಿರುತ್ತದೆ. ಇತರೆ ಬೆಳೆಗಳು ಸ್ಥಳೀಯ ಬೆಳೆಗಳಾಗಿದ್ದು, ಇವುಗಳ ಬೆಲೆಗಳನ್ನು ದೇಶೀಯ ಬೇಡಿಕೆ ಮತ್ತು ಪೂರೈಕೆ ಪರಿಸ್ಥಿತಿಗಳಿಂದ ನಿರ್ಧರಿಸಲಾಗುತ್ತದೆ.

ಸದ್ಯ ಚರ್ಚೆಯಲ್ಲಿರುವ ಕೇಂದ್ರದ ಕೃಷಿ ತಿದ್ದುಪಡಿ ಕಾಯಿದೆಗಳಲ್ಲಿ ಮೊದಲನೆಯದು ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ಮಸೂದೆ 2020 ರ ರೈತ (ಸಬಲೀಕರಣ ಮತ್ತು ಸಂರಕ್ಷಣೆ) ಒಪ್ಪಂದ. ಇದರ ಪ್ರಕಾರ ರೈತ ನೇರವಾಗಿ ಕೊಳ್ಳುಗನೊಂದಿಗೆ ನೇರ ಒಪ್ಪಂದ ಮಾಡಿಕೊಳ್ಳಬಹುದು. ಯಾವುದೇ ದಲ್ಲಾಳಿಯ ಅಗತ್ಯವಿಲ್ಲದೇ ತನಗಿಷ್ಟ ಬಂದವರ ಜೊತೆ ಒಪ್ಪಂದ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನೂ, ಒಂದು ವೇಳೆ ಮೋಸವಾದರೆ ಅದನ್ನು ಕೋರ್ಟಿನಲ್ಲಿ ಪ್ರಶ್ನಿಸುವ ಅಧಿಕಾರವನ್ನೂ ಕೊಡುತ್ತದೆ. ನೀವು ಎಪಿಎಂಸಿ ಮೂಲಕ ಮಾರಿಲ್ಲ ಹಾಗಾಗಿ ನಿಮಗೆ ನ್ಯಾಯ ಕೊಡಿಸಲು ಸಾಧ್ಯವಿಲ್ಲ ಎಂದು ಯಾರೂ ಹೇಳಲಾಗುವುದಿಲ್ಲ.




**ರೈತ ಮಸೂದೆಗಳು ದೂರದೃಷ್ಟಿಯ ಯೋಜನೆಗಳಾಗಿದ್ದು, ರೈತರಿಗೆ ಯಾವುದೇ ರೀತಿಯ ಅಡೆತಡೆಗಳಿಲ್ಲ. ದೇಶದ ಅನೇಕ ರಾಜ್ಯಗಳ ರೈತರು ಈ ಮಸೂದೆಗಳನ್ನು ಸ್ವೀಕರಿಸಿದ್ದು, ಅವುಗಳ ಉತ್ತಮ ಪ್ರತಿಫಲವನ್ನು ಎದುರು ನೋಡುತ್ತಿದ್ದಾರೆ. ನಮ್ಮ ಅನ್ನದಾತರಿಗೆ ಅನುಮಾನಗಳೇನಾದರು ಇದ್ದರೆ ನೇರವಾಗಿ ಸರ್ಕಾರದೊಂದಿಗೆ ಚರ್ಚಿಸಬಹುದು.**

ಅಂದಹಾಗೆ ಈ ಕಾಯಿದೆ ಕೇವಲ ಕೃಷಿಯನ್ನು ಮಾತ್ರವಲ್ಲ, ಕೃಷಿ ಸೇವೆಗೂ ಅನ್ವಯವಾಗುತ್ತದೆ. ಅಂದರೆ contract farming ಕೂಡಾ ಇದರಡಿ ಬರುತ್ತದೆ. ಅಂದರೆ ಒಬ್ಬ ರೈತ ಒಂದೇ ಕಂಪನಿಯೊಂದಿಗೆ ದೀರ್ಘಕಾಲದ ಒಪ್ಪಂದ ಮಾಡಿಕೊಂಡು, ಆ ಕಂಪನಿಯ ಬೇಡಿಕೆ ಬೆಳೆಯನ್ನು ಬೆಳೆದು, ಯೋಗ್ಯ ಬೆಲೆಗೆ ಬೆಳೆಯನ್ನು ಆ ಕಂಪನಿಯವರಿಗೆ ನೇರವಾಗಿ ಸರಬರಾಜು ಮಾಡಬಹುದು. ಇದರಿಂದಾಗಿ ತಾನು ಬೆಳೆದ ಬೆಳೆಯನ್ನು ಯಾರು, ಯಾವ ಬೆಲೆಗೆ ಕೊಳ್ಳುತ್ತಾರೋ ಎಂಬ ರೈತನ ಭಯ ಮಾಯವಾಗುತ್ತದೆ. ಹಾಗೂ ಕಾರ್ಪೊರೇಟ್ ಕಂಪನಿಗಳು ಆದಷ್ಟೂ ದಲ್ಲಾಳಿಗಳನ್ನು ದೂರವಿಡುವುದರಿಂದ ಪೂರ್ತಿ ನ್ಯಾಯ ರೈತನಿಗೇ.

ಹೀಗೆ ಈ ಕಾಯ್ದೆ ರೈತನಿಗೆ ತನ್ನ ಮಾರಾಟಗಾರನನ್ನು ಆರಿಸಿಕೊಳ್ಳುವ empowerment ಅನ್ನೂ, ಮೋಸಹೋಗದಂತೆ protection ಅನ್ನೂ (ಒಂದು ವೇಳೆ ಮೋಸ ಹೋದರೂ ಆ ಗಲಾಟೆಗಳನ್ನು ಪರಿಹರಿಸಿಕೊಳ್ಳುವ dispute settlement mechanism ಅನ್ನೂ) ಒದಗಿಸುತ್ತದೆ.

ತಿದ್ದುಪಡಿ ಕಾಯಿದೆಗಳಲ್ಲಿ ಎರಡನೆಯದು The Farming Produce Trade and Commerce (Promotion and Facilitation) Bill 2020 ಇದರ ಪ್ರಕಾರ, ಕೃಷಿ ಉತ್ಪನ್ನಗಳನ್ನು ಮಾರಲು ಅತ್ಯಗತ್ಯವಾಗಿದ್ದ ಮಂಡಿ ಅಥವಾ



Download From : www.kpscvaani.com



ಎಪಿಎಂಸಿ ಯಾರ್ಡಿಗೇ ಹೋಗುವ ಅಗತ್ಯ ಇನ್ನು ಮುಂದೆ ರೈತನಿಗೆ ಬರುವುದಿಲ್ಲ.

ರೈತ ತನ್ನ ಉತ್ಪನ್ನವನ್ನು ರಾಜ್ಯದೊಳಗೆ ಎಲ್ಲಿ ಬೇಕಾದರೂ ಮಾತ್ರವಲ್ಲ ರಾಜ್ಯದಿಂದ ಹೊರಗೂ ಸಹ ಎಲ್ಲಿ ಬೇಕಾದರೂ ಮಾರಬಹುದು. ರೈತನ ಅಂಗೈಗೆ ಬೆಂಬಲ ಬೆಲೆ ಎಂಬ ಬೆಲ್ಲ ಸವರಿ, ಆಯಾ ರಾಜ್ಯ ಸರ್ಕಾರಗಳು ತಮ್ಮ ರೈತರನ್ನು ತಮ್ಮ ಅಂಗೈಯಲ್ಲಿಟ್ಟು ಕೊಂಡಿದ್ದರು. ರೈತರೂ ಸಹ ಬೆಂಬಲ ಬೆಲೆ ಎಂಬುದು ಸರ್ಕಾರದಿಂದ ಬರುವ ಹಣವಾದ್ದರಿಂದ ಅದನ್ನು ನಂಬಿ ಬೆಳೆಗಳನ್ನು ಬೆಳೆಯಬಹುದಿತ್ತು. ಇದರಿಂದ ತಾವು ಬೆಳೆದ ಬೆಳೆಯು ಮಾರಾಟವಾಗುವ ಗ್ಯಾರಂಟಿಯೂ ಇತ್ತು. ಆದರೆ ಈ ಕಾಯ್ದೆಯ ಪ್ರಕಾರ ಆತ ಎಲ್ಲಿ ಬೇಕಾದರೂ ಮಾರಬಹುದಾದ್ದರಿಂದ, ಸರ್ಕಾರದ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆಗೆ ಹೊರ ರಾಜ್ಯದ ಕೊಳ್ಳುಗನೊಬ್ಬ ಸಿಕ್ಕರೆ (ಉದಾಹರಣೆಗೆ: ಪಂಜಾಬಿನ ಆಲೂಗೆಡ್ಡೆ ರೈತನಿಗೆ, ಮಹಾರಾಷ್ಟ್ರದಲ್ಲಿರುವ ಚಿಪ್ಸ್ ಕಂಪನಿ, ಮೊದಲನೇ ಕಾಯ್ದೆಯ ಪ್ರಕಾರ ನೇರ ಒಪ್ಪಂದ ಮಾಡಿಕೊಂಡರೆ) ರೈತನಿಗೆ ಖಂಡಿತಾ ಜಾಕ್-ಪಾಟ್. ರೈತನ ಆದಾಯಕ್ಕೆ ತೆರಿಗೆಯೂ ಬರುವುದಿಲ್ಲ.

ಮಂಡಿಯಿಂದ ಹೊರಗೆ ಮಾರಿದರೆ ಬೆಂಬಲ ಬೆಲೆ ಸಿಗುವುದಿಲ್ಲವಾದರೂ ಬೆಂಬಲ ಬೆಲೆಯ ಮೇಲೆ ಅವಲಂಬಿತವಾಗಿರುವ ಸಣ್ಣ ರೈತರಿಗೆ ಈಗಲೂ (ಅಂದರೆ ಕಾಯ್ದೆ ಜಾರಿಗೆ ಬಂದ ನಂತರವೂ) ಎಪಿಎಂಸಿ ಅಥವಾ ಮಂಡಿಯಲ್ಲಿ ಮಾರುವ ಅವಕಾಶ ಇದ್ದೇ ಇದೆ. ಬೆಂಬಲ ಬೆಲೆಯೇ ಇಲ್ಲದ, ಒಂದುವಾರದೊಳಗೆ ಹಾಳಾಗಿ ಹೋಗುವ ಕೊತ್ತಂಬರಿಸೊಪ್ಪು ಮಾರುವ ರೈತ, ಅಥವಾ ಸರ್ಕಾರದ ಬೆಂಬಲಬೆಲೆ ಇದ್ದರೂ ಬರೀ ಎರಡು ಟನ್ ತೊಗರಿಬೇಳೆ ಬೆಳೆಯುವ ಸಣ್ಣರೈತ ದೊಡ್ಡ ಕೊಳ್ಳುಗರನ್ನು ಹುಡುಕುತ್ತಾ ಕೂರುವ ಅಗತ್ಯವಿಲ್ಲ. ಬೆಳೆಯನ್ನು ಆತ ಮಂಡಿಗೆ ಮಾರಿ ತನ್ನ ಲಾಭವನ್ನು ಮೊದಲಿನಂತೆಯೇ ಕಾಪಾಡಿಕೊಳ್ಳಬಹುದು. ಇದರಲ್ಲೂ ಕೂಡ ನಾವು ತಿಳಿಯಬೇಕಾದದ್ದೇನೆಂದರೆ ಸಣ್ಣ ರೈತರು ಎಪಿಎಂಸಿಗೆ ಹೋಗುವುದು ಈಗಲೂ ಕಡಿಮೆಯೇ. ಅವರು ಹೊರಗಡೆಯೇ ಮಾರಾಟ ಮುಗಿಸುವವರು. ಆದರೆ ಈಗ ಹೊಸ ಕಾಯ್ದೆಯ ಪ್ರಕಾರ ಒಂದೇ ಊರಿನಲ್ಲಿರುವ ಈ ಸಣ್ಣ ರೈತರೆಲ್ಲಾ ಒಟ್ಟಾಗಿ ಸಹಕಾರ ಸಂಘವನ್ನು ಮಾಡಿಕೊಂಡು, collective bargaining ಮೂಲಕ ಈಗಲೂ ಖಾಸಗಿಯವರಿಗೆ ಮಾರಬಹುದು. ಉಳಿದಂತೆ ದೊಡ್ಡ ರೈತರು ಹಾಗೂ ದೀರ್ಘಕಾಲದ ಬಾಳಿಕೆ ಇರುವ ಉತ್ಪನ್ನಗಳನ್ನು ಖಾಸಗಿ ಕಂಪನಿಗಳಿಗೆ ನೇರವಾಗಿ ಮಾರಬಹುದು. ಹಾಗೂ ಆ ಮಾರಾಟದ ಮೊತ್ತಕ್ಕೆ ರಾಜ್ಯ ಸರ್ಕಾರ ತೆರಿಗೆಯನ್ನು ವಿಧಿಸುವುದಿಲ್ಲ. ಇದರಿಂದ ದೊಡ್ಡ ರೈತರಿಗೆ ಹಾಗೂ ಸಣ್ಣ ರೈತರಿಗೆ ಕೂಡಾ ಮಾರಲು ಹೆಚ್ಚಿನ ಅವಕಾಶಗಳು ಸಿಕ್ಕಂತಾಗುತ್ತದೆ.

ಈ ಎರಡನೇ ಕಾಯ್ದೆ ಮುಕ್ತ ಮಾರುಕಟ್ಟೆಯ ಜೊತೆಗೆ ದೊಡ್ಡ ರೈತರಿಗೆ ಸರ್ಕಾರದ ರಿಯಾಯಿತಿ



Download From : www.kpscvaani.com

ಬೆಂಬಲಬೆಲೆಯನ್ನು ಕಾಯ್ದುಕೊಂಡು ಕೂರುವ ಅಗತ್ಯವನ್ನೂ ನಿಲ್ಲಿಸುತ್ತದೆ. ಇದರ ಮೂಲಕ ಸರ್ಕಾರಕ್ಕೇ ನೇರವಾಗಿ ಉತ್ಪನ್ನಗಳನ್ನು ಮಾರುತ್ತಿರುವ ಹಾಗೂ ನಿಜಕ್ಕೂ ಸಬ್ಸಿಡಿಯ ಅಗತ್ಯವಿರುವ ಅಂದರೆ ಸಣ್ಣ ರೈತರೆಡೆಗೆ ಸರ್ಕಾರದ ಗಮನವನ್ನು ಕೇಂದ್ರೀಕರಿಸಲು ದಾರಿಮಾಡಿ ಕೊಡುತ್ತದೆ.

ಈ ಎರಡು ಕಾಯ್ದೆಗಳು ಒಟ್ಟಾಗಿ "ಸರ್ಕಾರಗಳನ್ನು ಕೃಷಿ ವ್ಯವಹಾರದಿಂದ ಹೊರಗಿಡುವತ್ತ" ದಾರಿ ಮಾಡಿಕೊಡುತ್ತವೆ. ನಿಧಾನವಾಗಿ ರೈತನಿಗೆ ಮಾರುಕಟ್ಟೆ, ಬೇಡಿಕೆ-ಪೂರೈಕೆ, ತಂತ್ರಜ್ಞಾನಗಳ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳುವ ಅಗತ್ಯವೂ ಹೆಚ್ಚುತ್ತದೆ. ಅದಕ್ಕೆ ಬೇಕಾದ ಸವಲತ್ತುಗಳನ್ನೂ ಸರ್ಕಾರ ಮತ್ತು ಖಾಸಗೀ ಕಂಪನಿಗಳು ಒದಗಿಸಿಗೊಡುತ್ತವೆ. ಆ ಮೂಲಕ ರೈತ ದಿನಕಳೆದಂತೆ ರೈತೋದ್ಯಮಿ, ರೈತ ವ್ಯಾಪಾರಿ ಆಗುವತ್ತ ನೈಸರ್ಗಿಕ ದಾರಿಯನ್ನು ಮಾಡಿಕೊಡುತ್ತವೆ.

ಇನ್ನು ಮೂರನೆಯದು ಅಗತ್ಯ ಸರಕುಗಳ (ತಿದ್ದುಪಡಿ) ಮಸೂದೆ 2020 (The Essential Commodities (Amendment) Bill, 2020) ಇದರ ಪ್ರಕಾರ ಸರ್ಕಾರ ಅಗತ್ಯ ಸರಕುಗಳ ಪಟ್ಟಿಯನ್ನು ಅವುಗಳ ಬೆಲೆಯೇರಿಕೆ ಮತ್ತು ಇಳಿಕೆಗನುಗುಣವಾಗಿ ಬದಲಾಯಿಸಬಹುದು. ಅಂದರೆ ನಾಳೆ ಈರುಳ್ಳಿಯ ಬೆಲೆ ನೂರಾಹತ್ತಕ್ಕೆ ಹೋದರೆ ಸರ್ಕಾರ ಅದನ್ನು ಅಗತ್ಯ ಸರಕು ಎಂದು ಘೋಷಿಸಿ, ಕ್ರಿಮಿನಲ್ ಕಾಯ್ದೆಯ ಪ್ರಕಾರ ಗೋದಾಮಿನಲ್ಲಿರುವ ಸರಕನ್ನು ಹೊರತೆಗೆದು ಬೆಲೆಯನ್ನು ಇಳಿಸಲು ಸಹಕಾರಿಯಾಗಬಹುದು. ಬೇಗನೇ ಕೊಳೆಯಲಾರದ ಪದಾರ್ಥಗಳ ಬೆಲೆ 50%ಗಿಂತ ಹೆಚ್ಚಾದರೆ, ಹಾಗೂ ಬೇಗನೇ ಕೊಳೆಯುವ ಪದಾರ್ಥಗಳ ಬೆಲೆ 100%ಗಿಂತ ಹೆಚ್ಚಾದರೆ ಸರ್ಕಾರ ಆ ಕ್ಷಣವೇ ಮಧ್ಯಪ್ರವೇಶಿಸಿ ಆ ಉತ್ಪನ್ನವನ್ನು ಅಗತ್ಯ ಸರಕು ಎಂದು ಘೋಷಿಸಿ, ಬೆಲೆಯೇರಿಕೆಯನ್ನು ನಿಯಂತ್ರಿಸಬಹುದು.

**ಬೆಲೆ ಕುಸಿತ ಸಂದರ್ಭದಲ್ಲಿ ರೈತರಿಗೆ ಎಪಿಎಂಸಿ ಗೋದಾಮು/ ವೇರ್ ಹೌಸ್‌ಗಳಲ್ಲಿ ರೈತರ ಉತ್ಪನ್ನಗಳನ್ನು ಗೋದಾಮಿನಲ್ಲಿರಿಸಿ ಬೆಲೆ ಬಂದಂತಹ ಸಂದರ್ಭದಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ 3 ತಿಂಗಳ ಬಡ್ಡಿ ರಹಿತ ಅಡಮಾನ ಸಾಲದ ಯೋಜನೆಯನ್ನು ಸಹ ಎಪಿಎಂಸಿ ಜಾರಿ ಮಾಡಿದೆ.**

– ಬಿ.ಸಿ.ಪಾಟೀಲ್
ಕೃಷಿ ಸಚಿವರು
ಕರ್ನಾಟಕ ಸರ್ಕಾರ





Download From : www.kpscvaani.com



# ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಆದ್ಯಾದೇಶ – 2020

1961ರ ಭೂಸುಧಾರಣೆ ಕಾಯ್ದೆಯಲ್ಲಿ ಭೂ ಹಿಡುವಳಿಯ ಗರಿಷ್ಟ ಮಿತಿ ಮತ್ತು ವರ್ಗಾವಣೆ ಕುರಿತು ನಿರ್ಬಂಧನೆಗಳನ್ನು ಹಾಕಿ ಕರ್ನಾಟಕ ಭೂಸುಧಾರಣೆ ತಿದ್ದುಪಡಿ ಕಾಯ್ದೆ 1973ನ್ನು ಕರ್ನಾಟಕ ಕಾಯ್ದೆ ನಂ.1, 1974 ಎಂದು ಜಾರಿಗೆ ತರಲಾಯಿತು. ಮುಂದುವರೆದು, ಸದರಿ ಕಾಯ್ದೆಯಲ್ಲಿ 2015ರಲ್ಲಿ 2 ಲಕ್ಷಕ್ಕೂ ಅಧಿಕ ವರಮಾನ ಹೊಂದಿದ ರೈತನು ಜಮೀನನ್ನು ಖರೀದಿಸಲು ಅವಕಾಶವಿರಲಿಲ್ಲ ಎಂಬುದನ್ನು ಗಮನಿಸಿ, ಗರಿಷ್ಟ ಮಿತಿಯನ್ನು 25 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ, ಯಾವುದೇ ರೈತ ತನ್ನ ವರಮಾನ ರೂ.25 ಲಕ್ಷಕ್ಕೂ ಹೆಚ್ಚಾಗಿದ್ದರೆ, ಆತನಿಗೆ ಜಮೀನನ್ನು ಖರೀದಿಸಲು ಅವಕಾಶವಿಲ್ಲವೆಂದು ತಿದ್ದುಪಡಿ ತರಲಾಯಿತು.

**ಕರ್ನಾಟಕ ಭೂಸುಧಾರಣೆ ಕಾಯ್ದೆ 1961ಕ್ಕೆ ತಿದ್ದುಪಡಿ ತಂದು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಆದ್ಯಾದೇಶ 2020ನ್ನು ರಾಜ್ಯಪಾಲರ ಅನುಮೋದನೆಯೊಂದಿಗೆ ಜಾರಿಗೆ ತರಲಾಯಿತು. ಇದರಂತೆ, 2020ರ ಜುಲೈ ತಿಂಗಳು 13ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಕರ್ನಾಟಕ ಆದ್ಯಾದೇಶ ಸಂಖ್ಯೆ:13, 2020 ಎಂಬುದಾಗಿ 13.07.2020 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಜಾರಿಗೆ ತರಲಾಯಿತು.**

ಕೃಷಿಯಲ್ಲಿ ಅಧಿಕ ಹಣದ ಹೂಡಿಕೆ ತರಲು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡಲು, ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರಲ್ಲಿ ಪ್ರಕರಣ 63 ರಲ್ಲಿರುವ ಭೂಹಿಡುವಳಿಯಲ್ಲಿ ಹೊಂದಿರುವ ಗರಿಷ್ಟ ಮಿತಿಯನ್ನು, ಪ್ರಕರಣ 79(ಎ) ಪ್ರಕಾರ ಭೂಮಿಯನ್ನು ಕೆಲವು ವ್ಯಕ್ತಿಗಳು ಆಕರಣೆ ಮಾಡುವ ನಿರ್ಬಂಧನೆಯನ್ನು, ಪ್ರಕರಣ 79(ಬಿ) ಯಂತೆ ಭೂಮಿಯನ್ನು ಕೆಲವು ವ್ಯಕ್ತಿಗಳು ಹೊಂದುವ ನಿರ್ಬಂಧನೆಯನ್ನು, ಪ್ರಕರಣ 79(ಸಿ) ಯಂತೆ ಕೃಷಿಯೇತರ ವ್ಯಕ್ತಿ ಭೂಮಿ ಖರೀದಿಸುವ ನಿರ್ಬಂಧನೆಯನ್ನು, ಪ್ರಕರಣ 80(ಸಿ) ಯಂತೆ ಕೃಷಿ ಭೂಮಿಯನ್ನು ಕೃಷಿಯೇತರ ಕಾರ್ಯಕ್ಕೆ ವರ್ಗಾಯಿಸುವ ನಿರ್ಬಂಧ, ಹೀಗಿರುವ ಎಲ್ಲಾ ನಿರ್ಬಂಧನೆಗಳನ್ನು ತೆಗೆದುಹಾಕಿ ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಆದ್ಯಾದೇಶ-2020ನ್ನು ಜಾರಿಯಲ್ಲಿ ತರಲಾಯಿತು. ಈ ನೂತನ ಭೂಸುಧಾರಣಾ ಆದ್ಯಾದೇಶದಲ್ಲಿ ಹಿಂದಿನ ಭೂಸುಧಾರಣೆ ಕಾಯ್ದೆ 1961ಕ್ಕೆ ತರಲಾದ ಪ್ರಮುಖ ತಿದ್ದುಪಡಿಯನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

**ಭೂ ಹಿಡುವಳಿ ಹೊಂದುವ ಗರಿಷ್ಠ ಮಿತಿಯನ್ನು ಹೆಚ್ಚಿಸಿರುವುದು:**


ಈ ಆದ್ಯಾದೇಶದಲ್ಲಿ ಭೂ ಸುಧಾರಣೆ ಕಾಯ್ದೆ 1961ರ ಪ್ರಕರಣ 63ರಲ್ಲಿ 63(2)ರಲ್ಲಿ ನಮೂದಿಸಿದ್ದನ್ನು ಬದಲಾಯಿಸಿ ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಯಾರಿಗೆ ಕುಟುಂಬವಿಲ್ಲವೋ ಅಂತವರಿಗೆ ಅಥವಾ ಒಂದು ಕುಟುಂಬಕ್ಕೆ ಪ್ರಸ್ತುತವಿದ್ದ 10 ಯೂನಿಟ್ ಜಮೀನು ಬದಲಾಗಿ 20 ಯೂನಿಟ್ ಜಮೀನು ಹೊಂದುವ ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಒಂದು ಕುಟುಂಬದಲ್ಲಿ 5 ಕ್ಕಿಂತಲೂ ಹೆಚ್ಚು ಸದಸ್ಯರಿದ್ದರೆ, 10 ಯೂನಿಟ್ ಬದಲಾಗಿ 20 ಯೂನಿಟ್ ಹೊಂದುವುದಲ್ಲದೇ ಪ್ರತಿ ಹೆಚ್ಚುವರಿ ಸದಸ್ಯರಿಗೆ 10 ಯೂನಿಟ್ ನಂತರ ಪ್ರತಿ ಸದಸ್ಯರಿಗೆ 4 ಯೂನಿಟ್‌ನಂತೆ ಒಟ್ಟಾರೆ ಕುಟುಂಬಕ್ಕೆ 40 ಯೂನಿಟ್‌ಗೆ ಮೀರದಂತೆ ಜಮೀನು ಹೊಂದುವ ಅವಕಾಶ ಕಲ್ಪಿಸಲಾಗಿದೆ. ಹೀಗೆ ಜಮೀನಿನ ವರ್ಗೀಕರಣದಂತೆ 'ಎ' ಕ್ಲಾಸ್ ಜಮೀನಿಗೆ 20 x 1 ಎಕರೆ 'ಎ' ಕ್ಲಾಸ್ ಜಮೀನು ಅಂದರೆ ಒಟ್ಟು 20 ಎಕರೆ ಅಥವಾ 20 x 5.4 ಎಕರೆ 'ಡಿ' ಕ್ಲಾಸ್ ಜಮೀನು ಅಂದರೆ ಗರಿಷ್ಟ 108 ಎಕರೆ ಡಿ ಕ್ಲಾಸ್ ಜಮೀನು ಹೊಂದಬಹುದಾಗಿದೆ.

**ಕೆಲವು ವ್ಯಕ್ತಿಗಳಿಗೆ ಜಮೀನು ಹೊಂದುವ ನಿರ್ಬಂಧನೆ ತೆಗೆದುಹಾಕುವುದು:**

ಹಿಂದಿನ ಕಾಯ್ದೆ 1961ರ 79(ಎ), 79(ಬಿ), 79(ಸಿ) ಪ್ರಕರಣಗಳಲ್ಲಿ ಕೃಷಿಯೇತರ ವ್ಯಕ್ತಿಗೆ ಜಮೀನು ಹೊಂದುವ ಅವಕಾಶವಿಲ್ಲವಾದ್ದರಿಂದ ಇವುಗಳನ್ನು 1ನೇ ಮಾರ್ಚ್, 1974 ರಿಂದ ಅನ್ವಯವಾಗುವಂತೆ ತೆಗೆದುಹಾಕಿ ಈ ತಿದ್ದುಪಡಿಯಲ್ಲಿ ಯಾವುದೇ ಕೃಷಿಯೇತರ ವ್ಯಕ್ತಿ, ಖಾಸಗಿ ಸಂಸ್ಥೆ, ಸಹಕಾರ ಸಂಸ್ಥೆ, ಶಿಕ್ಷಣ ಸಂಸ್ಥೆಯವರು ನೇರವಾಗಿ




Download From : www.kpscvaani.com



ರೈತರಿಂದ ಜಮೀನನ್ನು ಖರೀದಿಸುವ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಖುಲಾಸೆಗೊಂಡ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ. ಆದರೆ 1ನೇ ಮಾರ್ಚ್ 1974 ರಿಂದ ನ್ಯಾಯಾಲಯದಲ್ಲಿ ಈ ಕುರಿತು ಪ್ರಕರಣಗಳಿದ್ದರೆ ಅವೆಲ್ಲವುಗಳು ಖುಲಾಸೆಗೊಂಡಂತಾಗುತ್ತವೆ. ಈ ಪ್ರಕರಣಗಳಲ್ಲಿ 1974 ರಿಂದ ಇಲ್ಲಿಯವರೆಗೆ ಸುಮಾರು 83,171 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದು, ಅವುಗಳು ಇತ್ಯರ್ಥಗೊಂಡಂತಾಗುತ್ತವೆ.

ರಾಜ್ಯದಲ್ಲಿ ಒಟ್ಟು ಅಂದಾಜು 2 ಲಕ್ಷ ಎಕರೆಗೂ ಅಧಿಕ ಜಮೀನು ಕೃಷಿಗೆ ಯೋಗ್ಯವಿಲ್ಲದೆ ಬೀಳುಬಿದ್ದಿರುವ ಜಮೀನನ್ನು ಕೃಷಿ ಪದವೀಧರರು, ಬೇರೆ ಕ್ಷೇತ್ರದಲ್ಲಿ ದುಡಿದು ನಂತರ ಕೃಷಿ ಕ್ಷೇತ್ರಕ್ಕೆ ಆಕರ್ಷಿತರಾಗುವ ಯುವಕರು, ಆಹಾರ ಸಂಸ್ಕರಣೆ ಘಟಕಗಳನ್ನು, ಶೀತಲ ಗೃಹಗಳನ್ನು ಸ್ಥಾಪಿಸಲು ಇಚ್ಚಿಸುವವರು ಇಂತಹ ಬೀಳು ಜಮೀನನ್ನು ಖರೀದಿಸಿ ಉತ್ಪಾದನೆ ಹೆಚ್ಚಿಸಲು ಅನುಕೂಲವಾಗಬಹುದಾಗಿದೆ. ಆದಾಗ್ಯೂ ಮಾರುವ ಅಥವಾ ಅವರೇ ಇಟ್ಟುಕೊಳ್ಳುವ ಹಕ್ಕು ರೈತರಿಗೆ ಇರುವುದರಿಂದ ಅವರಿಗೆ ಯಾವುದೇ ನಿರ್ಬಂಧವಿಲ್ಲದೇ ಉತ್ತಮ ಬೆಲೆ ಸಿಕ್ಕರೆ ಮಾತ್ರ ಮಾರಾಟ ಮಾಡುವ ನಿರ್ಧಾರ ತೆಗೆದುಕೊಳ್ಳಬಹುದು. ಈಗಾಗಲೇ ಈ ಕಾನೂನು ಜಾರಿಗೆ ಬಂದಿರುವ ರಾಜ್ಯಗಳಲ್ಲಿ ಯಾವುದೇ 'ಎ' ಕ್ಲಾಸ್ ಜಮೀನು ಉಳ್ಳವರು ಖರೀದಿ ಮಾಡಿ ರೈತರು ಬೀದಿಗೆ ಬಂದ ಉದಾಹರಣೆಗಳಿಲ್ಲ.




**ಭೂ ಸುಧಾರಣೆ ಕಾಯ್ದೆ ಪ್ರಕರಣ 80 ಹಾಗೂ 81ಕ್ಕೆ ತಿದ್ದುಪಡಿ ತಂದಿರುವುದು:**

ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿ ಎಂದು ವರ್ಗಾಯಿಸಲು ಪ್ರಕರಣ 80 ರಲ್ಲಿ ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಗಿದೆ. ಆದಾಗ್ಯೂ ವರ್ಗಾವಣೆಗೆ ಕೆಲವು ಜಮೀನುಗಳ ಫಲವತ್ತತೆ ಆಧಾರಿತ ವರ್ಗಗಳನ್ನು ನಿರ್ಬಂಧಿಸಲಾಗಿದೆ. ಇದರಿಂದ ಪ್ರಕರಣ 81ರಲ್ಲಿ ಜಮೀನು ಅಡವು ಇಡುವುದನ್ನು ಕೇವಲ ಕಾಯ್ದೆಯ 81(1)(ಎ) ಮತ್ತು (ಬಿ) ಅನ್ವಯ ನಮೂದಿಸಿದ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಸಹಕಾರ ಸಂಸ್ಥೆಗಳಿಗೆ, ಕಂಪನಿ ಕಾಯ್ದೆಯ ಪ್ರಕಾರ ಪ್ರಾರಂಭಿಸಿದ ಮತ್ತು ಶೇಕಡ 51ರಷ್ಟು ಹೆಚ್ಚು ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಷೇರು ಹೊಂದಿರುವ ಸಂಸ್ಥೆಗಳಿಗೆ ಯಾವುದೇ ಆದಾಯದ ಮಿತಿ ಇಲ್ಲದೇ ಅವಕಾಶ ಮಾಡಿಕೊಡಲಾಗಿದೆ.

**ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ನೀಡಿದ ಜಮೀನಿನ ಹಕ್ಕನ್ನು ಕಾಯ್ದಿರಿಸುವುದು:**

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ರೈತರಿಗೆ ನೂತನ ಆದ್ಯಾದೇಶದಲ್ಲಿ ಪ್ರಕರಣ 80(ಎ) ಯನ್ನು ಸೇರ್ಪಡಿಸಿ ಅದರನ್ವಯ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆ 1978ರಲ್ಲಿ ಕೆಲವು ನಿಗದಿತ ಜಮೀನಿನ ವರ್ಗಾವಣೆಯನ್ನು ನಿಷೇಧಗೊಳಿಸಿದ್ದನ್ನು ಹಾಗೆಯೇ ಮುಂದುವರೆಸಿ ಈ ವರ್ಗದ ರೈತರಿಗೆ ನೀಡಿದ ಭೂಮಾಲಿಕತ್ವದ ಅಧಿಕಾರಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಲಾಗಿದೆ.

ಒಟ್ಟಾರೆಯಾಗಿ ಕೃಷಿಯೇತರ ವ್ಯಕ್ತಿಗೆ ಕೃಷಿ ಜಮೀನನ್ನು ಖರೀದಿಸುವ ಅವಕಾಶ ಈ ನೂತನ ಆದ್ಯಾದೇಶದಲ್ಲಿ ಒದಗಿಸಲಾಗಿದೆ. ಇತ್ತೀಚಿನ ಸರ್ವೋಚ್ಚ ನ್ಯಾಯಾಲಯವು ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಪಾಲಿನ ಅಧಿಕಾರ ನೀಡಿರುವುದರಿಂದ, ಫಲವತ್ತಾದ ಜಮೀನನ್ನು ರೈತರು ಕೂಡಲೇ ಮಾರಾಟ ಮಾಡುವುದು ಅಷ್ಟು ಸುಲಭದ ಮಾತಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ರೈತರ ಹಕ್ಕು ಕಸಿದುಕೊಂಡಿರುವುದಿಲ್ಲ. ಈಗಾಗಲೇ ಪಕ್ಕದ ರಾಜ್ಯದಲ್ಲಿ ಈ ಕಾಯ್ದೆ ಜಾರಿಗೆ ಬಂದರೂ ಕೂಡ ಈ ಕಾಯ್ದೆ ಅವಕಾಶವನ್ನು ದುರ್ಬಳಕೆ ಮಾಡಿಕೊಂಡು ಫಲವತ್ತಾದ ಜಮೀನನ್ನು ರಿಯಲ್ ಎಸ್ಟೇಟ್ ಉದ್ದಿಮೆದಾರರಿಗೆ ಅಥವಾ ಭೂ ಬ್ಯಾಂಕ್ ನಿರ್ಮಿಸುವವರಿಗೆ ಮಾರಾಟ ಮಾಡಿದ ಉದಾಹರಣೆಗಳಿಲ್ಲ. ಶೀಘ್ರವಾಗಿ ಆರ್ಥಿಕ ವ್ಯವಸ್ಥೆ ಬದಲಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಕೃಷಿಯಲ್ಲಿ ಆಸಕ್ತಿ ಉಳ್ಳವರು, ಸಂಸ್ಕರಣ ಘಟಕಗಳನ್ನು ಸ್ಥಾಪಿಸುವವರು ಮುಂದೆ ಬಂದು ಗ್ರಾಮೀಣ ಭಾಗದಲ್ಲಿ ಕೃಷಿ ಆಧಾರಿತ ಉದ್ದಿಮೆಗಳು ಪ್ರಾರಂಭವಾಗಿ ಕೃಷಿಯಲ್ಲಿ ಎಕರೆವಾರು ಉತ್ಪಾದನೆ ಹೆಚ್ಚಾಗಿ ಕೃಷಿ ವಲಯ ಆರ್ಥಿಕ ಸುಧಾರಣೆಯಾಗಲು ಈ ಆದ್ಯಾದೇಶದಿಂದ ಸಾಧ್ಯವಾಗಲಿದೆ. ರಾಜ್ಯಪಾಲರ ಒಪ್ಪಿಗೆ ಪಡೆದು ಈ ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಆದ್ಯಾದೇಶ 2020ನ್ನು 13ನೇ ಜುಲೈ, 2020 ರಿಂದ ಕರ್ನಾಟಕದಲ್ಲಿ ಜಾರಿಗೆ ತರಲಾಗಿದೆ.



Download From : www.kpscvaani.com



**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ತಿದ್ದುಪಡಿಯಿಂದ ರೈತರಿಗೆ ಆಗುವ ಪ್ರಯೋಜನಗಳು:-**

ಕೇಂದ್ರ ಸರ್ಕಾರದ ಮಾದರಿ ಕಾಯಿದೆ - 2003 ರಲ್ಲಿನ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಾಯ್ದೆಗೆ 2007 ರಲ್ಲಿ ತಿದ್ದುಪಡಿ ಮೂಲಕ ಎಪಿಎಂಸಿ ಪ್ರಾಂಗಣದ ಹೊರಗೆ ಟ್ರೇಡ್ ಏರಿಯಾದಲ್ಲಿ ಕೂಡ ಕೃಷಿ ಉತ್ಪನ್ನಗಳ ವಹಿವಾಟಿಗೆ ಖಾಸಗಿ ಮಾರುಕಟ್ಟೆ ಸ್ಥಾಪನೆ, ನೇರ ಖರೀದಿ ಕೇಂದ್ರ, ರೈತ-ಗ್ರಾಹಕ ಮಾರುಕಟ್ಟೆ, ಸ್ಪಾಟ್ ಎಕ್ಸ್‌ಚೇಂಜ್, ಕರಾರು ಕೃಷಿ ಮತ್ತು 2014 ರಲ್ಲಿ ಉಗ್ರಾಣ ಆಧಾರಿತ ಮಾರಾಟ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲಿಯೇ ಮಾರುವುದು ಕಲಂ 8(2) ರಡಿ ಕಡ್ಡಾಯವಾಗಿತ್ತು. ವರ್ತಕರು ಮತ್ತು ಖಾಸಗಿಯವರಿಗೆ ಪ್ರಾಂಗಣದ ಹೊರಗೆ ಇಲಾಖೆಯಿಂದ ಲೈಸೆನ್ಸ್ ಪಡೆದು ವ್ಯಾಪಾರ ಮಾಡಲು ಅವಕಾಶ ಇತ್ತು. ಹೊರಗಿನ ವ್ಯಾಪಾರದ ಮೇಲೆ ಮಾರುಕಟ್ಟೆ ಶುಲ್ಕದ ಶೇ.70 ರಷ್ಟು ಅಂದರೆ ಶೇ.1.05 ರಷ್ಟು ಮಾರುಕಟ್ಟೆ ಶುಲ್ಕ ಪಾವತಿಸಬೇಕಿತ್ತು.

ಕಾಯ್ದೆ ತಿದ್ದುಪಡಿಯಿಂದಾಗಿ ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಇಚ್ಚೆಯಂತೆ ತಮ್ಮ ಹೊಲದಲ್ಲಿಯೇ / ಫಾರ್ಮ್ ಗೇಟ್‌ನಲ್ಲಿಯೇ ನೇರವಾಗಿ ಮಾರಾಟ ಮಾಡಲು ಹಾಗೂ ಖರೀದಿದಾರರು ಖರೀದಿಸಲು ಅವಕಾಶವಿದೆ.

ತಿದ್ದುಪಡಿ ಪೂರ್ವದಲ್ಲಿ ಕಾಯ್ದೆ ಕಲಂ 8(2)ನ್ನು ಉಲ್ಲಂಘನೆ ಮಾಡಿದಲ್ಲಿ, ಕಲಂ 117 ರಡಿಯಲ್ಲಿ ದಂಡ ಮತ್ತು ಶಿಕ್ಷೆಗೆ ಗುರಿಪಡಿಸುವ ಅವಕಾಶ ಇತ್ತು. ರೈತರು ತಮ್ಮ ಇಚ್ಚೆಯಂತೆ ಹೊಲದಲ್ಲಿಯೇ ಅಥವಾ ಯಾವುದೇ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದಾಗ ದಂಡ ವಿಧಿಸುವ ಅವಕಾಶವಿಲ್ಲ.

ಈಗಾಗಲೇ ರೈತರ ಮನೆ ಬಾಗಿಲಿಗೆ ಸರಳೀಕೃತ ಮಾರುಕಟ್ಟೆ ವ್ಯವಸ್ಥೆ, ಸಂಸ್ಕರಣಗಾರರು ಹಾಗೂ ನೇರ ಖರೀದಿದಾರರು ರೈತರಿಂದ ನೇರವಾಗಿ ಖರೀದಿಸಲು ನೇರ ಖರೀದಿ ಕೇಂದ್ರಗಳ ಸ್ಥಾಪನೆಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದನ್ನು ಮತ್ತಷ್ಟು ಉತ್ತೇಜಿಸುವ ಹಾಗೂ ಮಾರುಕಟ್ಟೆ ವ್ಯವಸ್ಥೆಯನ್ನು ಸರಳೀಕರಣಗೊಳಿಸುವ ಉದ್ದೇಶದೊಂದಿಗೆ ಈ ತಿದ್ದುಪಡಿಯನ್ನು ತರಲಾಗಿದೆ.

ರೈತರು ನೇರವಾಗಿ ತಮ್ಮ ಹೊಲಗಳಲ್ಲಿ ದೊಡ್ಡ ಗ್ರಾಹಕರಿಗೆ ಮಾರಾಟ ಮಾಡುವುದರಿಂದ ಮಧ್ಯವರ್ತಿಗಳ ಅಥವಾ ಕಮೀಷನ್ ಏಜೆಂಟ್‌ಗಳ ಪಾತ್ರವಿರುವುದಿಲ್ಲ. ಇದರಿಂದ ಎಪಿಎಂಸಿ ಪ್ರಾಂಗಣದಲ್ಲಿ ಖರೀದಿದಾರರು ಕಮೀಷನ್ ಏಜೆಂಟ್‌ಗಳಿಗೆ ಪಾವತಿಸುತ್ತಿದ್ದ ಕಮೀಷನ್ ಶುಲ್ಕ ಉಳಿಯುತ್ತದೆ. ಈ ಕಮೀಷನ್ ಅನ್ನು ರೈತರಿಗೆ ವರ್ಗಾಯಿಸಬಹುದಾಗಿದೆ. ಪ್ರಸ್ತುತ ಕಾಯ್ದೆಯಲ್ಲಿ ದವಸ-ಧಾನ್ಯಗಳಿಗೆ ಗರಿಷ್ಠ ಶೇ.2 ರಷ್ಟು ಮತ್ತು ತರಕಾರಿ ಹಾಗೂ ಹಣ್ಣುಗಳಿಗೆ ಮಾರಾಟದ ಬೆಲೆ ಮೇಲೆ ಶೇ.5 ರಷ್ಟು ಕಮೀಷನ್ ಇದೆ.

ರೈತ ಮಾರಾಟಗಾರರಿಗೆ ಪ್ರಸ್ತುತ ಇರುವ ವಿವಿಧ ಮಾರುಕಟ್ಟೆ ಚಾನಲ್‌ಗಳಾದ ಮಾರುಕಟ್ಟೆ ಪ್ರಾಂಗಣ, ನೇರ ಖರೀದಿ ಕೇಂದ್ರ, ಖಾಸಗಿ ಮಾರುಕಟ್ಟೆ ಪ್ರಾಂಗಣ, ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣ, ವೇರ್‌ಹೌಸ್ ಇತ್ಯಾದಿಗಳೊಂದಿಗೆ ಮತ್ತೊಂದು ಉತ್ತಮ ಬದಲಿ (alternative marketing channel) ಸೌಕರ್ಯ ಲಭ್ಯವಾಗುತ್ತದೆ. ಹೆಚ್ಚು ಮಧ್ಯವರ್ತಿಗಳಿಂದ ಹೊರತಾದ ಈ

**ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣಕ್ಕೆ ಸಾಗಾಣಿಕೆ ಮಾಡುವ ಹಾಗೂ ಲೋಡ್ ಮತ್ತು ಅನ್‌ಲೋಡ್ ಮಾಡಲು ತಗಲುವ ವೆಚ್ಚದಲ್ಲಿ ಗಣನೀಯ ಕಡಿತ ಉಂಟಾಗುತ್ತದೆ. ಇದರಿಂದ ರೈತರಿಗೆ ಸಾಗಾಣಿಕೆ ಮತ್ತು ಲೋಡಿಂಗ್/ ಅನ್‌ಲೋಡಿಂಗ್ ವೆಚ್ಚ ಭರಿಸುವುದು ಕಡಿಮೆಯಾಗುತ್ತದೆ.**

– ಬಿ.ಸಿ.ಪಾಟೀಲ್
ಕೃಷಿ ಸಚಿವರು
ಕರ್ನಾಟಕ ಸರ್ಕಾರ



Download From : www.kpscvaani.com

ಸೌಲಭ್ಯದಿಂದ ತಮ್ಮ ಉತ್ಪನ್ನಕ್ಕೆ ಹೆಚ್ಚಿನ ಧಾರಣೆ ಪಡೆಯಲು ಅವಕಾಶ ಲಭ್ಯವಾಗುತ್ತದೆ.

ಎಂ.ಎನ್.ಸಿ/ಕಾರ್ಪೋರೇಟ್ ಸಂಸ್ಥೆಗಳು ಬೃಹತ್ ಮಟ್ಟದಲ್ಲಿ ಖರೀದಿಗೆ ಮುಂದಾದಲ್ಲಿ ರೈತರಿಗೆ ಉತ್ತಮ ಬೆಲೆ ಸೌಲಭ್ಯದೊಂದಿಗೆ ಕೃಷಿಯನ್ನು ಗಂಭೀರವಾಗಿ ಪರಿಗಣಿಸಿ ಉತ್ಪಾದನೆ ಹೆಚ್ಚಿಸುವ ದೂರಗಾಮಿ ಪರಿಣಾಮಕ್ಕೆ ಅವಕಾಶ ಉಂಟಾಗುತ್ತದೆ.

ರಾಜ್ಯ ಸರ್ಕಾರವು ದಿ:21/07/2020 ರಂದು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟದ ಮೇಲಿನ ಮಾರುಕಟ್ಟೆ ಶುಲ್ಕವನ್ನು ಶೇ.1.5 ರಿಂದ ಶೇ.1ಕ್ಕೆ ಇಳಿಸಲಾಗಿದೆ. ಒಣದ್ರಾಕ್ಷಿಗೆ ಹಾಲಿ ಇರುವ ಶೇ.0.10ನ್ನು ಮುಂದುವರೆಸಿ ಆದೇಶಿಸಿದೆ. ನಂತರ ದಿ:04/08/2020 ರಂದು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟದ ಮೇಲಿನ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕವನ್ನು ಶೇ.1 ರಿಂದ ಶೇ.0.35ಕ್ಕೆ ಇಳಿಸಲಾಗಿದೆ. ಒಣದ್ರಾಕ್ಷಿಗೆ ಹಾಲಿ ಇರುವ ಶೇ.0.10ನ್ನು ಮುಂದುವರೆಸಿ ಆದೇಶಿಸಿದೆ. ಮಾರುಕಟ್ಟೆ ಶುಲ್ಕವನ್ನು ಕಡಿಮೆ ಮಾಡಿರುವುದರಿಂದ ಇದರ ಲಾಭ ರೈತರಿಗೆ ದೊರೆಯಲಿದೆ.

ಕೇಂದ್ರ ಸರ್ಕಾರದ ದಿ:05/06/2020ರ ಸುಗ್ರೀವಾಜ್ಞೆ ಮತ್ತು ದಿ:20/09/2020 ರಂದು ಲೋಕಸಭೆಯ ಉಭಯ ಸದನಗಳಲ್ಲಿ ಅಂಗೀಕೃತವಾದ The Farmers' Produce Trade and Commerce (Promotion and Facilitation) 2020ಎಪಿಎಂಸಿ ಪ್ರಾಂಗಣದ ಹೊರಗೆ ಟ್ರೇಡ್ ಏರಿಯಾದಲ್ಲಿ ಕೃಷಿ ಉತ್ಪನ್ನದ ಮೇಲೆ ಯಾವುದೇ ರೀತಿಯ ಮಾರುಕಟ್ಟೆ ಶುಲ್ಕ/ಸೆಸ್ ಇರುವುದಿಲ್ಲ. ಇದರಿಂದ ಎಪಿಎಂಸಿ ಪ್ರಾಂಗಣದ ಒಳಗೆ ಸ್ಪರ್ಧಾತ್ಮಕ ಬೆಲೆ ಬರಲು ಸಹಾಯಕವಾಗುತ್ತದೆ.

ರಾಜ್ಯದಲ್ಲಿ ಪ್ರಸ್ತುತ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು, 352 ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ.

ಎಪಿಎಂಸಿ ಪ್ರಾಂಗಣಗಳಲ್ಲಿ ಅನೇಕ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಇದರಲ್ಲಿ 1539 ಮುಚ್ಚು ಹರಾಜುಕಟ್ಟೆಗಳು, 217 ಆಡಳಿತ ಕಛೇರಿ, 9,18,011 ಮೆ.ಟನ್ ಸಾಮರ್ಥ್ಯದ 5547 ಗೋದಾಮುಗಳು, 130 ರೈತ ಭವನ, 33 ಬೃಹತ್ ತೂಕದ ಯಂತ್ರ, 2872 ಸಣ್ಣ



ಮಳಿಗೆಗಳು, 29,49,807 ಚ.ಮೀಟರ್ ಆಂತರಿಕ ರಸ್ತೆ, 52 ಕುರಿ ಮತ್ತು ಮೇಕೆ ಮಾರುಕಟ್ಟೆ ಸಂತೆ, 61 ಧಾನ್ಯಗಳ ಶುದ್ಧೀಕರಣ ಘಟಕ, 5 ಶೀತಲ ಗೃಹ, 169 ಶುದ್ಧ ಕುಡಿಯುವ ನೀರಿನ ಘಟಕ, 2 ಈರುಳ್ಳಿ ಗೋದಾಮು, 23 ಅಸ್ಸೆಸಿಂಗ್ ಲ್ಯಾಬ್ ಮತ್ತು 666 ಗ್ರಾಮೀಣ ಸಂತೆ ಇತ್ಯಾದಿ ಸೇರಿವೆ.

ಎಪಿಎಂಸಿ ಪ್ರಾಂಗಣದಲ್ಲಿ ಸರಿಯಾದ ತೂಕ, ಬಹಿರಂಗ ಹರಾಜು/ಟೆಂಡರ್‌ನಿಂದ ಸ್ಪರ್ಧಾತ್ಮಕ ಬೆಲೆ, ಉತ್ಪನ್ನದ ಬೆಲೆಯನ್ನು ರೈತರಿಗೆ ಪಾವತಿಸುವ ಖಾತರಿಯನ್ನು ಎಪಿಎಂಸಿ ನಿರ್ವಹಿಸುತ್ತಿವೆ. ಸುಮಾರು 49,000 ಲೈಸೆನ್ಸ್ ಪಡೆದ ವರ್ತಕರಿಂದ ರಾಜ್ಯದ ರೈತರ ಕೃಷಿ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಟೆಂಡರ್/ಬಹಿರಂಗ ಹರಾಜು ಮೂಲಕ ಸ್ಪರ್ಧಾತ್ಮಕ ಬೆಲೆಯನ್ನು ರೈತರಿಗೆ ವೈಜ್ಞಾನಿಕವಾಗಿ ನೀಡಲಾಗುತ್ತಿದೆ.

ಕೃಷಿ ಮಾರಾಟ ರಂಗದಲ್ಲಿ ಸುಧಾರಣೆ ತರುವ ಸಂಬಂಧ ರಾಜ್ಯ ಸರ್ಕಾರವು ಕೃಷಿ ಮಾರಾಟ ನೀತಿ-2013ನ್ನು ಜಾರಿಗೆ ನೀಡಲಾಗಿದೆ. ಇದರನ್ವಯ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಾವಳಿ 1968ರ ನಿಯಮ 91-ಒ ರಡಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಇದರನ್ವಯ ರಾಜ್ಯದ 160 ಮಾರುಕಟ್ಟೆಗಳನ್ನು ರೆಮ್ಸ್ ತಂತ್ರಾಂಶವನ್ನು ಅಳವಡಿಸಲಾಗಿದ್ದು, ಏಕೀಕೃತ ಮಾರಾಟ ವೇದಿಕೆಯಡಿ ವ್ಯಾಪಾರ ವಹಿವಾಟಿಗೆ ಅವಕಾಶ ಕಲ್ಪಿಸಿದೆ. ಇದರಿಂದ ಉತ್ಪನ್ನಗಳ ಟೆಂಡರಿಂಗ್, ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದೆ.

ಕೃಷಿ ಮಾರಾಟ ವಾಹಿನಿ ವೆಬ್‌ಸೈಟ್‌ನಲ್ಲಿ ದೈನಂದಿನ ಮಾರುಕಟ್ಟೆ ಧಾರಣೆಯನ್ನು ಭಿತ್ತರಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜ್ಯದ ಕಲಬುರಗಿ ಮತ್ತು ಚಿಂಚೋಳಿ ಮಾರುಕಟ್ಟೆಗಳು ಇ-ನ್ಯಾಮ್‌ಗೆ ಜೋಡಣೆಯಾಗಿವೆ.

ಎಪಿಎಂಸಿಯಲ್ಲಿ ಕೃಷಿ ಉತ್ಪನ್ನ ಮಾರಾಟ ಮಾಡುವ ರೈತ ಬಾಂಧವರಿಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಆಕಸ್ಮಿಕ ಸಾವು ಮತ್ತು ಅಪಘಾತ ಸಂಭವಿಸಿದಲ್ಲಿ ಅಥವಾ ಶಾರೀರಿಕ ಊನ ಉಂಟಾದಾಗ ರೈತ ಸಂಜೀವಿನ ಅಪಘಾತ ವಿಮಾ ಯೋಜನೆಯಡಿ ಪರಿಹಾರ ನೀಡಲಾಗುತ್ತಿದೆ.

ರೈತ ಬೆಳೆಗಾರರಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಉತ್ತಮ ಬೆಲೆ ಸಿಗುತ್ತದೆ. ಅಕಸ್ಮಾತ್ ಪ್ರಾಂಗಣದ ಹೊರಗೆ ಟ್ರೇಡ್ ಏರಿಯಾದಲ್ಲಿ ಎಪಿಎಂಸಿ ಗಿಂತ ಉತ್ತಮ ಬೆಲೆ ರೈತರಿಗೆ ಸಿಕ್ಕರೆ ಅದು ರೈತರಿಗೆ ಹೆಚ್ಚಿನ ಅನುಕೂಲ ಒದಗಿಸುತ್ತದೆ. ಇದರಿಂದ ಪ್ರಾಂಗಣದ ಒಳಗೆ ಮತ್ತು ಹೊರಗೆ ಸ್ಪರ್ಧಾತ್ಮಕ ಮಾರುಕಟ್ಟೆಯ ಉದಯಕ್ಕೆ ಸಹಕಾರಿಯಾಗಲಿದೆ. ಸಂಸ್ಕರಣ ಘಟಕಗಳಿಗೆ ಟ್ರೇಡ್ ಏರಿಯಾದಲ್ಲಿ ವಿವಿಧ ಕೈಗಾರಿಕೆ ನೀತಿಯಡಿಯಲ್ಲಿ 10 ವರ್ಷಗಳ ಅವಧಿಯವರೆಗೆ ಮಾರುಕಟ್ಟೆ ಶುಲ್ಕ ವಿನಾಯಿತಿಯನ್ನು ಈಗಾಗಲೇ ನೀಡಲಾಗಿದೆ.

ರೈತ ಬೆಳೆದ ಬೆಳೆ ಅವನ ಹಕ್ಕಾಗಿದ್ದು ತನ್ನ ಇಚ್ಛೆಯಂತೆ ಬೆಳೆಯನ್ನು ಮಾರಾಟ ಮಾಡಲು ಸ್ವತಂತ್ರ ದೊರೆಯಲಿದೆ. ಒಟ್ಟಿನಲ್ಲಿ ಈ ಎಲ್ಲಾ ಕಾಯ್ದೆಗಳಿಂದ ರೈತರಿಗೆ ಅನುಕೂಲವಾಗಲಿದೆಯೇ ಹೊರತು ಅನಾನುಕೂಲವಾಗದು. ■



Download From : www.kpscvaani.com



# ಕೊಪ್ಪಳದಲ್ಲಿ ದೇಶದ ಮೊದಲ ಬೃಹತ್

## ಆಟಿಕೆ ಕ್ಲಸ್ಟರ್ ನಿರ್ಮಾಣ...

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ವಾವಲಂಬಿ ರಾಷ್ಟ್ರ ನಿರ್ಮಾಣದ 'ವೋಕಲ್ ಫಾರ್ ಲೋಕಲ್' ಪರಿಕಲ್ಪನೆಗೆ ಅನುಗುಣವಾಗಿ, ರಾಜ್ಯ ಸರ್ಕಾರವು ಆಟಿಕೆ ತಯಾರಿಕೆ ಮೂಲಕ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿ ಬಲಪಡಿಸಲು ಕೊಪ್ಪಳ ಜಿಲ್ಲೆಯಲ್ಲಿ ದೇಶದ ಮೊದಲ ಬೃಹತ್ ಆಟಿಕೆ ಉತ್ಪಾದನಾ ಕ್ಲಸ್ಟರ್ ನಿರ್ಮಾಣ ಯೋಜನೆ ಸ್ಥಾಪನೆಗೆ ಚಾಲನೆ ನೀಡಿದೆ.**

ಬಿ.ವಿ.ಅನುರಾಧ/ಜಿ.ಸುರೇಶ್





KOPPAL TOY CLUSTER





Download From : www.kpscvaani.com



ಕರ್ನಾಟಕವು ಭಾರತದಲ್ಲಿ ಮೂರನೇ ಅತಿದೊಡ್ಡ ಆಟಿಕೆ ಮಾರುಕಟ್ಟೆಯಾಗಿದ್ದು, ರಾಷ್ಟ್ರೀಯ ಮಾರುಕಟ್ಟೆಯಲ್ಲಿ $159 ಮಿಲಿಯನ್ ಹಾಗೂ 9% ದೇಶಿಯ ಮೌಲ್ಯವನ್ನು ಹೊಂದಿದೆ. 2010 ರಿಂದ 2017 ರ ವರೆಗೆ 18% ರಷ್ಟು ಸಿಎಜಿಆರ್ ನಲ್ಲಿ ಬೆಳೆಯುತ್ತಿರುವ ರಾಜ್ಯದ ಆಟಿಕೆ ಮಾರುಕಟ್ಟೆಯು 2023 ರ ವೇಳೆಗೆ $310 ಮಿಲಿಯನ್ ತಲುಪುವ ನಿರೀಕ್ಷೆ ಇದೆ. ಕೊಪ್ಪಳ ಟಾಯ್ ಕ್ಲಸ್ಟರ್ ತನ್ನ ಕಾರ್ಯತಂತ್ರದ ಸ್ಥಳದಿಂದ ಹೊರ ಹೊಮ್ಮುವ ಅಸಂಖ್ಯಾತ ಅನುಕೂಲಗಳಿಂದ ಲಾಭ ಪಡೆಯುತ್ತದೆ, ಇದರಿಂದ ಪ್ರಮುಖ ಹೆದ್ದಾರಿಗಳು, ಬಂದರುಗಳು, ವಿಮಾನ ನಿಲ್ದಾಣಗಳು ಹಾಗೂ ಪ್ರಮುಖ ನಗರಗಳು ಸಮರ್ಥ ಸಂಪರ್ಕಜಾಲವನ್ನು ಹೊಂದಲು ಅನುಕೂಲವಾಗುತ್ತದೆ.

## ಕೊಪ್ಪಳ ಜಿಲ್ಲೆಯಲ್ಲಿ ದೇಶದ ಪ್ರಥಮ 'ಆಟಿಕೆ ಕ್ಲಸ್ಟರ್ ನಿರ್ಮಾಣ ಯೋಜನೆ'ಗೆ ರಾಜ್ಯ ಸರ್ಕಾರವು ಚಾಲನೆ ನೀಡಿರುವುದು ಕಲ್ಯಾಣ ಕರ್ನಾಟಕ ಭಾಗದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಲಿದೆ.




ಕೇಂದ್ರ ಸರ್ಕಾರದ 'ಆತ್ಮ ನಿರ್ಭರ ಭಾರತ' ಯೋಜನೆಯಡಿ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವುದು, ದೇಸಿ ವಸ್ತುಗಳಿಗೆ ಜಾಗತಿಕ ಮಟ್ಟದ ಮಾರುಕಟ್ಟೆ ಸೌಲಭ್ಯ ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಪ್ರಧಾನಿ ಮೋದಿ ಅವರು ತಮ್ಮ 'ಮನ್ ಕಿ ಬಾತ್'ನಲ್ಲಿ ರಾಮನಗರ ಜಿಲ್ಲೆಯ ಪ್ರಸಿದ್ಧ ಚನ್ನಪಟ್ಟಣ ಗೊಂಬೆಗಳ ತಯಾರಿಕೆಯಲ್ಲಿ ಅಭಿವೃದ್ಧಿ ಸಾಧಿಸಬೇಕು. ವಿಶ್ವದಾದ್ಯಂತ ದೇಸಿ ಉತ್ಪನ್ನಗಳನ್ನು ಪೂರೈಸುವಂತಾಗಬೇಕು ಎಂಬ ಅಭಿಪ್ರಾಯವನ್ನು ದೇಶದ ಜನತೆಯಲ್ಲಿ ಹಂಚಿಕೊಂಡಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಆಟಿಕೆ ಉತ್ಪನ್ನಗಳ ಮಹತ್ವವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದರು. ಪ್ರಧಾನಿ ಮೋದಿ ಅವರ ಕರೆಯ ಮೇರೆಗೆ ರಾಜ್ಯ ಸರ್ಕಾರ ಕೊಪ್ಪಳ ಜಿಲ್ಲೆಯಲ್ಲಿ ಈ ಬೃಹತ್ ಯೋಜನೆ ನಿರ್ಮಾಣಕ್ಕೆ ದಿಟ್ಟ ಹೆಜ್ಜೆ ಇಟ್ಟಿದೆ.

**ಕಿನ್ನಾಳ ಕಲೆ ಜಗತ್ಪ್ರಸಿದ್ಧಿ:**

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕವನ್ನು ಪ್ರಗತಿ ಪಥದತ್ತ ಮುನ್ನಡೆಸಲು ಈ ಮಹತ್ವದ ಯೋಜನೆ ನಿರ್ಮಾಣಕ್ಕೆ ಕೊಪ್ಪಳ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲೂ ಕೊಪ್ಪಳ ಜಿಲ್ಲೆಯ 'ಕಿನ್ನಾಳ' ಕಲೆ ಮತ್ತು ಪಾರಂಪರಿಕ ಆಟಿಕೆಗಳ ತಯಾರಿಕೆಗೆ ಜಗತ್ಪ್ರಸಿದ್ಧಿ. ಸುಂದರ ಮರದ ಕೆತ್ತನೆಗಳಿಗೆ ಹೆಸರುವಾಸಿ. ಮತ್ತೊಂದು ವಿಶೇಷವೆಂದರೆ ಕಿನ್ನಾಳ ಆಟಿಕೆಗಳು ಪರಿಸರ ಸ್ನೇಹಿಯಾಗಿರುತ್ತವೆ. ಅಲ್ಲದೆ, ಕಲ್ಯಾಣಕರ್ನಾಟಕ ಭಾಗದಲ್ಲಿ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವ ಮತ್ತು ದೇಸಿ ಉತ್ಪನ್ನಗಳನ್ನು ಉತ್ತೇಜಿಸುವ ಸದುದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಆಟಿಕೆಗಳ ಕ್ಲಸ್ಟರ್ ನಿರ್ಮಾಣ ಯೋಜನೆ ಆರಂಭಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ-ತಳಬಾಳದಲ್ಲಿ 400 ಎಕರೆ ಜಮೀನಿನ ವಿಶೇಷ ಆರ್ಥಿಕ ವಲಯದಲ್ಲಿ ರಾಜ್ಯ ಸರ್ಕಾರ, 5 ಸಾವಿರ ಕೋಟಿರೂ. ವೆಚ್ಚದಲ್ಲಿ ಯೋಜನೆ ನಿರ್ಮಿಸುವ ಗುರಿ ಹೊಂದಿದೆ. ಈ ಕ್ಲಸ್ಟರ್ ಸ್ಥಾಪನೆ ಮಾಡಲು ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಈ ಪ್ರದೇಶ ರಾಷ್ಟ್ರೀಯ ಹೆದ್ದಾರಿ 63 ಮತ್ತು ಬೆಳಗಾವಿ ವಿಮಾನ ನಿಲ್ದಾಣಕ್ಕೆ ಸಮೀಪದಲಿದ್ದು, ಉತ್ತಮ ಸಂಪರ್ಕ


Download From : www.kpscvaani.com




**ರಾಜ್ಯದ ಅಭಿವೃದ್ಧಿಗೆ ಅತಿ ಮುಖ್ಯ ಅಂಶಗಳಾದ ಕೃಷಿ ಮತ್ತು ಕೈಗಾರಿಕೆಗಳೆರಡಕ್ಕೂ ನಮ್ಮ ಸರ್ಕಾರ ಸಮಾನ ಆದ್ಯತೆ ನೀಡುತ್ತಿದೆ. ಕೈಗಾರಿಕಾ ನೀತಿ 2020–25 ಅನ್ನು ಜಾರಿಗೆ ತಂದಿದ್ದು, ರಾಜ್ಯದ ಎರಡು ಮತ್ತು ಮೂರನೆ ಹಂತದ ನಗರಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಆದ್ಯತೆ ನೀಡಲಾಗಿದೆ. ಇದರಿಂದ ಕಲ್ಯಾಣ ಕರ್ನಾಟಕ ಭಾಗದ ಯುವಜನರಿಗೆ ಉದ್ಯೋಗಾವಕಾಶಗಳು ದೊರೆಯಲಿದೆ.**

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



ವ್ಯವಸ್ಥೆಯನ್ನೂ ಹೊಂದಿದೆ. ಅಲ್ಲದೆ, ಹುಬ್ಬಳ್ಳಿ ವಾಣಿಜ್ಯ ನಗರಕ್ಕೂ ಹತ್ತಿರವಾಗಿದೆ.

ಕೊಪ್ಪಳ ಆಟಿಕೆ ಕ್ಲಸ್ಟರ್ 5000 ಕೋಟಿ ರೂ.ಗಳ ಹೂಡಿಕೆಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದ್ದು, ಭವಿಷ್ಯದಲ್ಲಿ 1 ಲಕ್ಷಕ್ಕೂ ಹೆಚ್ಚು ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ. ಸ್ಥಳಿಯರಿಗೆ ಆದ್ಯತೆ ಎಂಬ ರಾಷ್ಟ್ರದ ಧ್ಯೇಯವನ್ನು ಬೆಂಬಲಿಸುವುದು ಮತ್ತು ರಾಜ್ಯದ ಜಿಡಿಪಿಯಲ್ಲಿ ಉತ್ಪಾದನೆ ಪಾಲನ್ನು ಸುಧಾರಿತ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು, ಅಗತ್ಯ ಕೌಶಲ್ಯ ಅಭಿವೃದ್ಧಿಗೆ ನೆರವು ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿ, ಸಾರಿಗೆ, ಆರೋಗ್ಯ, ಆತಿಥ್ಯ ಮತ್ತು ಸಮಾನ ಸಂಖ್ಯೆಯ ಉದ್ಯೋಗಗಳನ್ನು ಸೃಷ್ಟಿಸುವ ಈ ಟಾಯ್ ಕ್ಲಸ್ಟರ್ ಸ್ಥಳೀಯ ಆರ್ಥಿಕತೆಗೆ ಭವಿಷ್ಯದಲ್ಲಿ ಉತ್ತೇಜನಕಾರಿಯಾಗಲಿದೆ.

ಭಾರತದ ಮೊಟ್ಟ ಮೊದಲ ಆಟಿಕೆ ಉತ್ಪಾದನಾ ಕ್ಲಸ್ಟರ್ ಆದ ಕೊಪ್ಪಳದ ಟಾಯ್ ಕ್ಲಸ್ಟರ್‌ಗೆ ಭೂಮಿ ಪೂಜೆಯನ್ನು ಇದೇ 2021ರ ಜನವರಿ 9 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನೆರವೇರಿಸಿದರು.

**ಚೀನಿ ಆಟಿಕೆಗಳಿಗೆ ಬ್ರೇಕ್:**

ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಚೀನಾ ಪ್ರಬಲ ಹಿಡಿತ ಹೊಂದಿದೆ. ಅದರಲ್ಲಿ ಪಾಲು ಪಡೆಯಲು ದೇಸಿ ಆಟಿಕೆಗಳ ತಯಾರಿಕೆಗೆ ಪ್ರಾಧಾನ್ಯತೆ ನೀಡಬೇಕು. ಆ ಮೂಲಕ ಚೀನಿ ಆಟಿಕೆಗಳಿಗೆ ಬ್ರೇಕ್ ಹಾಕಬಹುದು. ಇದರಿಂದ ಸ್ಥಳೀಯ ಆಟಿಕೆ ತಯಾರಕರಿಗೆ ಉದ್ಯೋಗ ಸೃಷ್ಟಿಸಬಹುದು ಮತ್ತು ಆರ್ಥಿಕ ಚೇತರಿಕೆ ಕಂಡುಕೊಳ್ಳಬಹುದು. ಈ ದೂರದೃಷ್ಟಿ ಯೋಜನೆಯಿಂದ ಆಟಿಕೆ ಉದ್ಯಮ ಪ್ರಗತಿಪಡಿಸುವುದು, ದೇಸಿ ಆಟಿಕೆಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಏಕಸ್ ಸಂಸ್ಥೆಯ ನಿರ್ವಹಣೆ:**

ಕರ್ನಾಟಕದವರೇ ಆದ ಏಕಸ್ ಸಂಸ್ಥೆಯ ಅಧ್ಯಕ್ಷ ಅರವಿಂದಮೆಳ್ಳಗೇರಿ ಆಟಿಕೆ ಕ್ಲಸ್ಟರ್ ನಿರ್ಮಾಣ ಜವಾಬ್ದಾರಿ ಹೊತ್ತಿದ್ದಾರೆ. 2021ರ ಡಿಸೆಂಬರ್ ಒಳಗೆ ಕಾರ್ಯಾರಂಭ ಮಾಡುವ ಸಾಧ್ಯತೆಗಳಿವೆ. ಆಟಿಕೆ ಕ್ಲಸ್ಟರ್ ನಿರ್ಮಾಣದಿಂದ ಕಲ್ಯಾಣಕರ್ನಾಟಕದ ಅಭಿವೃದ್ಧಿಗೆ ಪೂರಕವಾಗಲಿದೆ. ಈ ಭಾಗದ ಯುವಜನತೆ ಮತ್ತು ಸ್ಥಳೀಯ ಜನರಿಗೆ ಹೆಚ್ಚಿನ ಉದ್ಯೋಗವಕಾಶಗಳು ಲಭಿಸಲಿವೆ. ಆಟಿಕೆ ಕ್ಲಸ್ಟರ್ ಸಮೀಪದಲ್ಲೇ ಇರುವ ಕೌಶಲ್ಯ ತರಬೇತಿ ಕೇಂದ್ರದಲ್ಲಿ ಸ್ಥಳೀಯ ಯುವಜನತೆಗೆ ಅಗತ್ಯ ಕೌಶಲ್ಯ ತರಬೇತಿಯನ್ನು ನೀಡಿ ಆಟಿಕೆ ಕ್ಲಸ್ಟರ್‌ನಲ್ಲಿ ಉದ್ಯೋಗ ಕಲ್ಪಿಸುವುದು ಯೋಜನೆಯ ನಿಲುವಾಗಿದೆ. ಇದರಿಂದ ಕಲ್ಯಾಣ ಕರ್ನಾಟಕದ ಆರ್ಥಿಕ ಅಭಿವೃದ್ಧಿಯಲ್ಲಿಯೂ ಆಟಿಕೆ ಕ್ಲಸ್ಟರ್ ಮಹತ್ತರ ಪಾತ್ರ ವಹಿಸಲಿದೆ. ಇದರಿಂದ ಕೊಪ್ಪಳ ವಿಶ್ವ ಭೂಪಟದಲ್ಲಿಯೂ ಗುರುತಿಸಿಕೊಳ್ಳಲಿದೆ.

**ವೋಕಲ್ ಫಾರ್ ಲೋಕಲ್:**

ಪ್ರಧಾನಮಂತ್ರಿ ಮೋದಿ ಅವರ ಕನಸಿನ ಯೋಜನೆಯ ಮುಖ್ಯ ಉದ್ದೇಶವಾದ ವೋಕಲ್ ಫಾರ್ ಲೋಕಲ್‌ನಡಿ ಸುತ್ತಮುತ್ತಲಿನ



Download From : www.kpscvaani.com

ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವುದು. ಅದರಲ್ಲಿಯೂ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುವ ಆಲೋಚನೆಯೂ ಇದೆ. ಗುಡಿ ಕೈಗಾರಿಕೆಗಳಲ್ಲಿ ಮಹಿಳೆಯರದ್ದು ಪಳಗಿದ ಕೈ. ಹಾಗಾಗಿ ಈ ಯೋಜನೆಯಡಿ ಕರಕುಶಲ ಕಲೆಯಲ್ಲಿ ಆಟಿಕೆ ಉತ್ಪನ್ನಗಳಿಗೆ ಆದ್ಯತೆ ನೀಡಲಾಗುವುದು. ಈ ಯೋಜನೆಯಲ್ಲಿ ಮಹಿಳೆಯರು ಹೆಚ್ಚು ಪ್ರಯೋಜನ ಪಡೆಯಲಿದ್ದಾರೆ ಎಂದೇ ಹೇಳಬಹುದು. ಉದ್ಯೋಗ ಅರಸಿ ಮಹಾನಗರಗಳತ್ತ ವಲಸೆ ಹೋಗುತ್ತಿದ್ದ ಕಲ್ಯಾಣ ಕರ್ನಾಟಕದ ಜನತೆಗೆ ಆಟಿಕೆ ಕ್ಲಸ್ಟರ್ ನಿರ್ಮಾಣ ಯೋಜನೆ ವರದಾನವಾಗಲಿದೆ. ಸ್ಥಳೀಯ ಯೋಜನೆಗಳನ್ನು ಬಳಸಿಕೊಂಡು ಅಭಿವೃದ್ಧಿಯತ್ತ ದಾಪುಗಾಲಿಡಲು ಯುವಜನತೆಯೂ ಆಸಕ್ತಿ ವಹಿಸಬೇಕಿದೆ.

**ಪ್ರಥಮ ಆಟಿಕೆ ತಯಾರಿಕಾ ಹಬ್:**

ರಾಜ್ಯ ಸರ್ಕಾರ ಕೊಪ್ಪಳವನ್ನು ದೇಶದ ಪ್ರಥಮ 'ಆಟಿಕೆ ತಯಾರಿಕಾ ಹಬ್' ಮಾಡುವ ಉದ್ದೇಶವನ್ನೂ ಹೊಂದಿದೆ. ಅದಕ್ಕೆ ಈ ಕುರಿತು ಈಗಾಗಲೇ ದೇಶಿ ಮತ್ತು ವಿದೇಶಿ ಹೂಡಿಕೆದಾರರೊಂದಿಗೆ ಸಮಾಲೋಚನೆ ನಡೆಸಿದೆ. ಆ ನಿಟ್ಟಿನಲ್ಲಿ ದೇಶ ವಿದೇಶ ಆಟಿಕೆಗಳ ತಯಾರಿಕೆಗೆ ರಾಜ್ಯ ಸರ್ಕಾರ ಮುಕ್ತ ಆಹ್ವಾನ ನೀಡಿದೆ. ಆಟಿಕೆ ಕ್ಲಸ್ಟರ್ ನಿರ್ಮಾಣ ಯೋಜನೆಯ ಉತ್ಪಾದನೆ ಮತ್ತು ಪೂರೈಕೆ ಸಂಬಂಧ 6 ಕಂಪನಿಗಳಾದ ರಿಮೋಟ್ ಕಂಟ್ರೋಲ್ ಆಧಾರಿತ ಆಟಿಕೆ ಕಾರು ಉತ್ಪಾದನಾ ಕಂಪನಿ, ಪ್ಲೇಗ್ರೋ ಇಂಡಸ್ಟ್ರೀಸ್ ಲಿಮಿಟೆಡ್, ಮೈಕ್ರೋ ಪ್ಲಾಸ್ಟಿಕ್ ಪ್ರೈವೇಟ್ ಲಿಮಿಟೆಡ್, ಹಾಟ್ ಶಾಟ್‌ಟ್ರೂಲಿಂಗ್ ಲಿಮಿಟೆಡ್ ಮತ್ತು ಏಕಸ್ ಪ್ಲಾಸ್ಟಿಕ್ ಲಿಮಿಟೆಡ್ ಕಂಪನಿಗಳ ಜತೆ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದೆ. ಖಾಸಗಿ ಒಡೆತನದಲ್ಲಿ ಯೋಜನೆ ಆರಂಭಿಸಿದರೂ ಸಕಲ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿದೆ. ಈ ಯೋಜನೆ ಮೂಲಕ 2023ರ ವೇಳೆಗೆ 2,300 ಕೋಟಿಯಷ್ಟು ಮಾರುಕಟ್ಟೆ ಮೌಲ್ಯ ತಲುಪುವ ನಿರೀಕ್ಷೆ ಹೊಂದಲಾಗಿದೆ.

**ಸರ್ಕಾರದಿಂದ ಅಗತ್ಯ ಸೌಲಭ್ಯ:**

ದೇಶದ ಪ್ರಮುಖ ಆಟಿಕೆ ಕ್ಲಸ್ಟರ್ ಆಗಿ ಹೊರಹೊಮ್ಮಲು ಸಜ್ಜಾಗಿರುವ ರಾಜ್ಯ, ಆಟಿಕೆ ತಯಾರಿಸುವ ಕೈಗಾರಿಕೆಗಳಿಗೆ ಪೂರಕ ವ್ಯವಸ್ಥೆ ಕಲ್ಪಿಸಲಿದೆ. ಕರ್ನಾಟಕವನ್ನು ದೇಶದ ಆಟಿಕೆ ಉತ್ಪಾದನಾ ಕೇಂದ್ರವಾಗಿಸಲು ಮತ್ತು ಆಟಿಕೆ ಕ್ಷೇತ್ರಕ್ಕೆ ಉತ್ತೇಜನ ನೀಡಲು ರಾಜ್ಯ ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ. ಅದಕ್ಕೆಂದೇ ಉತ್ಪನ್ನ ನಿರ್ದಿಷ್ಟ ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲಾಗಿದೆ. ಇದರ ಉದ್ದೇಶ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪಾಲು ಹೆಚ್ಚಿಸುವುದು, ಕೈಗಾರಿಕಾ ಅಗತ್ಯಗಳನ್ನು ಪೂರೈಸುವ ಅತ್ಯಾಧುನಿಕ ಮೂಲ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು, ಅಗತ್ಯ ಆಧಾರಿತ ಕೌಶಲ್ಯ ಅಭಿವೃದ್ಧಿ ಸುಧಾರಿಸುವುದು ಮತ್ತು ಸಮತೋಲಿತ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಸಾಧಿಸುವುದು ಮತ್ತು 700 ದಶಲಕ್ಷ ಡಾಲರ್ ಹೂಡಿಕೆ ಆಕರ್ಷಿಸುವುದು, ಈ ಆಟಿಕೆ ಕ್ಲಸ್ಟರ್ ಯೋಜನೆಯ ಮೂಲ ಉದ್ದೇಶಗಳಾಗಿವೆ. ಒಟ್ಟಾರೆ ಆಟಿಕೆ ಉದ್ಯಮ ಅಭಿವೃದ್ಧಿ, ದೇಸಿ ಆಟಿಕೆಗಳನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸುವ ಮಹತ್ತರ ಯೋಜನೆ ಇದಾಗಿದೆ. ವಿಶ್ವ ದರ್ಜೆಯ ಕ್ಲಸ್ಟರ್ ಆಗಿ ರೂಪಿಸಲು ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ರಾಜ್ಯ ಸರ್ಕಾರ ವಹಿಸುತ್ತಿದೆ.

**ಸ್ಥಳೀಯರಿಗೆ ಉದ್ಯೋಗ ಆದ್ಯತೆ:**

ರಾಜ್ಯ ಸರ್ಕಾರ ಕೈಗಾರಿಕಾ ನೀತಿ 2020-25 ಅನ್ನು ಜಾರಿಗೆ ತಂದಿದೆ. ಈ ನೀತಿಯ ಅನ್ವಯ ರಾಜಧಾನಿ ಬೆಂಗಳೂರಿಗೆ ಸೀಮಿತವಾಗಿದ್ದ ಕೈಗಾರಿಕೆಗಳನ್ನು ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿಯೂ ಸ್ಥಾಪನೆ ಮಾಡಲು ಆದ್ಯತೆ ನೀಡಲಾಗಿದೆ. ಸ್ಥಳೀಯ ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಯುವಜನತೆಗೆ ಉದ್ಯೋಗ ಸೃಷ್ಟಿಸಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಲಾಗುವುದು. ಸ್ಥಳೀಯವಾಗಿ ಸ್ಥಾಪಿಸುವ ಯಾವುದೇ ಕೈಗಾರಿಕೆಯಲ್ಲೂ ಸ್ಥಳೀಯರಿಗೇ ಮೊದಲು ಉದ್ಯೋಗ ಕಲ್ಪಿಸಲು ಆದ್ಯತೆ ನೀಡುವುದು ಸರ್ಕಾರದ ದೂರದೃಷ್ಟಿ ಮತ್ತು ಮೂಲ ಉದ್ದೇಶವಾಗಿದೆ. ಕಲ್ಯಾಣಕರ್ನಾಟಕದ ಯುವಜನತೆಯು ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ವೈಯಕ್ತಿಕ ಮತ್ತು ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಪ್ರಮುಖ ಮತ್ತು ಪೂರಕ ಅಂಶಗಳಾದ ಕೃಷಿ ಮತ್ತು ಕೈಗಾರಿಕೆಗಳಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ಆ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಲವು ಮಹತ್ತರ ಕಾನೂನು ಸುಧಾರಣೆಗಳನ್ನು ಮಾಡಿದೆ. 2 ಮತು 3ನೇ ಹಂತದ ನಗರಗಳಲ್ಲಿ ಕೈಗಾರಿಕೆಗಳನ್ನು ಆಕರ್ಷಿಸುವ ಮೂಲಕ ವಲಯ ನಿರ್ದಿಷ್ಟ ಕ್ಲಸ್ಟರ್‌ಗಳನ್ನು ಅಭಿವೃದ್ಧಿ ಪಡಿಸುವ ಜೊತೆಗೆ ಕೈಗಾರಿಕಾ ಟೌನ್‌ಶಿಪ್‌ಗಳನ್ನು ನಿರ್ಮಿಸಲಾಗುತ್ತಿದೆ.



**ಕೊಪ್ಪಳ ಆಟಿಕೆ ಕ್ಲಸ್ಟರ್ 5000 ಕೋಟಿ ರೂ.ಗಳ ಹೂಡಿಕೆಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದ್ದು, ಭವಿಷ್ಯದಲ್ಲಿ 1 ಲಕ್ಷಕ್ಕೂ ಹೆಚ್ಚು ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ.**



Download From : www.kpscvaani.com



> **ಈ ಟಾಯ್ ಕ್ಲಸ್ಟರ್ ಕೊಪ್ಪಳಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಇಡೀ ಕಲ್ಯಾಣ ಕರ್ನಾಟಕಕ್ಕೆ ಅನುಕೂಲವಾಗಲಿದೆ. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಗತ್ಯ ನೆರವು ನೀಡುವುದರ ಜೊತೆಗೆ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಗಿದೆ.**
>
> **ಜಗದೀಶ್ ಶೆಟ್ಟರ್**
> ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಾರ್ವಜನಿಕ ಉದ್ಯಮ ಸಚಿವರು



**ಉದ್ಯೋಗ ವಲಸೆಗೂ ಬ್ರೇಕ್:**

ಬೆಂಗಳೂರು ಕೇಂದ್ರಿತ ಕೈಗಾರಿಕೆಗಳ ಸ್ಥಾಪನೆ ತಪ್ಪಿಸಲು ಕೊಪ್ಪಳದಲ್ಲಿ ಆಟಿಕೆ ಕ್ಲಸ್ಟರ್, ಹುಬ್ಬಳ್ಳಿ–ಧಾರಾವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಕೈಗಾರಿಕೆಗಳ ಸ್ಥಾಪನೆಯಿಂದ ಸಹಸ್ರಾರು ಮಂದಿಗೆ ಉದ್ಯೋಗವಕಾಶ ಸೃಷ್ಟಿಯಾಗಲಿದೆ. ಇದರಿಂದ ಯುವಜನತೆ ಉದ್ಯೋಗ ಅರಸಿ ಮಹಾನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬಹುದು. ಅಲ್ಲದೆ, ಕರ್ನಾಟಕವನ್ನು ಜಾಗತಿಕ ಮಟ್ಟದಲ್ಲಿ ಔದ್ಯಮಿಕ ಜಾಲವಾಗಿ ಅಭಿವೃದ್ಧಿ ಪಡಿಸಲು ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರನ್ನು ಭಾಗವಾಗಿ ತುಮಕೂರಿನಲ್ಲಿ ಕೈಗಾರಿಕಾ ನೋಡ್ ನಿರ್ಮಾಣವಾಗಲಿದೆ. ಇದರಿಂದ ಸುಮಾರು 1 ಲಕ್ಷ ಜನರಿಗೆ ಉದ್ಯೋಗ ಲಭಿಸುವ ಸಾಧ್ಯತೆಗಳಿವೆ. ದೇಶದಲ್ಲಿ ವಿವಿಧ ಕೈಗಾರಿಕೆಗಳ ಸ್ಥಾಪನೆಗೆ ಒಟ್ಟು 1188 ಬಂಡವಾಳ ಹೂಡಿಕೆ ಪ್ರಸ್ತಾಪಗಳು ಸ್ವೀಕೃತವಾಗಿವೆ. ಈ ಪೈಕಿ 1.54 ಲಕ್ಷ ಕೋಟಿರೂ ಮೌಲ್ಯದ 95 ಹೂಡಿಕೆ ಪ್ರಸ್ತಾವನೆಗಳು ರಾಜ್ಯದ ಪಾಲಾಗಿವೆ. ಹಾಗಾಗಿ ಬಂಡವಾಳ ಆಕರ್ಷಣೆ ಮಾಡುವುದರಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ.

**ಯುವಜನತೆ ದೇಶದ ಸಂಪತ್ತು:**

ಸರ್ಕಾರವು ವಿವಿಧ ಯೋಜನೆಗಳನ್ನೇನೋ ಜಾರಿಗೊಳಿಸುತ್ತವೆ. ಅವು ಸಕಾಲದಲ್ಲಿ ಅರ್ಹರಿಗೆ ತಲುಪುವುದು ಅಷ್ಟೇ ಮುಖ್ಯ. ಕೊರೊನಾ ಸಂಕಷ್ಟದಿಂದ ಪಾರಾಗಲು ಸರ್ಕಾರ ಈಗಾಗಲೇ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿವೆ. ಅವುಗಳನ್ನು ಸಾಕಾರಗೊಳಿಸಲು ಯುವಜನತೆ ಪಕ್ವಗೊಳ್ಳಬೇಕಿದೆ. ಯುವಜನತೆಯೇ ದೇಶದ ಬಹುದೊಡ್ಡ ಸಂಪತ್ತು. ಕೇವಲ ಕುಟುಂಬ ಜವಾಬ್ದಾರಿ ಅಷ್ಟೇ ಅಲ್ಲದೆ, ದೇಶದ ಅಭಿವೃದ್ಧಿ ಹೊಣೆಯನ್ನೂ ಅವರ ಹೆಗಲಿಗೇರಿಸಲು ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಬೇಕಿರುವುದು ಇಂದಿನ ದಿನಗಳಲ್ಲಿ ಅತ್ಯಗತ್ಯ ಮತ್ತು ಅನಿವಾರ್ಯವೂ ಆಗಿದೆ. ಯುವಜನತೆ ಮನಸ್ಸು ಮಾಡಿದರೆ ಜೀವನ ಗೆದ್ದಷ್ಟೇ ಸುಲಭವಾಗಿ ದೇಶವನ್ನೂ ಅಭಿವೃದ್ಧಿ ಪಥದತ್ತ ಮುನ್ನಡೆಸುವಲ್ಲಿ ಸಂಶಯವೇ ಇಲ್ಲ.

ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಭಾನಾಪುರದಲ್ಲಿ ಏಕಸ್ ಸಂಸ್ಥೆಯವರು 400 ಏಕರೆ ವಿಶಾಲ ಭೂ ಪ್ರದೇಶ, ವಿಶೇಷ ಆರ್ಥಿಕ ವಲಯ (SEZ) ಅಡಿಯಲ್ಲಿ ಸ್ಥಾಪಿಸುತ್ತಿರುವ ಆಟಿಕೆ ಉತ್ಪಾದನಾ ಕ್ಲಸ್ಟರ್ (ಟಾಯ್ ಕ್ಲಸ್ಟರ್) ಭಾರತ ದೇಶದ ಮೊಟ್ಟ ಮೊದಲ ಆಟಿಕೆ ಉತ್ಪಾದನ ಕ್ಲಸ್ಟರ್ ಮಾತ್ರವಲ್ಲದೆ ಇದು ಕಲ್ಯಾಣ ಕರ್ನಾಟಕ ಹಿಂದುಳಿದ ಭಾಗದ ಹಲವಾರು ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಉದ್ಯೋಗದ ಆಶಾಕಿರಣವಾಗಲಿದೆ. ■



Download From : www.kpscvaani.com



# ಗಣರಾಜ್ಯೋತ್ಸವ ಸ್ತಬ್ಧಚಿತ್ರ ನಿರ್ಮಾಣದ ಹಿಂದಿನ ಕಥೆ

**ಗಣರಾಜ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ರಾಜಧಾನಿ ನವ ದೆಹಲಿಯ ರಾಜಪಥ್ ನಲ್ಲಿ ನಡೆಯುವ ಮೆರವಣಿಗೆಯಲ್ಲಿ ಕರ್ನಾಟಕ ರಾಜ್ಯದ ಸ್ತಬ್ಧಚಿತ್ರವು ಸತತವಾಗಿ ಹನ್ನೆರಡನೇ ಬಾರಿಗೆ ಪಾಲ್ಗೊಳ್ಳುತ್ತಿದೆ. ಈ ಸ್ತಬ್ಧಚಿತ್ರದ ನಿರ್ಮಾಣದ ಹಿಂದೆ ಎಷ್ಟೆಲ್ಲಾ ಪರಿಶ್ರಮ ಅಡಗಿದೆ ಎಂಬುದನ್ನು ಈ ಲೇಖನವು ಸಾದರಪಡಿಸುತ್ತದೆ.**

ಡಿ.ಪಿ. ಮುರಳೀಧರ್

ಸಂಸದೀಯ ವ್ಯವಸ್ಥೆಯನ್ನು ಹೊಂದಿರುವ ನಮ್ಮ ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜ್ಯಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಗಣರಾಜ್ಯ ಎಂದೇ ಬಣ್ಣಿಸುತ್ತಾರೆ.

ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿತವಾದ ಭಾರತದ ಸಂವಿಧಾನವು ಅಂಗೀಕೃತವಾದದ್ದು ನವೆಂಬರ್ 26, 1949. ಆದರೆ, ನಮ್ಮ ಸಂವಿಧಾನವು ಅನುಷ್ಠಾನಕ್ಕೆ ಬಂದದ್ದು ಜನವರಿ 26, 1950. ಅದಕ್ಕೇ, ಆ ದಿನವನ್ನು ನಾವು ಗಣರಾಜ್ಯೋತ್ಸವ ದಿನಾಚರಣೆ ಎಂದು ಕರೆಯುತ್ತೇವೆ. ದೇಶದೆಲ್ಲೆಡೆ ಗಣರಾಜ್ಯೋತ್ಸವವನ್ನು ಆಚರಿಸಿ ಹೆಮ್ಮೆ ಪಡುತ್ತೇವೆ.

**ಗಣರಾಜ್ಯೋತ್ಸವ ಎಂದರೆ ಭಾರತದ ಜನತೆಗೆ ಸಡಗರವೋ ಸಡಗರ. ಸಂಭ್ರಮವೋ ಸಂಭ್ರಮ. ಹೌದು, ಪ್ರತಿವರ್ಷ ಗಣರಾಜ್ಯೋತ್ಸವದ ದಿನದಂದು ನವದೆಹಲಿಯ ರಾಜಪಥ್‌ನಲ್ಲಿ ಸ್ತಬ್ಧಚಿತ್ರಗಳ ಮೆರವಣಿಗೆ ಅತ್ಯಂತ ಆಕರ್ಷಣೀಯ ಮಾತ್ರವಲ್ಲ, ಅತೀ ವಿಶೇಷ ಕೂಡಾ. ಅಷ್ಟೇ ಏಕೆ ರಾಜಪಥ್‌ನಲ್ಲಿ ಮೆರವಣಿಗೆಯಲ್ಲಿನ ಪಾಲ್ಗೊಳ್ಳುವಿಕೆ ಎಲ್ಲಾ ರಾಜ್ಯಗಳಿಗೂ ಪ್ರತಿಷ್ಠೆಯ ಪರಾಕಾಷ್ಠೆಯೂ ಹೌದು.**

### ಪ್ರತಿಷ್ಠೆ ಏಕೆ ?

ಸ್ತಬ್ಧಚಿತ್ರ ಪಾಲ್ಗೊಳ್ಳುವಿಕೆಯಲ್ಲಿ ಪ್ರತಿಷ್ಠೆ ಏಕೆ? ಎಂಬ ಪ್ರಶ್ನೆ ತಮ್ಮ ಮನದಲ್ಲಿ ಮೂಡುವುದು ಸಹಜ. ಭಾರತದ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಮಂತ್ರಿ, ಕೇಂದ್ರ ಸಚಿವ ಸಂಪುಟದ ಸದಸ್ಯರು, ರಾಜ್ಯಸಭೆ ಮತ್ತು ಲೋಕಸಭೆಯ ಪ್ರತಿಪಕ್ಷಗಳ ಮುಖಂಡರು, ಉಭಯ ಸದನಗಳ ನಾಯಕರು, ಸಮಾರಂಭ ವೀಕ್ಷಿಸಲು ಗೌರವಾನ್ವಿತ 'ಅತಿಥಿಯಾಗಿ ಆಗಮಿಸುವ ವಿದೇಶೀ ರಾಷ್ಟ್ರದ ಅಧ್ಯಕ್ಷರು ಅಥವಾ ಪ್ರಧಾನಮಂತ್ರಿ, ಹಲವಾರು ರಾಜತಾಂತ್ರಿಕರು ಹಾಗೂ ರಾಜಪಥ್‌ನ ಇಕ್ಕೆಲೆಗಳಲ್ಲಿನ ಲಕ್ಷಾಂತರ ಜನಸ್ತೋಮ ಮಾತ್ರವಲ್ಲದೆ, ವಿದ್ಯುನ್ಮಾನ ವಾಹಿನಿಗಳ ಮೂಲಕ ಇಡೀ ಭಾರತ ಮಾತ್ರವಲ್ಲದೆ, ವಿಶ್ವದ ಮೂಲೆಮೂಲೆಗಳಲ್ಲೂ ಕೋಟ್ಯಾಂತರ ಜನರು ಸ್ತಬ್ಧಚಿತ್ರಗಳ ಮೆರವಣಿಗೆಯನ್ನು ಕಣ್ತುಂಬಿಕೊಳ್ಳುತ್ತಾರೆ.



Download From : www.kpscvaani.com



### ಆಮಂತ್ರಣ ಎಲ್ಲರಿಗೆ-ಆಯ್ಕೆ ಕೆಲವರಿಗೆ

ಭಾರತದಲ್ಲಿನ ಎಲ್ಲಾ 28 ರಾಜ್ಯಗಳೂ ಹಾಗೂ ಎಂಟು ಕೇಂದ್ರಾಡಳಿತ ಪ್ರದೇಶಗಳಿಗೂ ಗಣರಾಜ್ಯೋತ್ಸವ ದಿನಾಚರಣೆಯ ಸುಸಂದರ್ಭದಲ್ಲಿ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯವು ಆಮಂತ್ರಣವನ್ನು ನೀಡುತ್ತದೆಯಾದರೂ, ಐತಿಹಾಸಿಕ ಅಥವಾ ಸಮಕಾಲೀನ ವಿಷಯದ ಮಹತ್ವ, ಒಂದು ರಾಜ್ಯದ ಅಥವಾ ಒಂದು ರಾಜ್ಯದಲ್ಲಿನ ಒಂದು ಪ್ರದೇಶದ ಕಲೆ ಮತ್ತು ಸಂಸ್ಕೃತಿ ಬಿಂಬಿಸುವ ವಸ್ತು, ಸಂಗೀತ ಮಾಧುರ್ಯದ ಪ್ರಸ್ತುತಿಯನ್ನು ಆಧರಿಸಿ ಕೇವಲ 15 ರಾಜ್ಯಗಳು ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡುತ್ತದೆ.

ಸ್ತಬ್ಧಚಿತ್ರದ ವಿಷಯ-ವಸ್ತುವನ್ನು ಇಡೀ ದೇಶವೇ ಗಮನಿಸುವುದರಿಂದ ಆ ವಿಷಯ-ವಸ್ತುವಿಗೆ ಸಹಜವಾಗಿ ಪ್ರಾಮುಖ್ಯತೆ ದೊರೆಯುತ್ತದೆ. ಒಂದು ವಸ್ತು ಅಥವಾ ವಿಷಯಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವಲ್ಲಿ ಸಫಲತೆ ಕಾಣುವ ಸ್ತಬ್ಧಚಿತ್ರವು ಪ್ರವಾಸಿಗರನ್ನು ಆಕರ್ಷಿಸಿ ರಾಜ್ಯ ಪ್ರವಾಸೋದ್ಯಮಕ್ಕೆ ಪುಷ್ಠಿ ನೀಡುತ್ತದೆ ಎಂಬ ಅಂಶ ಸಾಬೀತಾಗಿದೆ. ಈ ಕಾರಣದಿಂದ ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದು ರಾಜ್ಯ ಸರ್ಕಾರಗಳಿಗೆ ಪ್ರತಿಷ್ಠೆಯ ಪ್ರತೀಕವಾಗಿದೆ. ಗಣರಾಜ್ಯೋತ್ಸವದ ಸಂದರ್ಭದಲ್ಲಿ ನವದೆಹಲಿಯ ರಾಜಪಥದಲ್ಲಿ ಕೆಲವೇ ನಿಮಿಷಗಳು ರಾರಾಜಿಸುವ ಸ್ತಬ್ಧಚಿತ್ರಗಳ ನಿರ್ಮಾಣದ ಹಿಂದಿನ ಕಥೆಯ ಅನಾವರಣಗೊಳಿಸುವ ಸಣ್ಣ ಪ್ರಯತ್ನವೇ ಈ ಲೇಖನ.

### ಸ್ತಬ್ಧಚಿತ್ರ ವಿಷಯ ಆಯ್ಕೆ ಹೇಗೆ ?

ಪ್ರತೀ ವರ್ಷ ಆಗಸ್ಟ್ ಮೊದಲ ವಾರದಲ್ಲಿ ಗಣರಾಜ್ಯೋತ್ಸವ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಭಾರತ ಸರ್ಕಾರವು ಎಲ್ಲಾ ರಾಜ್ಯ ಸರ್ಕಾರಗಳಿಗೂ ಆಮಂತ್ರಣವನ್ನು ನೀಡುತ್ತದೆ. ಬಹುತೇಕ ರಾಜ್ಯಗಳಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕೆಲವು ರಾಜ್ಯಗಳಲ್ಲಿ ಸಂಸ್ಕೃತಿ ಇಲಾಖೆಗಳು ಸ್ತಬ್ಧಚಿತ್ರ ನಿರ್ಮಾಣ ಕಾರ್ಯಕ್ಕೆ ಅಣಿಯಾಗುತ್ತವೆ.

ಆಯಾ ರಾಜ್ಯ ಸರ್ಕಾರದ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಸಂಸ್ಕೃತಿ ಇಲಾಖೆ, ಕಲಾ ಶಾಲೆಯ ಮುಖ್ಯಸ್ಥರು ಹಾಗೂ ಪ್ರತಿಷ್ಠಿತ ಕಲಾವಿದರೋರ್ವರನ್ನು ಒಳಗೊಂಡ ವಿಷಯ ತಜ್ಞರ ಸಮಿತಿಯು ಆಯಾ ವರ್ಷಕ್ಕೆ ಅನುಗುಣವಾಗಿ ಸ್ತಬ್ಧಚಿತ್ರಕ್ಕೆ ಸರಿಹೊಂದುವ ಕನಿಷ್ಠ ಮೂರು ಅಥವಾ ಗರಿಷ್ಠ ಐದು ಸಮಯೋಚಿತ ಹಾಗೂ ಸಂದರ್ಭೋಚಿತ ವಿಷಯ-ವಸ್ತುಗಳನ್ನು ಆಯ್ಕೆ ಮಾಡಿ, ಆಗಸ್ಟ್ ಮಾಸಾಂತ್ಯದೊಳಗೆ ರಕ್ಷಣಾ ಮಂತ್ರಾಲಯಕ್ಕೆ ಕಳುಹಿಸುತ್ತದೆ.

ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳ ಕೊನೆಯ ವಾರದಲ್ಲಿ ಅಥವಾ ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ರಕ್ಷಣಾ ಮಂತ್ರಾಲಯದಲ್ಲಿ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಸಂಗೀತ, ನೃತ್ಯ ಮತ್ತು ನಾಟಕ ಒಳಗೊಂಡಂತೆ ಕಲೆ ಮತ್ತು ಸಂಸ್ಕೃತಿ ಅರಿತಿರುವ, ಭೌಗೋಳಿಕ ಇತಿಹಾಸ ಮತ್ತು ಪರಂಪರೆಯ ಹಿನ್ನೆಲೆಯನ್ನು ಸಂಪೂರ್ಣವಾಗಿ ಬಲ್ಲ, ಸೇನಾ ಶಿಸ್ತು ಮತ್ತು ಶಿಷ್ಟಾಚಾರ, ಭದ್ರತೆ ಮತ್ತು ರಕ್ಷಣೆಯ ವಿಚಾರವನ್ನು ಸಮಗ್ರವಾಗಿ ತಿಳಿದಿರುವ ವಿಷಯ ತಜ್ಞರನ್ನು ಒಳಗೊಂಡ ಆಯ್ಕೆ ಸಮಿತಿಯು ರಾಜ್ಯ ಸರ್ಕಾರಗಳಿಂದ ಸ್ವೀಕೃತವಾಗುವ ಎಲ್ಲಾ ವಸ್ತು-ವಿಷಯಗಳನ್ನು ಆಯಾ ರಾಜ್ಯದ ಅಧಿಕಾರಿಗಳು ಹಾಗೂ ಕಲಾ ನಿರ್ದೇಶಕರ ಸಮ್ಮುಖದಲ್ಲಿಯೇ ವಿಶ್ಲೇಷಿಸಿ ವಿಮರ್ಶಿಸುತ್ತದೆ. ಆ ವರ್ಷದ ಗಣರಾಜ್ಯೋತ್ಸವಕ್ಕೆ ಸೂಕ್ತವಾದ ವಸ್ತು ವಿಷಯದ ಆಯ್ಕೆ ಮಾಡುತ್ತದೆ.

### ವಿನ್ಯಾಸ ಮೊದಲು

ಇಲ್ಲಿಂದ ಆಯ್ಕೆ ಪ್ರಕ್ರಿಯೆ ಗಂಭೀರ ಸ್ವರೂಪ ಪಡೆಯುತ್ತದೆ. ವಸ್ತು ವಿಷಯಕ್ಕೆ ಅನುಗುಣವಾಗಿ ಮೊದಲು ವಿನ್ಯಾಸವನ್ನು ರೂಪಿಸಿ ಸಲ್ಲಿಸಲು ಸಮಿತಿಯು ಸೂಚಿಸುತ್ತದೆ. ವಿನ್ಯಾಸವು ಸೂಕ್ತವಾಗಿ ಕಾಣದಿದ್ದಲ್ಲಿ ತಜ್ಞರ ಸಮಿತಿಯು ರಾಜ್ಯಗಳಿಗೆ ಮತ್ತೊಂದು ಅವಕಾಶ ನೀಡುತ್ತದೆ. ಆಗಲೂ ವಿನ್ಯಾಸದಲ್ಲಿ ಸುಧಾರಣೆ ಕಂಡುಬಾರದಿದ್ದಲ್ಲಿ ಆ ರಾಜ್ಯದ ಅವಕಾಶ ಅಲ್ಲೇ ಕೈ ತಪ್ಪಿಹೋಗುತ್ತದೆ.

### ಕೀಲಿ ಮಾದರಿ ಮತ್ತು ಸಂಗೀತ

ವಿನ್ಯಾಸದಲ್ಲಿ ವಿಜಯಿಯಾದ ರಾಜ್ಯಗಳು ನಂತರ ಕೀಲಿ ಮಾದರಿ (ಕೀ ಮಾಡೆಲ್) ಸಿದ್ಧಪಡಿಸಿ ಸಮಿತಿಯ ಮುಂದೆ ಹಾಜರು ಪಡಿಸಬೇಕಾಗುತ್ತದೆ. ಕೀಲಿ ಮಾದರಿಯಲ್ಲಿ ಆಯ್ಕೆಯಾದ ಸ್ತಬ್ಧಚಿತ್ರವು ಮೂಲ ವಿನ್ಯಾಸವನ್ನು ಹೋಲುತ್ತದೆಯೇ? ಎಂಬ ಅಂಶವನ್ನು ಮೊದಲು ಸಮಿತಿಯು ಪರಿಶೀಲಿಸುತ್ತದೆ. ಕೀಲಿ ಮಾದರಿ ತೃಪ್ತಿಕರವಾಗಿದ್ದರೆ ಸ್ತಬ್ಧಚಿತ್ರವು ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗುತ್ತದೆ. ಇಲ್ಲವಾದಲ್ಲಿ, ಆಯ್ಕೆ ಪ್ರಕ್ರಿಯೆಯಿಂದ ಹೊರಬೀಳುತ್ತದೆ.

ಕೀಲಿ ಮಾದರಿಯು ಆಯ್ಕೆಗೊಂಡ ಕೂಡಲೇ ವಸ್ತು ವಿಷಯಕ್ಕೆ ಹೊಂದುವ 65 ಸೆಕೆಂಡುಗಳಿಗೆ ಸೀಮಿತಗೊಂಡ ಸಂಗೀತವನ್ನೂ ರಾಜ್ಯಗಳು ಪ್ರಸ್ತುತ ಪಡಿಸಬೇಕಾಗುತ್ತದೆ. ಈ ಹಂತದಲ್ಲಿ ಸಂಗೀತ ಸಂಯೋಜಕರ ಪಾತ್ರ ಮಹತ್ವ





Download From : www.kpscvaani.com

ಪಡೆದುಕೊಳ್ಳುತ್ತದೆ. ಗಣ್ಯಾತಿಗಣ್ಯರ ಮುಂದೆ ಸಾದರಪಡಿಸುವ ಸಂಗೀತವು ಕೇಳುಗರಿಗೆ ಇಂಪೆನ್ನಿಸಬೇಕು ಹಾಗೂ ಚಪ್ಪಾಳೆ ಗಳಿಸಲು ಮುದ ನೀಡುವಂತೆ ಇರಬೇಕು ಎಂಬುದು ಸಮಿತಿಯ ಸದಾಶಯವಾಗಿರುತ್ತದೆ.

**ಸೂಚನೆ–ಮಾರ್ಗದರ್ಶನ**

ಕೀಲಿ ಮಾದರಿಯಲ್ಲಿ ಆಯ್ಕೆಗೊಂಡ ಸ್ತಬ್ಧಚಿತ್ರಗಳನ್ನು ನೈಸರ್ಗಿಕವಾಗಿ ಮನಮೋಹಕವಾಗಿ ರೂಪಿಸುವುದು ಹೇಗೆ? ಎಂಬ ಬಗ್ಗೆ ರಾಜ್ಯದ ಅಧಿಕಾರಿಗಳ ಸಮ್ಮುಖದಲ್ಲಿ ಕಲಾ ನಿರ್ದೇಶಕರಿಗೆ ಸೂಚನೆ ನೀಡುವ ತಜ್ಞರ ಸಮಿತಿಯು ಬಣ್ಣ ಮತ್ತು ಗಾತ್ರಗಳಲ್ಲಿ ಅವಶ್ಯಕ ಮಾರ್ಪಾಡು ಮಾಡಲು ತಿಳಿಸಿ ಸ್ತಬ್ಧಚಿತ್ರವನ್ನು ಆಕರ್ಷಣೀಯವಾಗಿಸಲು ಸಲಹೆ ನೀಡುತ್ತದೆ. ಅಂತೆಯೇ, ಸಂಗೀತವನ್ನೂ ಮತ್ತಷ್ಟು ಉತ್ತಮೀಕರಿಸುವುದು ಹೇಗೆ? ಎಂಬ ಬಗ್ಗೆಯೂ ಸಮಿತಿಯು ಬೆಳಕು ಚೆಲ್ಲಿ ರಾಜ್ಯಗಳಿಗೆ ಮಾರ್ಗದರ್ಶನ ಮಾಡುತ್ತದೆ.

ಒಮ್ಮೆ ಕೀಲಿ ಮಾದರಿಯ ವಿನ್ಯಾಸವನ್ನು ಸಮಿತಿಯು ಅನುಮೋದಿಸಿದಲ್ಲಿ ಅದುವೇ ಅಂತಿಮ. ಮತ್ತೆ ಬದಲಾವಣೆಗಳಿಗೆ ಅವಕಾಶ ಇರುವುದಿಲ್ಲ. ನಂತರ, ರೂಪುಗೊಳ್ಳುವ ಸ್ತಬ್ಧಚಿತ್ರವು ಎಲ್ಲಾ ರೀತಿಯಲ್ಲೂ ಅನುಮೋದಿತ ಕೀಲಿ ಮಾದರಿಯಂತೆಯೇ ಮೈದೇಳಬೇಕಾಗುತ್ತದೆ. ಅದೇ ರೀತಿ, ಒಮ್ಮೆ ಅಂಗೀಕೃತವಾದ ಸಂಗೀತವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವಂತಿಲ್ಲ. ಗೀತರಚನೆ, ರಾಗ, ತಾಳ, ಮಾಧುರ್ಯ, ಗಾಯನ ಎಲ್ಲವೂ ತಜ್ಞರ ಸಮಿತಿಯು ಅಂಗೀಕರಿಸಿದಂತೆಯೇ ಇರಬೇಕು.

**ಕೀಲಿ ಮಾದರಿಯೇ ಅಳತೆಗೋಲು**

ಸ್ತಬ್ಧಚಿತ್ರ ರೂಪಿಸಲು ಕೀಲಿ ಮಾದರಿಯೇ ಅಳತೆಗೋಲು ಅಥವಾ ಮಾಪನ ಎಂದು ಬಣ್ಣಿಸಬಹುದು. ಸಾಮಾನ್ಯವಾಗಿ 45 ಇಂಚು ಉದ್ದ, 16 ಇಂಚು ಎತ್ತರ ಹಾಗೂ 15 ಇಂಚು ಅಗಲ ಇರುವ ಕೀಲಿ ಮಾದರಿಯನ್ನು ಆಧರಿಸಿಯೇ 45 ಅಡಿ ಉದ್ದ, 16 ಅಡಿ ಎತ್ತರ ಹಾಗೂ 15 ಅಡಿ ಅಗಲದ ಸ್ತಬ್ಧಚಿತ್ರವು ನಿರ್ಮಾಣವಾಗುತ್ತದೆ.

**ಒಂದು ಸ್ತಬ್ಧಚಿತ್ರ ನಿರ್ಮಾಣದ ಹಿಂದೆ ನೂರುಜನ**

ಓರ್ವ ಕಲಾ ನಿರ್ದೇಶಕರು, ಹತ್ತಾರು ಕಲಾ ವಿನ್ಯಾಸಗಾರರು, ಕುಸುರಿ ಕಲೆಯಲ್ಲಿ ತೊಡಗುವ ಇಪ್ಪತ್ತಕ್ಕೂ ಹೆಚ್ಚು ಕುಶಲಕರ್ಮಿಗಳು, ಇಪತ್ತಕ್ಕೂ ಹೆಚ್ಚು ಕಲಾಕಾರರು ಹಾಗೂ ಚಿತ್ರಕಲಾಕಾರರು, ಬಡಗಿಗಳು, ವಿದ್ಯುತ್ ಕಾರ್ಮಿಕರು. ಹತ್ತಕ್ಕೂ ಹೆಚ್ಚು ನಾಟಕ ಮತ್ತು ನೃತ್ಯ ಕಲಾವಿದರು, ಪ್ರಸಾದನಕಾರರು, ಸಂಗೀತ ಸಂಯೋಜಕರು ಹಾಗೂ ವಾದ್ಯಗೋಷ್ಠಿಯ ತಂಡ, ಸರ್ಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿ ಹೀಗೆ ಒಂದು ನೂರಕ್ಕೂ ಹೆಚ್ಚು ಜನರ ಶ್ರಮ ಹಾಗೂ ಐವತ್ತಕ್ಕೂ ಹೆಚ್ಚು ದಿನಗಳ ಪರಿಶ್ರಮ ಒಂದು ಸ್ತಬ್ಧಚಿತ್ರದ ನಿರ್ಮಾಣದ ಹಿಂದೆ ಇದೆ ಎಂದರೆ ತಾವೂ ಕೂಡಾ ಅಚ್ಚರಿಗೆ ಒಳಗಾಗಿ ಬಹುಶಃ ಒಂದು ನಿಮಿಷ ಸ್ತಬ್ಧವಾಗುವಿರಿ. ಆದರೆ, ಇದು ನೂರಕ್ಕೆ ನೂರು ಸತ್ಯ.

ಅಲ್ಲದೆ, ಸ್ತಬ್ಧಚಿತ್ರ ಚಲಿಸುವಾಗ ನೋಡುಗರ ಕಣ್ಣಿಗೆ ಕಾಣದ ಓರ್ವ ಟ್ರಾಕ್ಟರ್ ಚಾಲಕ ಹಾಗೂ ಟ್ರಾಕ್ಟರ್ ಹಿಂಭಾಗದ ಟ್ರೇಲರ್‌ನ ಅಡಿಯಲ್ಲಿ ಕುಳಿತು ಸ್ತಬ್ಧಚಿತ್ರಕ್ಕೆ ಪೂರಕವಾಗಿ ಸಕಾಲದಲ್ಲಿ ಬೆಳಕು ಹೊರಹೊಮ್ಮಿಸಲು ಹಾಗೂ ಸಂಗೀತವನ್ನು ಮೊಳಗಿಸಲು ಓರ್ವ ಬೆಳಕು ಮತ್ತು ಓರ್ವ ಧ್ವನಿ ನಿಯಂತ್ರಕರೂ ಒಳಗೊಂಡಂತೆ ನಾಲ್ವರು ತಂತ್ರಜ್ಞರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಟ್ರಾಕ್ಟರ್‌ನ ಜೊತೆಯಲ್ಲಿಯೇ ಶಿಸ್ತಿನ ನಡೆಯಿಂದ ಹೆಜ್ಜೆ ಹಾಕುತ್ತಾ ಮುನ್ನಡೆಯುವ ಸೈನಿಕನ ಹೆಜ್ಜೆಗಳನ್ನು ಸಣ್ಣ ಕಿಂಡಿಯಿಂದ ಕಂಡು ಟ್ರಾಕ್ಟರ್‌ನ ಚಾಲಕ ವಾಹನವನ್ನು ಚಲಿಸುತ್ತಾನೆ ಎಂಬ ಸತ್ಯವನ್ನು ಅರಿತರೆ ಯಾರಿಗೇ ಆಗಲಿ ಸೋಜಿಗ ಮಾತ್ರವಲ್ಲ, ರೋಮಾಂಚನವೂ ಉಂಟಾಗುತ್ತದೆ ಅಲ್ಲವೇ.

**ವಿಜಯನಗರ : ವಿಜಯದ ನಗರ**

ಕರ್ನಾಟಕ ರಾಜ್ಯದ ಈ ಬಾರಿಯ ಸ್ತಬ್ಧಚಿತ್ರದ ವಿಷಯ " ವಿಜಯನಗರ : ವಿಜಯದ ನಗರ ". ಸಂಗಮ ವಂಶದ ಹರಿಹರ–1 ಮತ್ತು ಬುಕ್ಕರಾಯ–1 ಸೋದರರಿಂದ ತುಂಗಭದ್ರಾ ನದಿಯ ದಡದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಸಾರುವ ಈ ಸ್ತಬ್ಧಚಿತ್ರವು ಜನಸಾಮಾನ್ಯರಿಂದ ಹಿಡಿದು ಗಣ್ಯಾತಿಗಣ್ಯರ ಮೆಚ್ಚುಗೆಗೆ ಪಾತ್ರವಾದದ್ದು ಕನ್ನಡಿಗರೆಲ್ಲರಿಗೂ ಅಭಿಮಾನದ ಸಂಗತಿ.

ವಿಜಯನಗರದ ರಾಜಧಾನಿ ಹಂಪಿಯ ಕೇಂದ್ರ ಬಿಂದು ಉಗ್ರ ನರಸಿಂಹ, ಭಗವಾನ್ ಹನುಮನ ಜನ್ಮಸ್ಥಳ ಎಂದು ಹೇಳಲಾಗುವ ಅಂಜನಾದ್ರಿ ಬೆಟ್ಟದ ಮೇಲೆ ವೀರ ಹನುಮನ ಮೂರ್ತಿ, ವಿಜಯನಗರದ ಸಾಮ್ರಾಟ ಶ್ರೀ ಕೃಷ್ಣದೇವರಾಯನ ಪಟ್ಟಾಭಿಷೇಕ ಸಮಾರಂಭ, ವಿಜಯನಗರದ ವಿಶೇಷ ಸಂಗೀತ ಸ್ಥಂಬಗಳು ಹಾಗೂ ಹಜಾರ ರಾಮ ದೇವಾಲಯದಲ್ಲಿನ ರಾಮಾಯಣದ ಕಥಾನಕವನ್ನು ತಿಳಿಸುವ ಭಿತ್ತಿಚಿತ್ರಗಳು ಈ ಬಾರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಸ್ತುತಪಡಿಸಿದ ಸ್ತಬ್ಧಚಿತ್ರದ ವಿಶೇಷತೆಗಳು.

ಸ್ತಬ್ಧಚಿತ್ರದ ಬಹುಭಾಗ ಬೆಂಗಳೂರಿನ ಹೊರವಲಯದ ಹೆಸರುಘಟ್ಟದಲ್ಲಿ ತಯಾರಾಗಿ 14–ಚಕ್ರಗಳ ಎರಡು ಬೃಹತ್ ವಾಹನಗಳಲ್ಲಿ ನವದೆಹಲಿಯ ರಕ್ಷಣಾ ಮಂತ್ರಾಲಯದ ಸ್ವಾಮ್ಯದ ರಾಷ್ಟ್ರೀಯ ರಂಗಶಾಲಾ ಶಿಬಿರದಲ್ಲಿ ಮೂರ್ತರೂಪ ಪಡೆದುಕೊಂಡವು.

ಸುಪ್ರಸಿದ್ಧ ಕಲಾ ನಿರ್ದೇಶಕ ಶಶಿಧರ ಅಡಪ ಮತ್ತು ಅವರ ಅಸಂಖ್ಯ ಬಳಗದ ಪರಿಶ್ರಮದ ಕೊಡುಗೆ, ಹೆಸರಾಂತ ಸಂಗೀತ ನಿರ್ದೇಶಕ ಪ್ರವೀಣ್ ಡಿ ರಾವ್ ಅವರ ರಾಗ ಸಂಯೋಜನೆ, ಶಿವಮೊಗ್ಗ ರಂಗಾಯಣದ ನಿರ್ದೇಶಕ ಹಾಗೂ ರಂಗತಜ್ಞ ಸಂದೀಪ್ ಜವಳಿ ಅವರ ಗರಡಿಯಲ್ಲಿ ಬೆಳೆದ 12 ರಂಗಕಲಾವಿದರು, ಹೆಜ್ಜೆ–ಹೆಜ್ಜೆಗೂ ಪ್ರೋತ್ಸಾಹದ ಧಾರೆ ಎರೆದು ಮಾರ್ಗದರ್ಶನ ಮಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಡಾ. ಪಿ. ಎಸ್. ಹರ್ಷ ಅವರು ಸ್ತಬ್ಧಚಿತ್ರ ನಿರ್ಮಾಣದ ಯಶೋಗಾಥೆಯ ತೆರೆಮರೆಯ ನಾಯಕರು.

ಇದು ನಮ್ಮ ಸ್ತಬ್ಧಚಿತ್ರ ನಿರ್ಮಾಣದ ಹಿಂದಿನ ಕಥೆ. ಕೆಲವು ನಿಮಿಷಗಳು ತಾವು ನೋಡುವ ಸ್ತಬ್ಧಚಿತ್ರದ ನಿರ್ಮಾಣದಲ್ಲಿ ಹಲವರ ಶ್ರಮ ಹಾಗೂ ಹಲವು ತಿಂಗಳುಗಳ ಪರಿಶ್ರಮವಿದೆ ಎಂಬುದನ್ನು ತಮಗೆ ಪರಿಚಯಿಸಲು ಪ್ರಯತ್ನಿಸಿದ ನಾನೂ ಕೂಡಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಈ ಬಾರಿಯ ಸ್ತಬ್ಧಚಿತ್ರ ನಿರ್ಮಾಣದಲ್ಲಿ ಅಳಿಲು ಸೇವೆ ಮಾಡುವ ಸದವಕಾಶ ಪಡೆದಿದ್ದೆ ಎಂಬುದು ಸಂತೃಪ್ತಿ ಮಾತ್ರವಲ್ಲ, ನನ್ನಲ್ಲಿ ಧನ್ಯತಾಭಾವ ಮೂಡಿಸಿದೆ.



Download From : www.kpscvaani.com



# ಗೃಹ ರಕ್ಷಕ ದಳದವರಿಗೆ ಛಾಯಾಚಿತ್ರ ಹಾಗೂ ಕಿರುಚಿತ್ರ ತಯಾರಿಕೆ ಕುರಿತು ಕಾರ್ಯಾಗಾರ

ಜಡಿಯಪ್ಪ ಗೆದ್ದಲಗಟ್ಟಿ

ಯಾವುದೇ ತುರ್ತು ಸಂದರ್ಭ, ಪ್ರಕೃತಿ ವಿಕೋಪ ಸೇರಿದಂತೆ ಅನೇಕ ದೊಡ್ಡ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ತಮ್ಮಷ್ಟಕ್ಕೆ ತಾವೇ ಕಾರ್ಯನಿರ್ವಹಿಸುವ ಗೃಹ ರಕ್ಷಕ ದಳದ ಸಿಬ್ಬಂದಿಗಳು ಒಂದು ರೀತಿಯಲ್ಲಿ ಸಮಾಜದಲ್ಲಾಗುವ ಎಲ್ಲಾ ಘಟನೆಗಳ ಸಾಕ್ಷತ್ ಪ್ರತ್ಯಕ್ಷದರ್ಶಿಗಳು. ಇಂತಹ ಗೃಹ ರಕ್ಷಕ ದಳದವರರನ್ನು ಯಾವುದೇ ಘಟನೆಯಾದಾಗ ಅಥವಾ ಘಟನೆಯಾಗುವ ಮುನ್ಸೂಚನೆ ಇದ್ದಾಗ ಅವರನ್ನು ತಕ್ಷಣವೇ ಘಟನೆಯ ಸ್ಥಳಕ್ಕೆ ನಿಯೋಜಿಸಲಾಗುತ್ತದೆ. ಹೆಸರೇ ಹೇಳುವಂತೆ ಗೃಹ ರಕ್ಷಕರು ಒಂದು ರೀತಿಯಲ್ಲಿ ಭಾರತ ದೇಶವೆಂಬ ಮನೆಯನ್ನು ಮತ್ತು ಮನೆಯೊಳಗಾಗುವ ಅವಘಡಗಳನ್ನು ನಿಯಂತ್ರಿಸುವವರು ಮತ್ತು ಪ್ರಕೃತಿ ವಿಕೋಪಗಳಾದಾಗ ಸಾರ್ವಜನಿಕರ ರಕ್ಷಣೆಯಲ್ಲಿ ಮಹತ್ತರ ಪಾತ್ರವಹಿಸುತ್ತಾರೆ.

ಬಿಸಿಲು, ಮಳೆ, ಚಳಿ, ಗಾಳಿ ಯಾವುದನ್ನೂ ಲೆಕ್ಕಿಸದೆ ತಮ್ಮದಲ್ಲದ ಕಷ್ಟಗಳನ್ನು ತಮ್ಮದಾಗಿಸಿಕೊಂಡು ಸದಾ

> ಗೃಹ ರಕ್ಷಕ ದಳದವರಿಗೆ ಛಾಯಾಚಿತ್ರ ಹಾಗೂ ಕಿರುಚಿತ್ರ ತಯಾರಿಕೆ ಕುರಿತು ತರಬೇತಿ ನೀಡುವ ಮೂಲಕ ಅವರು ತೆಗೆಯುವ ಫೋಟೋ ಮತ್ತು ವಿಡಿಯೋಗಳು ಇನ್ನಷ್ಟು ಸಮಾಜಮುಖಿ ಕಾರ್ಯಗಳನ್ನು ಕೌಶಲ್ಯ ಪೂರ್ಣವಾಗಿ ದಾಖಲಿಸುವಂತೆ ಮಾಡುವುದು ಈ ಕಾರ್ಯಗಾರದ ಉದ್ದೇಶವಾಗಿತ್ತು.





Download From : www.kpscvaani.com

ಸೇವೆಗೆ ಸನ್ನದ್ಧರಾಗಿ ನಿಂತಿರುವವರೇ ಗೃಹ ರಕ್ಷಕ ದಳ ಸಿಬ್ಬಂದಿ. ನಿತ್ಯ ಜೀವನದಲ್ಲಿ ಮುಖಾಮುಖಿಯಾಗುವ ಸಂಕಷ್ಟಗಳಿಗೆ ದನಿಯಾಗಿ ನೆರೆ ಹಾವಳಿ, ಪ್ರವಾಹ, ಚಂಡಮಾರುತ, ಬೆಂಕಿ ಅನಾಹುತದಂತ ವಿಪತ್ತಿನ ಸಮಯದಲ್ಲಾಗಲಿ ರಕ್ಷಣಾ ಕರ್ತವ್ಯ, ಸಂಚಾರ ನಿಯಂತ್ರಣದಂತ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂತ ಕಾರ್ಯಗಳಿಗೆ ಆಗಲಿ ಅಲ್ಲೆಲ್ಲ ಗೃಹ ರಕ್ಷಕ ಸಿಬ್ಬಂದಿಯ ಹಾಜರಿ ನೂರಕ್ಕೆ ನೂರರಷ್ಟು.

ನಿತ್ಯ ಜೀವನದಲ್ಲಿ ಗೃಹರಕ್ಷಕ ಸಿಬ್ಬಂದಿ ಕಾರ್ಯನಿರತರಾದಾಗ ಇತರರಿಗೆ ಮಾದರಿಯಾಗುವಂಥ ಅನೇಕ ಕೆಲಸಗಳನ್ನು ನಿರ್ವಹಿಸುತ್ತಾರೆ. ಅವರು ಮಾಡುವ ಸುದುದ್ದೇಶಪೂರಿತ ಕಾರ್ಯಗಳು ದಾಖಲಾಗಿ ಒಂದು ಕಡೆ ಸಂಗ್ರಹವಾಗಿ ಸಮಾಜವನ್ನು ತಲುಪುವಂತಾದರೆ ಅವರ ನಿಸ್ವಾರ್ಥ, ಸ್ವಯಂ ಸೇವೆ ಸಾರ್ಥಕವಾಗುತ್ತದೆ.

ಅನೇಕ ಘಟನೆಗಳಿಗೆ ಸ್ಥಳದಲ್ಲಿದ್ದು ಕಣ್ಣಾರೆ ಕಾಣುವ ಅನೇಕ ಸಂಗತಿಗಳನ್ನು ದಾಖಲಿಸಲು ಹಾಗೂ ಸರ್ಕಾರಕ್ಕೆ ಘಟನೆ ಕುರಿತು ದಾಖಲೆಗಳನ್ನು ಒದಗಿಸಲು ಗೃಹ ರಕ್ಷಕ ದಳಕ್ಕಿಂತ ಮತ್ತೊಬ್ಬರಿಗೆ ಸಾಧ್ಯವಿಲ್ಲ. ಇದನ್ನು ಅರಿತ ಮೂಲ ಪೊಲೀಸ್ ಉನ್ನತಾಧಿಕಾರಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ.ಪಿ.ಎಸ್. ಹರ್ಷ ಅವರು ಗೃಹ ರಕ್ಷಕ ದಳದವರಿಗೆ ಸ್ಥಿರ ಛಾಯಾಚಿತ್ರ ಹಾಗೂ ವಿಡೀಯೋಗ್ರಫಿ ಮೂಲಕ ಕಿರುಚಿತ್ರಗಳನ್ನು ತೆಗೆಯುವ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಹೊಸ ಆಲೋಚನೆಯನ್ನು ಮಾಡಿ ಸಂಬಂಧಪಟ್ಟ ಇಲಾಖೆಯ ಉನ್ನತಾಧಿಕಾರಿಗಳಿಗೆ ಮನವರಿಕೆ ಮಾಡಿ ಎರಡು ದಿನಗಳ "ಚಿತ್ರಗ್ರಹಣ ಮತ್ತು ಕಿರುಚಿತ್ರ ಕಾರ್ಯಾಗಾರ" ವನ್ನು ಹಮ್ಮಿಕೊಳ್ಳಲಾಗಿತ್ತು.

**ತುರ್ತು ಸಂದರ್ಭ ಹಾಗೂ ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ಸ್ಥಳದಲ್ಲಿದ್ದು ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುವ ಗೃಹ ರಕ್ಷಕ ದಳದ ಸಿಬ್ಬಂದಿಗಳು ಘಟನೆಯ ಪರಿಣಾಮಗಳನ್ನು ಕಣ್ಣಾರೆ ಕಂಡು ಅನುಭವಿಸಿರುತ್ತಾರೆ. ಹಾಗೂ ಮಾಧ್ಯಮ ಮತ್ತು ಸಮಾಜದ ನಡುವಿನ ಕೊಂಡಿಯಂತೆ ಮಾಹಿತಿ ಒದಗಿಸುತ್ತಾರೆ, ಇಂತಹ ಸಿಬ್ಬಂದಿಗಳಿಗೆ ಛಾಯಾಚಿತ್ರ ಮತ್ತು ಕಿರುಚಿತ್ರ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ಅತ್ಯಂತ ಅರ್ಥಗರ್ಭಿತ.**

**ಡಾ. ಅಮರ್ ಕುಮಾರ್ ಪಾಂಡೆ**
ಆರಕ್ಷಕ ಮಹಾ ನಿರ್ದೇಶಕರು

ವೃತ್ತಿ ಜೀವನದಲ್ಲಿ ಗೃಹರಕ್ಷಕ ಸಿಬ್ಬಂದಿಗಳು ಫೋಟೋ ಮತ್ತು ವಿಡಿಯೋಗಳ ಮೂಲಕ ಚಿತ್ರಿಸುವ ಸಮಾಜಮುಖಿ ಕಾರ್ಯಗಳು ಇನ್ನಷ್ಟು ಕೌಶಲ್ಯ ಪೂರ್ಣವಾಗಿ ದಾಖಲಾಗಲಿ, ಸಾಮಾಜಿಕ ಜಾಲತಾಣಗಳ ಮೂಲಕ ಜನರಿಗೆ ತಲುಪಲಿ ಎನ್ನುವ ಉದ್ದೇಶದಿಂದ ಚಿತ್ರಗ್ರಹಣ ಮತ್ತು ಕಿರುಚಿತ್ರ ಕಾರ್ಯಾಗಾರವನ್ನು ನಡೆಸಲಾಯಿತು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗೃಹ ರಕ್ಷಕ ದಳ ಹಾಗೂ ಪೌರ ರಕ್ಷಣಾ ಅಕಾಡೆಮಿ ಸಹಯೋಗದಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಗಳಿಗಾಗಿ ಬೆಂಗಳೂರಿನ ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆಯಲ್ಲಿರುವ ಗೃಹ ರಕ್ಷಕ ದಳ ಹಾಗೂ ಪೌರ ರಕ್ಷಣಾ ಅಕಾಡೆಮಿ ಆವರಣದಲ್ಲಿ ಜನವರಿ 11 ಹಾಗೂ 12 ರಂದು ಎರಡು ದಿನಗಳ ಛಾಯಾಚಿತ್ರ ಹಾಗೂ ಕಿರುಚಿತ್ರ ತಯಾರಿಕೆ ಕುರಿತ ಕಾರ್ಯಾಗಾರವನ್ನು ಹಮ್ಮಿಕೊಂಡು ನಾಡಿನ ಖ್ಯಾತ ಛಾಯಾಚಿತ್ರ ಹಾಗೂ ಕಿರುಚಿತ್ರ ತಯಾರಕರಿಂದ ತರಬೇತಿ ನೀಡಲಾಯಿತು.

ಕಾರ್ಯಾಗಾರವನ್ನು ಆರಕ್ಷಕ ಮಹಾನಿರ್ದೇಶಕ ಡಾ. ಅಮರ್ ಕುಮಾರ್ ಪಾಂಡೆ ಅವರು ಉದ್ಘಾಟಿಸಿದರು. ವಿಜಯಕರ್ನಾಟಕ ಸಂಪಾದಕರಾದ ಹರೀಪ್ರಕಾಶ್ ಕೋಣೆಮನೆ, ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾದ ಸುನಿಲ್ ಅಗರ್‌ವಾಲ್, ಹಿರಿಯ ಪತ್ರಕರ್ತ ಕೆ.ಟಿ.ವಾಸುಕಿ ಭಾಗವಹಿಸಿದ್ದರು.

ಮೊದಲ ದಿನದ ಕಾರ್ಯಾಗಾರದಲ್ಲಿ ಖ್ಯಾತ ಛಾಯಾಗ್ರಾಹಕರಾದ ಎಸ್. ಈಶ್ವರ್, ಸಾಗ್ಗರೆ ರಾಮಸ್ವಾಮಿ, ಕೆ.ಗೋಪಿನಾಥ್ ಮತ್ತು ಅನಂತ ಸುಬ್ರಮಣ್ಯಂ ಅವರು ಛಾಯಾಚಿತ್ರ ಹಾಗೂ ಸುದ್ದಿಯ ಕುರಿತು ವಿಷಯ ಮಂಡನೆ ಮಾಡಿದರು.

ಎರಡನೆ ದಿನದ ಕಾರ್ಯಾಗಾರದಲ್ಲಿ ವಿಪತ್ತು ಸಂದರ್ಭಗಳಲ್ಲಿ ಕಿರುಚಿತ್ರ ನಿರ್ಮಾಣ ಕುರಿತು ಮುಂಬೈನ ಎಂ.ಎನ್. ಗುಜಾರ್ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಹಿರಿಯ ಪತ್ರಕರ್ತ ಪರಮೇಶ್ವರ ಭಟ್ ಅವರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 35 ಗೃಹ ರಕ್ಷಕ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಸಮಾರೋಪ ಸಮಾರಂಭದಲ್ಲಿ ಕಾರ್ಯಗಾರದಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಗಳಿಗೆ ಬೆಂಗಳೂರು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಅಮರ್ ಕುಮಾರ್ ಪಾಂಡೆ, ಆರಕ್ಷಕ ಮಹಾ ನಿರ್ದೇಶಕರು, ವಿಶ್ವವಾಣಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್, ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಿ.ರೂಪ ಸೇರಿದಂತೆ ಮತ್ತಿತ್ತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

**ಇದೊಂದು ವಿಶಿಷ್ಟ ಹಾಗೂ ವಿನೂತನ ಕಾರ್ಯಕ್ರಮವಾಗಿದೆ. ವಿಪತ್ತು ನಿರ್ವಹಣೆ ಮತ್ತು ತುರ್ತು ಸಂದರ್ಭಗಳಲ್ಲಿ ಕಾರ್ಯನಿರ್ವಹಿಸುವ ತೆರೆಮರೆಯ ಹೀರೊಗಳು ಗೃಹ ರಕ್ಷಕ ಸಿಬ್ಬಂದಿಗಳು. ಅನೇಕ ಸಂದರ್ಭಗಳಲ್ಲಿ ವಾಸ್ತವತೆಯನ್ನು ಸಾರ್ವಜನಿಕರಿಗೆ ತಿಳಿಸಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಛಾಯಾಚಿತ್ರ ಮತ್ತು ವಿಡಿಯೋ ದಾಖಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಆದ್ದರಿಂದ, ಗೃಹ ರಕ್ಷಕ ದಳದ ಸಿಬ್ಬಂದಿಗಳು ಈ ಕಾರ್ಯಾಗಾರವನ್ನು ಸದುಪಯೋಗಪಡಿಸಿಕೊಳ್ಳಬೇಕು.**

**ಡಾ. ಪಿ. ಎಸ್.ಹರ್ಷ,** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರು.



Download From : www.kpscvaani.com



## ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ

# ಮತ್ಸ್ಯಸಂಪದ ಯೋಜನೆ

**ಮೀನುಗಾರಿಕಾ ಉದ್ಯಮದಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳುವಂತೆ ಮಾಡುವ ಮೂಲಕ ಮೀನುಗಾರರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಪ್ರಧಾನಮಂತ್ರಿ ಮತ್ಸ್ಯ ಸಂಪದ' ಯೋಜನೆಯನ್ನು ಜಾರಿಗೊಳಿಸಿದೆ.**

ಎನ್. ನಾಗರತ್ನಮ್ಮ



ಪ್ರಧಾನಮಂತ್ರಿಗಳ **'ಆತ್ಮನಿರ್ಭರ ಭಾರತ'** ಕಲ್ಪನೆಯಲ್ಲಿ ಎಲ್ಲಾ ಕ್ಷೇತ್ರದಲ್ಲೂ ಸ್ವಯಂ ಉದ್ಯೋಗ ಕೈಗೊಳ್ಳಲು ಉತ್ತೇಜನ ನೀಡಲಾಗುತ್ತಿದೆ. ಅದರಂತೆ ಜಲ ಕೃಷಿಯಲ್ಲಿ ತೊಡಗಿರುವ ಮೀನುಗಾರರನ್ನು ದೃಷ್ಟಿಯಲ್ಲಿಟ್ಟುಕೊಂಡು 'ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ'ಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಧಾನಮಂತ್ರಿಗಳು ದೇಶದ ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ರೂ.20,050 ಕೋಟಿ ವೆಚ್ಚದಲ್ಲಿ 'ಮತ್ಸ್ಯ ಸಂಪದ ಯೋಜನೆ'ಯನ್ನು ಜಾರಿಗೊಳಿಸಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ರೂ.3,000 ಕೋಟಿ ಅನುದಾನ ಲಭ್ಯವಾಗಲಿದೆ. ಈ ಸಂಬಂಧ 2020-21ನೇ ಸಾಲಿನಿಂದ ಮುಂದಿನ ಐದು ವರ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ. ಹಾಗಾಗಿ ವಿಶ್ವ ಮೀನುಗಾರಿಕೆ ದಿನಾಚರಣೆಯಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದಲ್ಲಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಗೆ ಚಾಲನೆ ನೀಡಿದರು.

ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮೀನುಗಾರಿಕೆ ಮತ್ತು ಜಲಕೃಷಿಯು ಪ್ರಮುಖ ಪಾತ್ರ ವಹಿಸುತ್ತಿದೆ. ಮೀನುಗಾರಿಕೆ ವಲಯವು ಉದ್ಯೋಗ, ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆ, ವಿದೇಶಿ ವಿನಿಮಯ ಗಳಿಕೆ ಮತ್ತು



Download From : www.kpscvaani.com

**ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಿಸಲ್ಪಡುವ ಫಲಾನುಭವಿ ಆಧಾರಿತ ಚಟುವಟಿಕೆಗಳ ವಿವರ:**

- ಹ್ಯಾಚರಿ ಕೇಂದ್ರಗಳ ಅಭಿವೃದ್ಧಿ.
- ಮೀನು ಕೊಳಗಳ ಹಾಗೂ ಮೀನುಮರಿ ಪಾಲನೆ ಕೊಳಗಳ ನಿರ್ಮಾಣ.
- ಮೀನು ಕೃಷಿ ಚಟುವಟಿಕೆಗಳಿಗೆ ಹೂಡಿಕೆ ವೆಚ್ಚ.
- ಪುನರಾವರ್ತಿತ ಜಲಕೃಷಿ ವ್ಯವಸ್ಥೆ.
- ಜಲಾಶಯಗಳಲ್ಲಿ ಮತ್ತು ಸಮುದ್ರದಲ್ಲಿ ಪಂಜರದ ಮೀನು ಕೃಷಿ.
- ಕಡಲಕಳೆ ಕೃಷಿ.
- ಮೃದ್ವಂಗಿಗಳ ಕೃಷಿ.
- ಟ್ರೌಟ್ ಕೃಷಿಗಾಗಿ 'ರೇಸ್-ವೇ' ಗಳ ನಿರ್ಮಾಣ.
- ಅಲಂಕಾರಿಕಾ ಮತ್ತು ಮನರಂಜನಾ ಮೀನುಗಾರಿಕೆ.
- ಆಳಸಮುದ್ರದ ಮೀನುಗಾರಿಕಾ ದೋಣಿಗಳ ಸ್ವಾದೀನಕ್ಕೆ ಬೆಂಬಲ.
- ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕಾ ದೋಣಿಗಳ ಉನ್ನತೀಕರಣ.
- ಸಾಂಪ್ರದಾಯಿಕ ಮತ್ತು ಯಾಂತ್ರೀಕೃತ ಮೀನುಗಾರಿಕಾ ದೋಣಿಗಳ ಮೀನುಗಾರರಿಗೆ ಸುರಕ್ಷತಾ ಕಿಟ್‌ಗಳ ಪೂರೈಕೆ.
- ಸಾಂಪ್ರದಾಯಿಕ ಮೀನುಗಾರರಿಗೆ ಸಂವಹನ-ಟ್ರ್ಯಾಕಿಂಗ್ ಮತ್ತು ಸಂಭಾವ್ಯ ಮೀನುಗಾರಿಕೆ ವಲಯಗಳನ್ನು ಗುರುತಿಸಲು ಅವಶ್ಯವಿರುವ ಸಾಧನಗಳನ್ನು ಖರೀದಿಸಲು ಸಹಾಯ.
- ಶೀಥಲೀಕರಣ ಮತ್ತು ಮಂಜುಗಡ್ಡೆ ಕಾರ್ಖಾನೆಗಳ ನಿರ್ಮಾಣಕ್ಕೆ ಸಹಾಯ.
- ಮೀನಿನ ಪುಡಿ ಮತ್ತು ಮೀನಿನ ಎಣ್ಣೆ ತೆಗೆಯುವ ಗಿರಣಿಗಳ ನಿರ್ಮಾಣಕ್ಕೆ ಸಹಾಯ.
- ಮೀನು ಚಿಲ್ಲರೆ ಮಾರುಕಟ್ಟೆಗಳು ಮತ್ತು ಕಿಯೋಸ್ಕ್‌ಗಳ ನಿರ್ಮಾಣ.
- ಮೀನು ಮೌಲ್ಯವರ್ಧನಾ ಉದ್ಯಮ ಘಟಕಗಳ ನಿರ್ಮಾಣ.
- ಇ-ಟ್ರೇಡಿಂಗ್ ಮತ್ತು ಇ-ಮಾರ್ಕೆಟಿಂಗ್ ವೇದಿಕೆಗಳ ನಿರ್ಮಾಣ.
- ರೋಗಪತ್ತೆ ಮತ್ತು ಗುಣಮಟ್ಟದ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಗೆ ಸಹಾಯ.
- ಮೀನುಗಾರರು ಮತ್ತು ಮೀನುಗಾರಿಕಾ ದೋಣಿಗಳಿಗೆ ವಿಮೆ.
- ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಸಕ್ರಿಯ ಸಾಂಪ್ರದಾಯಿಕ ಮೀನುಗಾರರಿಗೆ ಜೀವನೋಪಾಯ ಮತ್ತು ಪೌಷ್ಠಿಕಾಂಶದ ಭದ್ರತೆ ಒದಗಿಸುವುದು.

ಲಕ್ಷಾಂತರ ಜನರಿಗೆ ಆದಾಯದ ಪ್ರಮುಖ ಕೊಡುಗೆ ನೀಡುತ್ತಿದೆ. ವಿಶೇಷವಾಗಿ ಮೀನುಗಾರರು ಮತ್ತು ಮೀನು ಕೃಷಿಕರಿಗೆ ಜೀವನಾಂಶವನ್ನು ಒದಗಿಸುತ್ತದೆ. ಆದರೂ ಕೂಡ ಎಲ್ಲಾ ಮೀನು ಕೃಷಿಕರು ಆರ್ಥಿಕವಾಗಿ ಸಬಲರಾಗಿರುವುದಿಲ್ಲ. ಅಂತಹವರಿಗೆ ಈ ಯೋಜನೆಯ ಮೂಲಕ ಆರ್ಥಿಕ ಸಹಾಯ ನೀಡಿ, ಅವರ ಆದಾಯವನ್ನು ಹೆಚ್ಚಿಸಲು ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.4,115 ಕೋಟಿಗಳ ಕ್ರಿಯಾ ಯೋಜನೆ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಕಾರ್ಯಕ್ರಮಕ್ಕೆ 2020-21ನೇ ಸಾಲಿಗೆ ರಾಜ್ಯಕ್ಕೆ ರೂ.137.2 ಕೋಟಿ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರವು ಪ್ರಸ್ತುತ ಮಂಜೂರಾತಿ ನೀಡಿದೆ. ರಾಜ್ಯ ಸರ್ಕಾರವು ಆರ್ಥಿಕ ಸಾಲಿಗೆ ರೂ.251.57 ಕೋಟಿಗಳ ಅನುದಾನ ಒದಗಿಸಿದೆ.

**ಯೋಜನೆಯ ಉದ್ದೇಶ :**

2020-21ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ಬರಲಿರುವ ಈ ಯೋಜನೆಯಿಂದ ಮೀನು ಹಿಡುವಳಿ, ಮೀನು ಕೃಷಿ, ಮೀನು ಮಾರಾಟ ಹಾಗೂ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಸಾಮಾನ್ಯ ಕೃಷಿಕರು ಹಾಗೂ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ, ಮಹಿಳೆಯರು, ವಿಕಲಚೇತನರಿಗೆ ಮೀನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವು ಒದಗಿಸುವುದು ಇದರ ಉದ್ದೇಶವಾಗಿದೆ.

ಮೀನುಗಾರಿಕೆಯಲ್ಲಿ ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಜಿಸುವುದರ ಮೂಲಕ 2022ರ ವೇಳೆಗೆ ಮೀನುಗಾರರ ಮತ್ತು ಮೀನುಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ. ಮೀನುಗಾರಿಕಾ ಸಾಮರ್ಥ್ಯವನ್ನು ಮೀನು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ನ್ಯಾಯ ಸಮ್ಮತ ರೀತಿಯಲ್ಲಿ ಹೆಚ್ಚಿಸುವುದು, ಕೃಷಿ ಜಿ.ಡಿ.ಪಿ ಮತ್ತು ರಫ್ತಿಗೆ ಮೀನುಗಾರಿಕೆ ಕೊಡುಗೆಯನ್ನು ಹೆಚ್ಚಿಸುವುದು ಮತ್ತು ಮೀನುಗಾರರಿಗೆ ಮತ್ತು ಮೀನು ಕೃಷಿಕರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವುದು ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಪ್ರಮುಖ ಗುರಿ ಮತ್ತು ಉದ್ದೇಶ.

ಮೀನುಗಾರರು, ಮೀನು ಕೃಷಿಕರು, ಮೀನು ಕಾರ್ಮಿಕರು ಮತ್ತು ಮೀನು ಮಾರಾಟಗಾರರು, ಮೀನುಗಾರಿಕೆ ಅಭಿವೃದ್ಧಿ ನಿಗಮಗಳು, ಮೀನುಗಾರಿಕೆ ಕ್ಷೇತ್ರದಲ್ಲಿನ ಸ್ವಸಹಾಯ ಗುಂಪುಗಳು, ಜಂಟಿ ಹೊಣೆಗಾರಿಕೆ ಗುಂಪುಗಳು, ಮೀನುಗಾರಿಕೆ ಸಹಕಾರ ಸಂಸ್ಥೆಗಳು, ಮೀನುಗಾರಿಕೆ ಒಕ್ಕೂಟಗಳು, ಉದ್ಯಮಿಗಳು ಮತ್ತು ಖಾಸಗಿ ಸಂಸ್ಥೆಗಳು, ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳು/ ಕಂಪನಿಗಳು, ಪರಿಶಿಷ್ಟವರ್ಗ/ಪರಿಶಿಷ್ಟ ಪಂಗಡ/ಮಹಿಳೆಯರು/ವಿಕಲಚೇತನ ವ್ಯಕ್ತಿಗಳು, ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು ಮತ್ತು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಾಂಸ್ಥಿಕ ಸಂಸ್ಥೆಗಳು, ರಾಜ್ಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗಳು, ಕೇಂದ್ರ ಸರ್ಕಾರ ಮತ್ತು ಅದರ ಸ್ವಾಸ್ಥ್ಯಕ್ಕೆ ಒಳಪಟ್ಟ ಸಾಂಸ್ಥಿಕ ಸಂಸ್ಥೆಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

ಈ ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ಶೇಕಡ 40, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಶೇಕಡ 60 ರಂತೆ ಸಹಾಯ ಧನವನ್ನು ನೀಡಲಾಗುವುದು. ಯೋಜನೆಯ ಕುರಿತು ಹೆಚ್ಚಿನ ಮಾಹಿತಿ ಹಾಗೂ ಸೌಲಭ್ಯಕ್ಕಾಗಿ ಫಲಾನುಭವಿಗಳು ಆಯಾ ಜಿಲ್ಲೆಯ ಮೀನುಗಾರಿಕೆ ಇಲಾಖೆಯನ್ನು ಸಂಪರ್ಕಿಸಬಹುದು.



Download From : www.kpscvaani.com

# ಕೋವಿಡ್-19




ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

#KarnatakaFightsCorona

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

Download From : www.kpscvaani.com






### ಕೊರೊನಾ ನಿಗ್ರಹಕ್ಕೆ ಸರ್ಕಾರದಿಂದ

# ಲಸಿಕಾ ಅಭಿಯಾನ

ಕೆ. ಎಸ್. ರಾಜಮನ್ನಾರ್

**ಲಸಿಕೆ ಬರಲಿಲ್ಲ ಎಂದು ಕೊರಗುತ್ತಿದ್ದವರು ಈಗ ನಂಬಿಕೆ, ಸತ್ಯಕ್ಕೆ ಅಪಚಾರವಾಗುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ಅಮೆರಿಕ, ಇಂಗ್ಲೆಂಡ್ ನಂತೆ ನಮ್ಮಲ್ಲಿ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಿಲ್ಲ. ಇದನ್ನು ನೋಡಿಯಾದರೂ ಪಾಠ ಕಲಿಯಬೇಕು. ಇನ್ನು ನಾಲ್ಕು ತಿಂಗಳ ಅವಧಿಯಲ್ಲಿ ದೇಶದ ಅರ್ಧದಷ್ಟು ಜನರಿಗೆ ಲಸಿಕೆ ಕೊಟ್ಟರೆ, ಆ ಪ್ರಯತ್ನದಲ್ಲಿ ಯಶಸ್ವಿಯಾದರೆ ಪರಿಸ್ಥಿತಿ ತಿಳಿಯಾದೀತು. ವದಂತಿ, ಅಪಪ್ರಚಾರಗಳಿಗೆ ಕಿವಿಗೊಡುವ ಕಾಲವಲ್ಲ. ವಿಳಂಬ ಮಾಡಿದರೆ ಮತ್ತಷ್ಟು ಅನಾಹುತವಾದೀತು. ಲಸಿಕೆಗಳು ಅಪಾಯಕಾರಿಯಲ್ಲ, ಉಪಕಾರಿ.**



Download From : www.kpscvaani.com



**ದೇಶಕ್ಕೆ ಕೊರೊನಾ ಸೋಂಕು ಕಾಲಿಟ್ಟು, ವರ್ಷವೇ ಉರುಳಿ ಹೋಗಿದೆ. ಆದರೂ ಕೇವಲ 10 ತಿಂಗಳ ಅಂತರದಲ್ಲಿ ದೇಶೀಯವಾಗಿ ಲಸಿಕೆಗಳನ್ನು ಅಭಿವೃದ್ಧಿ ಪಡಿಸಿರುವುದು ಸಾಧನೆ. ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಹೈದರಾಬಾದಿನ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿದ ಲಸಿಕೆಯನ್ನು ತುರ್ತು ಬಳಕೆ ಮಾಡುವ ವಿಶ್ವದ ಬೃಹತ್ ಲಸಿಕಾ ಅಭಿಯಾನಕ್ಕೆ ಭಾರತ ಸಾಕ್ಷಿಯಾಯಿತು. ಕೊರೊನಾ ಸಂಹಾರಕ್ಕಾಗಿ ಈಗ ದೇಶವೇ ಸೆಟೆದು ನಿಂತಿದೆ.**




**ಜಗತ್ತಿನಲ್ಲಿ ಅತಿಕಡಿಮೆ ಬೆಲೆ ನಿಗದಿ:**

ಮುಂದುವರಿದ ದೇಶಗಳಾದ ಅಮೆರಿಕಾ, ಚೈನಾ, ಇಂಗ್ಲೆಂಡ್, ರಷ್ಯಾ ದೇಶಗಳು ಅಭಿವೃದ್ಧಿಪಡಿಸಿರುವ ಲಸಿಕೆ ದರ ಡೋಸೇಜ್‌ಗೆ 3 ಸಾವಿರದಿಂದ 5 ಸಾವಿರ ರೂ. ಗಳವರೆಗೆ ವೆಚ್ಚವಾಗಲಿದೆ. ಆದರೆ, ನಮ್ಮಲ್ಲಿ ತಯಾರಾಗಿರುವ 2 ಲಸಿಕೆಗಳ ದರ 210 ರೂ., ಇದರಲ್ಲಿ ಜಿಎಸ್‌ಟಿ ತೆರಿಗೆ ದರವೂ ಸೇರಿದೆ. ಸದ್ಯ ಮುಕ್ತ ಮಾರುಕಟ್ಟೆಗೆ ಬಿಟ್ಟಿಲ್ಲ. ಜಗತ್ತಿನ ಯಾವುದೇ ದೇಶದಲ್ಲಿ ಇಷ್ಟು ಕಡಿಮೆ ಬೆಲೆಗೆ ಲಸಿಕೆ ಪೂರೈಸಿದ ಇತಿಹಾಸವಿಲ್ಲ. ಇದು ಕೂಡ ಹೆಗ್ಗಳಿಕೆಗೆ ಕಾರಣವಾದ ಅಂಶ ಎಂಬುದನ್ನು ಮರೆಯುವಂತಿಲ್ಲ.

ಹೊಸ ವರ್ಷದ ಜನವರಿ 16 ದೇಶದ, ವಿಶ್ವದ ಪಾಲಿಗೆ ಐತಿಹಾಸಿಕ ಕ್ಷಣ. ಮನುಕುಲದ ಉಜ್ವಲ ಭವಿಷ್ಯಕ್ಕೆ ಹೊಸ ಭಾಷ್ಯ ಬರೆದ ದಿನ. ಸಂಕ್ರಾಂತಿಗೆ ಮತ್ತಷ್ಟು ಸಿಹಿ, ಮೆರಗು ನೀಡಿದ ಶುಭದಿನ, ಮಹತ್ವದ ದಿನ ಎಂದರೂ ಅತಿಶಯೋಕ್ತಿಯೇನಲ್ಲ. ಮೂರು ಸಾವಿರಕ್ಕೂ ಹೆಚ್ಚು ಲಸಿಕಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಲಸಿಕೆ ನೀಡುವ ವಿಶ್ವದ ಬೃಹತ್ ಅಭಿಯಾನಕ್ಕೆ ಭಾರತ ಸಾಕ್ಷಿಯಾಗಿದೆ. 2020ನೇ ಸಾಲಿನಲ್ಲಿ ಭಾರತೀಯರ ಪಾಲಿಗೆ ಕಳೆದುಹೋದ ಸಾಲು, ಸಾಲು ಹಬ್ಬಗಳ ಸಡಗರ, ಸಂಭ್ರಮ ವರ್ಷದ ಮೊದಲ ತಿಂಗಳಲ್ಲೇ ಲಭ್ಯವಾಯಿತು.

ಮೊದಲನೇ ದಿನವೇ ಸುಮಾರು ಎರಡು ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಿದ್ದು, ಸಾರ್ವತ್ರಿಕ ದಾಖಲೆ. ದೇಶದ ಆರೋಗ್ಯ ಕ್ಷೇತ್ರದಲ್ಲಿ, ಅಷ್ಟೇ ಏಕೆ ಜಗತ್ತಿನ ಇತಿಹಾಸದಲ್ಲಿ ಮರೆಯಲಾಗದ ದಿನ. ಅಮೆರಿಕಾ, ಬ್ರಿಟನ್, ಫ್ರಾನ್ಸ್, ಚೈನಾ ಸೇರಿದಂತೆ ವಿಶ್ವದ ಯಾವುದೇ ದೇಶಗಳಲ್ಲಿ ಒಂದೇ ದಿನ ಇಷ್ಟು ಜನರಿಗೆ ಲಸಿಕೆ ನೀಡಿದ ಉದಾಹರಣೆ ಇಲ್ಲ. ಈ ನಿಟ್ಟಿನಲ್ಲಿ ಇದೊಂದು ಅದ್ಭುತ ಮತ್ತು ಅನನ್ಯ ಸಾಧನೆ.

**ಆರೋಗ್ಯ ಕ್ಷೇತ್ರದ ಪರಿಣತರು ಹೇಳುವುದೇನು?**

ಅಮೆರಿಕಾ, ಚೀನಾ, ರಷ್ಯಾ, ಇಂಗ್ಲೆಂಡ್, ಭಾರತ ಸೇರಿದಂತೆ ಜಗತ್ತಿನಲ್ಲಿ ಇದುವರೆಗೆ 51 ಲಸಿಕಾ ತಯಾರಿಕಾ ಪ್ರಯೋಗ ನಡೆದಿದೆ. ಲಸಿಕೆ ಎಂಬುದು ರೋಗ ಬಾಧಿಸದಂತೆ ತಡೆಯುವ ಮುನ್ನೆಚ್ಚರಿಕಾ ವಿಧಾನವೇ ಹೊರತು, ಚಿಕಿತ್ಸೆಯಲ್ಲ ಎಂಬುದನ್ನು ಜನತೆ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಲಸಿಕೆಯ ಪರಿಣಾಮದ ಬಗ್ಗೆ ಯಾವುದೇ ಆಧಾರವಿಲ್ಲದೆ, ಗಾಳಿ ಮಾತನ್ನು ನಂಬಿ ಹಗುರವಾಗಿ ಮಾತನಾಡಬಾರದು. ದೇಶ ಅಭಿವೃದ್ಧಿಪಡಿಸಿರುವ ಲಸಿಕೆಗಳು ಅಪಾಯಕಾರಿಯಲ್ಲ, ಬಹಳ ಉಪಕಾರಿ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕು.

ಶತ್ರು ನಮ್ಮ ಮೇಲೆ ದಾಳಿ ಮಾಡುವುದಕ್ಕೆ ಮುಂಚಿತವಾಗಿ ಹೋರಾಟದ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಅಂತಹ ಶಕ್ತಿಯನ್ನು ದೇಹದಲ್ಲಿ ಉತ್ಪಾದನೆ ಮಾಡಿ ಕೊರೊನಾ ವೈರಾಣು ಸಂಹಾರಕ್ಕೆ ಶರೀರವನ್ನು ಸಜ್ಜುಗೊಳಿಸುವುದಕ್ಕಾಗಿ ಲಸಿಕೆ ನೀಡಲಾಗುತ್ತದೆ.



Download From : www.kpscvaani.com

ಅಮೆರಿಕಾ, ಇಂಗ್ಲೆಂಡ್, ಚೈನಾ, ರಷ್ಯಾ ದೇಶಗಳ ಲಸಿಕೆಗೆ ಹೋಲಿಕೆ ಮಾಡಿದರೆ, ನಮ್ಮ ದೇಶದ 2 ಲಸಿಕೆಗಳು ಅತ್ಯಂತ ಸುರಕ್ಷಿತ ಮತ್ತು ಪರಿಣಾಮಕಾರಿ.

ಯಾವುದೇ ಲಸಿಕೆ ಪಡೆದಾಗ ಜ್ವರ, ಮೈಕೈ ನೋವು ಬರುವುದು ಸಹಜ. ಲಸಿಕೆ ಪಡೆದು ಯಾರೂ ಗಂಭೀರ ಸಮಸ್ಯೆಗೆ ಒಳಗಾಗಿಲ್ಲ.

ಹೀಗಾಗಿ ನಮ್ಮ ಲಸಿಕೆಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಬಂದಿದೆ. ನಮ್ಮ ಲಸಿಕೆ ಮೇಲೆ ನಂಬಿಕೆ ಮತ್ತು ವಿಶ್ವಾಸಾರ್ಹತೆ ಬಹಳ ಹೆಚ್ಚಾಗಿದೆ. ಸಣ್ಣಪುಟ್ಟ ರಾಷ್ಟ್ರಗಳಿಂದ ಹಿಡಿದು, ಮುಂಚೂಣಿ ರಾಷ್ಟ್ರಗಳು ಸಹ ಲಸಿಕೆ ಪೂರೈಸುವಂತೆ ಮೇಲಿಂದ ಮೇಲೆ ಮನವಿ, ಬೇಡಿಕೆಯಿಡುತ್ತಿವೆ ಎಂದರೆ ನಮ್ಮ ಲಸಿಕೆ ಎಷ್ಟು ಸುರಕ್ಷಿತ, ಎಷ್ಟು ಪರಿಣಾಮಕಾರಿ ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.

ಹೈದರಾಬಾದಿನ ಬಯೋಟೆಕ್ ಕಂಪನಿ ತಯಾರಿಸಿರುವ ಕೊವ್ಯಾಕ್ಸಿನ್ ರಫೆಲ್ ವಿಮಾನವಿದ್ದಂತೆ. ಪುಣೆಯ ಸೀರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸಿರುವ ಕೋವೀಶೀಲ್ಡ್ ತೇಜಸ್ ಇದ್ದಂತೆ. ಶತ್ರು ಸಂಹಾರಕ್ಕಾಗಿ ನಮ್ಮ ದೇಹದ ಮೇಲೆ ಹೊಸ ವೈರಾಣು ದಾಳಿ ಮಾಡುವುದನ್ನು ನಮ್ಮ ಲಸಿಕೆಗಳು ಪರಿಣಾಮಕಾರಿಯಾಗಿ ನಿಯಂತ್ರಿಸಿ ಪ್ರತಿಕಾಯಗಳನ್ನು ಹೆಚ್ಚಿಸುತ್ತದೆ. ಹೀಗಾಗಿ ನಮ್ಮ ಲಸಿಕೆಗಳ ಮುಂದೆ, ಕೊರೊನಾ ಸೋಂಕಿನ ಆಟ ಇನ್ನು ನಡೆಯುವುದಿಲ್ಲ.

ಸಾಮಾನ್ಯವಾಗಿ ಹೊಸ ಲಸಿಕೆ ತಯಾರು ಮಾಡಲು ಕನಿಷ್ಠ 2–3 ವರ್ಷಗಳ ಕಾಲಾವಧಿ ಬೇಕಾಗುತ್ತದೆ. ಆದರೆ ದೇಶದ ವಿಜ್ಞಾನಿಗಳು ಕೇವಲ 10 ತಿಂಗಳ ಅವಧಿಯಲ್ಲೇ ಕೊರೊನಾ ಸೋಂಕು ನಿವಾರಿಸುವ ಲಸಿಕೆಯನ್ನು ತಯಾರು ಮಾಡಿರುವುದು ಜಗತ್ತಿನ ಅತಿದೊಡ್ಡ ಸಾಧನೆ ಎಂಬುದರಲ್ಲಿ ಎರಡನೇ ಮಾತೇ ಇಲ್ಲ.

ವಿಶ್ವದ ದೊಡ್ಡಣ್ಣ ಅಮೆರಿಕಾ ಸಹ ಇದುವರೆಗೆ ಎರಡು ಲಸಿಕೆಗಳನ್ನು ಅಭಿವೃದ್ಧಿಪಡಿಸಿ ಜನತೆಗೆ ನೀಡುತ್ತಿದೆ. ಅಮೆರಿಕಾ ಲಸಿಕೆ ಆರ್ ಎನ್ ಎ ಆಧಾರದ ಸೂತ್ರದಲ್ಲಿ ತಯಾರಾಗಿರುವುದರಿಂದ ಹೆಚ್ಚು ಅಡ್ಡ ಪರಿಣಾಮಗಳು ಉಂಟಾಗುತ್ತಿವೆ. ಇದರ ಜತೆಗೆ ಲಸಿಕೆ ನೂರಕ್ಕೆ ನೂರಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವ ಸಾಧ್ಯತೆ ಕಡಿಮೆ ಎಂಬ ವಾದವೂ ಇದೆ. ಆದರೆ, ನಮ್ಮ ದೇಶದಲ್ಲಿ ತಯಾರಾಗಿರುವ ಲಸಿಕೆಗಳು ನೂರಕ್ಕೆ ನೂರು ಸುರಕ್ಷಿತ ಮತ್ತು ಅಷ್ಟೇ ಪರಿಣಾಮಕಾರಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಬಹುತೇಕ ಮುಂಚೂಣಿ ರಾಷ್ಟ್ರಗಳು ಅಭಿವೃದ್ಧಿಪಡಿಸಿರುವ ಲಸಿಕೆಗಳು ಮೈನಸ್ 70 ಡಿಗ್ರಿ ಉಷ್ಣಾಂಶದಲ್ಲಿ ಶೇಖರಣೆ ಮಾಡಿ ಉಪಯೋಗ ಮಾಡಬೇಕಾಗುತ್ತದೆ. ಚೈನಾ ಅಭಿವೃದ್ಧಿಪಡಿಸಿರುವ ಲಸಿಕೆಯಲ್ಲಿ ಹಂದಿ ಜಿಲೆಟಿನ್ ಬಳಸಲಾಗಿದ್ದು, ಹೀಗಾಗಿ ಜನರ ಮೇಲೆ ಅದು ಶೇ. 70ರಷ್ಟು ಪರಿಣಾಮ ಬೀರಲಿದೆ ಎಂಬುದು ವೈದ್ಯಕೀಯ ಲೋಕದ ಪರಿಣತರ ಅಭಿಪ್ರಾಯ.

ಲಸಿಕೆ ತಯಾರಿಕಾ ಸಂದರ್ಭದಲ್ಲಿ ಮೊದಲು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಲಾಗುತ್ತದೆ. ನಂತರ ಡೋಸೇಜ್ ನಿಗದಿ ಮಾಡಲು ಮನುಷ್ಯರ ಮೇಲೆ ಪ್ರಯೋಗ ನಡೆಯುತ್ತದೆ. ಒಂದು ಲಸಿಕೆ ಕನಿಷ್ಠ 30 ಸಾವಿರ ಜನರ ಮೇಲೆ ಪ್ರಯೋಗ ಮಾಡಿ ಅದರ ಸಾಧಕ–ಬಾಧಕದ ಸಂಪೂರ್ಣ ವರದಿ ಬಂದ ನಂತರವೇ ತುರ್ತು ಬಳಕೆಗೆ ಅನುಮತಿ ನೀಡಲಾಗುತ್ತದೆ.

ಹೈದರಾಬಾದಿನ ಕೊವ್ಯಾಕ್ಸಿನ್ ಲಸಿಕೆ ಮೂರನೇ ಹಂತದ ಪ್ರಯೋಗ ಪೂರ್ಣಗೊಳಿಸಿಲ್ಲ. ಹೀಗಾಗಿ ಅದಕ್ಕೆ ಅನುಮತಿ ಕೊಟ್ಟಿರುವುದು ಸರಿಯಲ್ಲ, ಇದರಿಂದಲೇ ಕೆಲವು ಅಡ್ಡ ಪರಿಣಾಮಗಳು ಉಂಟಾಗುತ್ತಿವೆ ಎಂಬ ವಾದ, ತರ್ಕ, ಅಭಿಪ್ರಾಯಗಳಲ್ಲಿ ಸತ್ಯಾಂಶವಿಲ್ಲ. ಎರಡನೇ ಹಂತದ ಪ್ರಯೋಗದಲ್ಲೇ ಪ್ರತಿಕಾಯಗಳು ಉತ್ಪತ್ತಿಯಾಗಿರುವುದನ್ನು ಖಚಿತಪಡಿಸಿಕೊಂಡ ನಂತರವೇ ತುರ್ತು ಬಳಕೆಗೆ ಅನುಮತಿ ನೀಡಲಾಗಿದೆ.

**ನಿಯಮ ಪಾಲನೆ ಕಡ್ಡಾಯ:**

ಈಗಾಗಲೇ ಲಕ್ಷಾಂತರ ಜನ ಮೊದಲ ಲಸಿಕೆ ಪಡೆದುಕೊಂಡು ಎರಡನೇ ಲಸಿಕೆಗಾಗಿ ಕಾಯುತ್ತಿದ್ದಾರೆ. ನಾವು ಲಸಿಕೆ ತೆಗೆದುಕೊಂಡಿದ್ದೇವೆ ಎಂಬ ಕಾರಣಕ್ಕೆ ಪ್ರಚಲಿತ ಕೊರೊನಾ ಮಾರ್ಗಸೂಚಿ ನಿಯಮಗಳನ್ನು ಮೀರುವಂತಿಲ್ಲ. ಲಸಿಕೆ ಪಡೆದವರೂ ಸಹ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಸಾಮಾಜಿಕ ಅಂತರ ಕಾಪಾಡಬೇಕು. ವೈಯಕ್ತಿಕ ಶುಚಿತ್ವಕ್ಕೆ ಆದ್ಯತೆ ನೀಡಲೇಬೇಕು.



### ಕೊರೊನಾ ವಾರಿಯರ್‌ಗಳಿಗೆ ಏಕೆ ಮೊದಲ ಆದ್ಯತೆ:

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಲಸಿಕೆ ಬಂದ ತಕ್ಷಣವೇ ಪ್ರಧಾನಿ, ರಾಷ್ಟ್ರಪತಿ, ಸಚಿವರು, ಚುನಾಯಿತ ಪ್ರತಿನಿಧಿಗಳೇ ಮುಂದಾಗಿ ನಿಂತು ಆದ್ಯತೆ ಮೇರೆಗೆ ಮೊದಲೇ ಲಸಿಕೆ ಪಡೆದುಕೊಂಡ ಉದಾಹರಣೆಗಳಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಮೊದಲ ಹಂತದಲ್ಲಿ 3 ಕೋಟಿ ಆರೋಗ್ಯ ಕಾರ್ಯಕರ್ತರು, ಕೊರೊನಾ ವಾರಿಯರ್‌ಗಳಿಗೆ ಉಚಿತವಾಗಿ ಲಸಿಕೆ ನೀಡಲು ತೀರ್ಮಾನ ತೆಗೆದುಕೊಂಡಿರುವುದು ಸಕಾಲಿಕ ಮತ್ತು ಪ್ರಶಂಸನೀಯ.

ವೈದ್ಯರು, ದಾದಿಯರು, ಅರೆ ವೈದ್ಯಕೀಯ ಸಿಬ್ಬಂದಿ, ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಕೆಳವರ್ಗದ ಸಿಬ್ಬಂದಿಗೆ ಮೊದಲ ಆದ್ಯತೆ ಕೊಟ್ಟರೆ, ಅದರಿಂದ ಉಂಟಾಗಬಹುದಾದ ಕೆಲವು ಸಣ್ಣ ಪುಟ್ಟ ಪರಿಣಾಮಗಳನ್ನು ಅವರು ಬೇಗ ಗುರುತಿಸಿ ಅದನ್ನು ಪರಿಹಾರ ಮಾಡಿಕೊಳ್ಳುತ್ತಾರೆ. ಅವರಲ್ಲಿ ಆ ಕುಶಲತೆ, ಸಾಮಾನ್ಯ ಜ್ಞಾನ ಇರುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಮೂರು ಕೋಟಿ ಆರೋಗ್ಯ ಕಾರ್ಯಕರ್ತರಿಗೆ ಉಚಿತ ಲಸಿಕೆ ನೀಡುವ ತೀರ್ಮಾನ ಐತಿಹಾಸಿಕ. ಅವರು ಚೆನ್ನಾಗಿದ್ದರೆ ಮಾತ್ರ ಬೇರೆ ಜನರ ಆರೋಗ್ಯ ಕಾಪಾಡಲು ಸಾಧ್ಯ ತಾನೆ? ವೈದ್ಯರೇ ಗಟ್ಟಿಯಾಗದಿದ್ದರೆ ರೋಗಿಗೆ ಹೇಗೆ ತಾನೆ ಚಿಕಿತ್ಸೆ ಕೊಡಬಲ್ಲರು ಹೇಳಿ?



Download From : www.kpscvaani.com





## ಲಸಿಕೆ ಕುರಿತು ವೈದ್ಯರ ಹೇಳಿಕೆ

### ಮಕ್ಕಳಿಗೆ ಏಕೆ ಲಸಿಕೆ ಇಲ್ಲ:

ಅಮೆರಿಕಾದಲ್ಲಿ ನಡೆದಿರುವ ಪ್ರಯೋಗ 12 ವರ್ಷದ ಮಕ್ಕಳಿಗಿಂತ ಮೇಲ್ಪಟ್ಟಿದೆ. ನಮ್ಮ ದೇಶದಲ್ಲಿ 18 ವರ್ಷಕ್ಕೆ ಮೇಲ್ಪಟ್ಟವರನ್ನು ಪ್ರಾಯೋಗಿಕ ಲಸಿಕಾ ಬಳಕೆಯ ವಿಧಾನಕ್ಕೆ ಆಯ್ಕೆ ಮಾಡಿಕೊಂಡು ಪ್ರಯೋಗ ನಡೆಸಲಾಗಿದೆ. ಹೀಗಾಗಿ ನಮ್ಮಲ್ಲಿ 18 ವರ್ಷದ ಕೆಳಗಿನ ಮಕ್ಕಳಿಗೆ ಲಸಿಕೆ ನೀಡಲು ಅವಕಾಶವಿಲ್ಲ. ಭಾರತ ಸೇರಿದಂತೆ ಜಗತ್ತಿನ 5 ಪ್ರಮುಖ ರಾಷ್ಟ್ರಗಳು ಭಾರೀ ದೊಡ್ಡ ಪ್ರಮಾಣದಲ್ಲಿ ಲಸಿಕೆ ಉತ್ಪಾದನೆ ಮಾಡುತ್ತಿವೆ. ಜಗತ್ತಿನ ಶೇ. 60ರಷ್ಟು ಮಕ್ಕಳಿಗೆ ಜೀವರಕ್ಷಣೆಗಾಗಿ ನೀಡುತ್ತಿರುವ ಲಸಿಕೆ ಭಾರತದಲ್ಲೇ ತಯಾರಾಗಿದೆ ಎಂಬ ಸತ್ಯ ಅರಿತರೆ, ಲಸಿಕಾ ತಯಾರಿಕೆಯಲ್ಲಿ ಭಾರತದ ಅನುಭವ, ಸಂಶೋಧನೆ, ತಂತ್ರಜ್ಞಾನ ಎಷ್ಟು ಮುಂದುವರಿದಿದೆ ಎಂಬುದು ಸುಲಭವಾಗಿ ಅರ್ಥವಾಗಲಿದೆ.

### ಬಿಲ್‌ಗೇಟ್ಸ್ ಹೇಳುವುದೇನು?

ಲಸಿಕಾ ತಯಾರಿಕೆಯಲ್ಲಿ ಭಾರತದ ಶಕ್ತಿ ಸಾಮರ್ಥ್ಯ ಅನನ್ಯ. ಜಗತ್ತಿಗೆ ಕೊರೊನಾ ನಿಯಂತ್ರಣ ಲಸಿಕೆ ಪೂರೈಸುವ ದೈತ್ಯ ಶಕ್ತಿ ಇರುವುದು ಭಾರತಕ್ಕೆ ಮಾತ್ರ ಎಂಬುದು ಮೈಕ್ರೋಸಾಫ್ಟ್ ದಿಗ್ಗಜ, ಒಂದು ಕಾಲದ ವಿಶ್ವದ ಕುಬೇರ ಬಿಲ್‌ಗೇಟ್ಸ್ ಅನುಭವದ ಮಾತು. ವೈದ್ಯಕೀಯ ಲೋಕದ ಸಾಧನೆಗೆ ಹಿಡಿದ ಕನ್ನಡಿ. ಇದರಿಂದ ಭಾರತದ ಶಕ್ತಿ ಏನೆಂಬುದು ಯಾರಿಗಾದರೂ ಸರಳವಾಗಿ ಅರ್ಥವಾಗಲಿದೆ. ಕೇವಲ ಬಾಯಿ ಮಾತಿನಲ್ಲಿ ಭಾರತವನ್ನು ಸುಖಾಸುಮ್ಮನೆ

ವಿಜ್ಞಾನಿಗಳು ಹಗಲು-ಇರುಳು ಕಷ್ಟಪಟ್ಟು ತಯಾರಿಸಿದ ಲಸಿಕೆಗಳು ಜೀವ ಉಳಿಸುವುದಕ್ಕೇ ಹೊರತು, ಜೀವ ತೆಗೆಯುವುದಕ್ಕಲ್ಲ. ಲಸಿಕೆ ಪಡೆಯಲು ಯಾರಿಗೂ ಯಾವುದೇ ರೀತಿಯ ಅನುಮಾನ, ಹಿಂಜರಿಕೆ ಬೇಡ.

**– ಡಾ. ಸಿ.ಎನ್. ಮಂಜುನಾಥ್**
**ನಿರ್ದೇಶಕರು, ಜಯದೇವ ಹೃದ್ರೋಗ ಆಸ್ಪತ್ರೆ**

ಮುಂದುವರಿದ ದೇಶಗಳಲ್ಲಿ ಕೊರೊನಾ 2ನೇ ಅಲೆ ಬಂದು ಜನಜೀವನ ಬಹಳ ಅಧೋಗತಿಗೆ ಹೋಗುತ್ತಿದೆ. ಈಗಲೂ ನಾವು ಲಸಿಕೆ ಪಡೆಯಲು ಬಂದಿರುವ ಸುವರ್ಣ ಅವಕಾಶ ಉಪಯೋಗಿಸಿಕೊಳ್ಳದಿದ್ದರೆ ಬಹಳ ಅನಾಹುತವಾದೀತು.

**– ಡಾ. ದೇವೀಪ್ರಸಾದ್ ಶೆಟ್ಟಿ**
**ಮುಖ್ಯಸ್ಥರು, ನಾರಾಯಣ ಹೃದಯಾಲಯ.**

ದೇಶೀಯವಾಗಿ ಅಭಿವೃದ್ಧಿಪಡಿಸಿದ 2 ಲಸಿಕೆಗಳೂ ಶತ್ರು ಪಾಳೆಯದ ಮೇಲೆ ದಾಳಿ ನಡೆಸಲು ರಫೇಲ್ ಮತ್ತು ತೇಜಸ್ ಇದ್ದಂತೆ. ಲಸಿಕೆ ನೂರಕ್ಕೆ ನೂರು ಸುರಕ್ಷಿತ. ಗಾಳಿ ಮಾತುಗಳಿಗೆ ಕಿವಿಕೊಡಬೇಡಿ.

**– ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ**
**ಪ್ರಸಿದ್ಧ ವೈದ್ಯರು**

"ಲಸಿಕೆ ಪಡೆಯುವುದಕ್ಕೆ ಜನತೆ ಹಿಂದೆ-ಮುಂದೆ ನೋಡುವುದು ಬೇಡ. ಮುಂದಿನ ದಿನಗಳಲ್ಲಿ ಲಸಿಕೆಯ ಬೆಲೆ ಜನರಿಗೆ ಅರ್ಥವಾಗುತ್ತದೆ. ಕಾಯಿಲೆ ಬಾರದಂತೆ ಮುನ್ನೆಚ್ಚರಿಕೆ ವಹಿಸಲು ಲಸಿಕೆ ಕೊಡುತ್ತಾರೆಯೇ ಹೊರತು ರೋಗ ಬರುವುದಕ್ಕಲ್ಲ ಎಂಬ ಸರಳ, ಸಹಜ ಲೆಕ್ಕದಲ್ಲಿ ನೋಡಬೇಕು, ಆಲೋಚನೆ ಮಾಡಬೇಕು".

**– ಡಾ. ಸುದರ್ಶನ ಬಲ್ಲಾಳ್**
**ಅಧ್ಯಕ್ಷರು, ಮಣಿಪಾಲ ಸಮೂಹ ಆಸ್ಪತ್ರೆ**

"ನನ್ನ ಪಾಲಿಗೆ, ದೇಶದ ಪಾಲಿಗೆ ಇದೊಂದು ಸುವರ್ಣ ಅವಕಾಶ. ಕೊರೊನಾ ತೊಲಗಿಸಲು ಸಂಕಲ್ಪ ಮಾಡಬೇಕಾದ ಸುದಿನ. ದುರಾಲೋಚನೆ, ಅಪಪ್ರಚಾರ, ವದಂತಿಗಳಿಗೆ ಕಿವಿಕೊಡದೆ, ಪ್ರತಿಯೊಬ್ಬರು ಸ್ವಯಂಪ್ರೇರಣೆಯಿಂದ ಮುಂದೆ ಬರಬೇಕು."

**–ಡಾ.ವಿ .ಕೆ. ಪಾಲ್**
**ಅಧ್ಯಕ್ಷರು, ರಾಷ್ಟ್ರೀಯ ಕೋವಿಡ್ ನಿಯಂತ್ರಣ ಕಾರ್ಯಪಡೆ.**



Download From : www.kpscvaani.com





ಹೊಗಳಲಿಲ್ಲ. ಬದಲಾಗಿ ಕ್ಲಿನಿಕಲ್ ಪ್ರಯೋಗ ನಡೆಸಲು ಬಿಲ್‌ಗೇಟ್ ಫೌಂಡೇಷನ್ ಲಸಿಕಾ ತಯಾರಿಕಾ ಸಂಸ್ಥೆಗಳಿಗೆ ದೇಣಿಗೆ ನೀಡಿ, ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಲು ಕೈಜೋಡಿಸಿದೆ.

**ಮಾಧ್ಯಮ, ಜನತೆ ದೃಢಸಂಕಲ್ಪ:**

ಲಸಿಕಾ ಅಭಿಯಾನ ಬಹಳ ಅಚ್ಚುಕಟ್ಟಾಗಿ ಆರಂಭವಾಗಿದೆ. ಮಾಧ್ಯಮ ಮತ್ತು ಜನರ ದೃಢಸಂಕಲ್ಪದ ಮೇಲೆ ಇದರ ಯಶಸ್ಸು ಅಲವಂಬಿತವಾಗಿದೆ. ಟಿವಿ ವಾಹಿನಿಗಳು, ನಿಯತಕಾಲಿಕೆಗಳು, ಸಾಮಾಜಿಕ ಜಾಲತಾಣಗಳು ಹೆಚ್ಚಾಗಿರುವ ಕಾಲಘಟ್ಟದಲ್ಲಿ ಅಪಪ್ರಚಾರ, ವದಂತಿಗಳಿಗೆ ಜನ ಮಾರು ಹೋಗುವುದು, ಅದನ್ನೇ ಸತ್ಯ ಎಂದು ನಂಬಿಕೊಳ್ಳುವುದು ಸಹಜ. ಈ ಪ್ರವೃತ್ತಿ ಸಮಾಜದಲ್ಲಿ ಹೆಚ್ಚಾಗುತ್ತಿದೆ. ಮಾಧ್ಯಮ ಮತ್ತು ಜನರ ಆಲೋಚನಾ ಶಕ್ತಿ ಮೇಲೆ ಲಸಿಕಾ ಅಭಿಯಾನದ ಯಶಸ್ಸು ನಿಂತಿದೆ ಎಂದು ನಾರಾಯಣ ಹೃದಯಾಲಯ ಆಸ್ಪತ್ರೆ ಮುಖ್ಯಸ್ಥ ಡಾ॥ ದೇವಿಶೆಟ್ಟಿ ಪ್ರತಿಪಾದಿಸಿದ್ದಾರೆ. ಲಸಿಕೆ ಬಗ್ಗೆ ಭಯ, ಆತಂಕ, ಸಂಶಯ ಇಂದು ನಿನ್ನೆಯದಲ್ಲ. ಇದಕ್ಕೆ ಹತ್ತಾರು ವರ್ಷಗಳ ಇತಿಹಾಸವಿದೆ. ಜನಸಾಮಾನ್ಯರಲ್ಲೂ ಅಪನಂಬಿಕೆ ಇದೆ. ಅದೇ ರೀತಿ ವೈದ್ಯ ಸಮುದಾಯದಲ್ಲೂ ಕೆಲವು ಸಂಶಯವಿದೆ. ಮಾಧ್ಯಮಗಳ ಜವಾಬ್ದಾರಿಯುತ ನಡವಳಿಕೆ, ತಿಳಿವಳಿಕೆ ಅಲೋಚನೆಯ ಮೇಲೆಯೇ ಹೆಚ್ಚಾಗಿ ಇದರ ಯಶಸ್ಸು ನಿಂತಿದೆ.

**ಲಸಿಕಾ ಕೇಂದ್ರಗಳು:**

ಮೊದಲ ಹಂತದ ಮೊದಲನೇ ದಿನ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯ 10 ಕೇಂದ್ರಗಳು ಸೇರಿದಂತೆ ರಾಜ್ಯದ 243 ಕೇಂದ್ರಗಳಲ್ಲಿ ಲಸಿಕೆ ನೀಡಲಾಗಿದೆ. ಇದರಲ್ಲಿ 237 ಕೇಂದ್ರಗಳಲ್ಲಿ ಕೋವೀಶೀಲ್ಡ್ ಲಸಿಕೆಯನ್ನು ಹಾಗೂ 6 ಕೇಂದ್ರಗಳಲ್ಲಿ ಕೋವ್ಯಾಕ್ಸಿನ್ ಲಸಿಕೆ ನೀಡಲಾಗಿದೆ. ಕರ್ನಾಟಕದಲ್ಲಿ 242, ಮಹಾರಾಷ್ಟ್ರ 285, ಉತ್ತರಪ್ರದೇಶ 317, ತೆಲಂಗಾಣ 140, ತಮಿಳುನಾಡು 161, ರಾಜಸ್ಥಾನ 167, ಒಡಿಸ್ಸಾ 161, ಹರಿಯಾಣ 77, ದೆಹಲಿ 81, ಬಿಹಾರ 301, ಅಸ್ಸಾಂ 65 ಲಸಿಕಾ ಕೇಂದ್ರಗಳನ್ನು ತೆರೆದು ನೀಡಲಾಗಿದೆ. ಇದರಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಕಾರಣಾಂತರಗಳಿಂದ ಲಸಿಕೆ ನೀಡುವ ದಿನಾಂಕ ಮುಂದೂಡಲಾಗಿದೆ. ದೇಶದ 3,352 ಕೇಂದ್ರಗಳಲ್ಲಿ ಏಕಕಾಲಕ್ಕೆ ಅಭಿಯಾನಕ್ಕೆ ಚಾಲನೆ ನೀಡಿರುವುದು ವಿಶ್ವದಾಖಲೆ. ಮೊದಲನೇ ದಿನ ಲಸಿಕಾ ವಿತರಣಾ ಕಾರ್ಯದಲ್ಲಿ 16,755 ವೈದ್ಯಕೀಯ ಸಿಬ್ಬಂದಿ ಪಾಲ್ಗೊಂಡಿದ್ದರು.

ವೈದ್ಯರು, ದಾದಿಯರು ಚೆನ್ನಾಗಿದ್ದರೆ ಮಾತ್ರ ರೋಗಿಗಳಿಗೆ ಉತ್ತಮ ಚಿಕಿತ್ಸೆ ಸಾಧ್ಯ. ಮೊದಲಿಗೆ ಆರೋಗ್ಯ ಕಾರ್ಯಕರ್ತರಿಗೆ ಆದ್ಯತೆಯ ಮೇರೆಗೆ ಲಸಿಕೆ ಕೊಡುತ್ತಿರುವುದು ಅತ್ಯಂತ ಸಮಂಜಸ ಮತ್ತು ಸಕಾಲಿಕ ಎಂಬುದರಲ್ಲಿ ಬೇರೆ ಮಾತೇ ಇಲ್ಲ.

ದುಡಿಯುವ ವರ್ಗವೇ ದೇಶದ ಸಂಪತ್ತು. ಇದರಲ್ಲಿ ಕಾರ್ಮಿಕರು, ರೈತರು ಎಲ್ಲರೂ ಬರುತ್ತಾರೆ. ಇವರಿಗೆ ಲಸಿಕೆ ಕೊಡುವುದು ಮುಂದಿನ ಆದ್ಯತೆ ಆಗಬೇಕು. ಸರ್ಕಾರ ಇದನ್ನು ಗಂಭೀರವಾಗಿ ಚಿಂತಿಸಿ ತೀರ್ಮಾನಕ್ಕೆ ಬರಬೇಕು. ಕೇವಲ ಲಸಿಕಾ ಅಭಿಯಾನ ಆರಂಭವಾದ ಮೂರು ದಿನಗಳ ಅವಧಿಯಲ್ಲೇ ದೇಶದಲ್ಲಿ ಮೂರು ಲಕ್ಷದ ಎಂಭತ್ತು ಸಾವಿರ ಜನರಿಗೆ ಲಸಿಕೆ ನೀಡಿರುವುದು ಸಾಹಸದ ಮಾತೇ ಸರಿ. ರಾಜ್ಯದಲ್ಲಿ ಮೂರು ದಿನದ ಅವಧಿಯಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ. ಮೊದಲ ಹಂತದಲ್ಲಿ ಏಳು ಲಕ್ಷದ ಹದಿನೇಳು ಸಾವಿರ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ಗುರಿಯನ್ನು ಸರ್ಕಾರ ಹೊಂದಿದೆ. ಸರ್ಕಾರವು ಹಲವು ಇತಿಮಿತಿಗಳ ನಡುವೆಯೂ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ.

**ಮದ್ಯಪಾನ ಮಾಡುವಂತಿಲ್ಲ:**

ಲಸಿಕೆ ಪಡೆದವರು ಮದ್ಯಪಾನ ಮಾಡುವಂತಿಲ್ಲ. ನಾವು ಲಸಿಕೆ ಪಡೆದಿದ್ದೇವೆ ಇನ್ನು ನಮಗೆ ಯಾವುದೇ ಬಾಧೆಯಿಲ್ಲ ಎಂಬ ಉದಾಸೀನ ಭಾವನೆ ಸಲ್ಲದು. ಮೊದಲ ಲಸಿಕೆ ನಂತರ 28 ದಿನಗಳ ದಿನ ಬಳಿಕ ಎರಡನೇ ಲಸಿಕೆ ತಪ್ಪದೇ ಪಡೆಯಬೇಕು. ನಂತರ 15 ದಿನಗಳ ಬಳಿಕವಷ್ಟೆ ಲಸಿಕೆ ಪರಿಣಮಕಾರಿಯಾಗಿ ಕೆಲಸ ಮಾಡಲಿದೆ ಎಂಬುದನ್ನು ಅರಿಯಬೇಕು. ಹೀಗಾಗಿ ಕಡೆಪಕ್ಷ 50 ದಿನಗಳ ಕಾಲ ಮದ್ಯಪಾನ ಮಾಡುವಂತಿಲ್ಲ. ಮಾಡಿದರೆ ಲಸಿಕೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲ. ಮಾಡಿದ ಕೆಲಸ, ಸಮಯ, ಪಟ್ಟ ಶ್ರಮ ವ್ಯರ್ಥವಾಗಬಾರದು ಎಂದರೆ ಕಟ್ಟುನಿಟ್ಟಾಗಿ ನಿಯಮ ಪಾಲಿಸಿ, ಎಚ್ಚರ ವಹಿಸಬೇಕು.



Download From : www.kpscvaani.com

# ಆದಿಜಾಂಬವ ಅಭಿವೃದ್ಧಿ ನಿಗಮದ ಸೇವಾ ಸೌಲಭ್ಯ

ಬಿ.ಜಿ.ಪೂರ್ಣಿಮ

**ಪರಿಶಿಷ್ಟ ಜಾತಿಯಲ್ಲಿರುವ ಮಾದಿಗ ಮತ್ತು ಸಂಬಂಧಿತ ಸಮುದಾಯದವರ ಏಳಿಗೆಗಾಗಿ ಒಂದು ವರ್ಷದ ಹಿಂದಷ್ಟೆ ಆದಿಜಾಂಬವ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಜಾರಿಗೊಳಿಸುವ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮವನ್ನು ಈ ನಿಗಮದಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ.**

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 104 ಎಸ್ ಎಲ್ ಪಿ 2018 ದಿನಾಂಕ 16–3–2018 ರ ಆದೇಶದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನೆಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ವಿವಿಧ ಉಪ ಜಾತಿಗಳಿಗೆ ಸಮನಾಗಿ ಆರ್ಥಿಕ ಸೌಲಭ್ಯ ಒದಗಿಸಿ ಸಾಮಾಜಿ ನ್ಯಾಯವನ್ನು ಒದಗಿಸುವ ಉದ್ದೇಶದಿಂದ ಪ್ರಸ್ತುತ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಜಾರಿಗೊಳಿಸುತ್ತಿರುವ ಎಲ್ಲ ಯೋಜನೆ/ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿಯಲ್ಲಿರುವ ಮಾದಿಗ ಮತ್ತು ಸಂಬಂಧಿತ ಸಮುದಾಯಗಳಿಗೆ ಅನುಷ್ಠಾನಗೊಳಿಸಿ ಇವರುಗಳನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ದೃಷ್ಟಿಯಿಂದ ಒಂದು ವರ್ಷದ ಹಿಂದೆ ಸ್ಥಾಪಿಸಲಾಗಿದೆ.

ಹಾಗಾಗಿ 2020–21 ನೇ ಸಾಲಿನಿಂದ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮವು ಸ್ವತಂತ್ರವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಾರಂಭ ಮಾಡಿದೆ. ಈ ನಿಗಮದಲ್ಲಿ ಮಾದಿಗ ಮತ್ತು ಸಂಬಂಧಿತ ಸಮುದಾಯಗಳಿಗೆ ಪ್ರಮುಖವಾಗಿ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮ ಶೀಲತಾ ಯೋಜನೆ (ಬ್ಯಾಂಕುಗಳ ಸಹಯೋಗದಲ್ಲಿ), ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಮತ್ತು ಭೂ ಒಡೆತನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

**ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:**

ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ನಿರುದ್ಯೋಗಿಗಳಿಗೆ ಕೈಗಾಡಿಗಳನ್ನು ಖರೀದಿಸಲು ಹಾಗೂ ರೈತರಿಂದ ತರಕಾರಿ, ಹಣ್ಣುಗಳನ್ನು ಖರೀದಿಸಿ ಸ್ವಯಂ ವ್ಯಾಪಾರದಲ್ಲಿ ತೊಡಗಲು ಅವಶ್ಯವಿರುವ ಅನುದಾನವನ್ನು ನಿಗಮದಿಂದ ಒದಗಿಸಲಾಗುವುದು. ಒಬ್ಬ ಫಲಾನುಭವಿಗೆ ಈ ಯೋಜನೆಯಡಿ 25 ಸಾವಿರ ರೂಗಳನ್ನು ಸಹಾಯಧನವಾಗಿ ಮತ್ತು 25 ಸಾವಿರ ರೂಗಳನ್ನು ಸಾಲದ ರೂಪದಲ್ಲಿ ಸೇರಿದಂತೆ ಒಟ್ಟು 50 ಸಾವಿರ ರೂ ಆರ್ಥಿಕ ನೆರವನ್ನು ನೀಡಲಾಗುವುದು. ಸಾಲದ ಮೊತ್ತವನ್ನು ಫಲಾನುಭವಿಯು 30 ಸಮಾನ ಕಂತುಗಳಲ್ಲಿ ನಿಗಮಕ್ಕೆ ಮರು ಪಾವತಿಸಬೇಕಾಗುತ್ತದೆ.

**ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವ ಜನರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಆರ್ಥಿಕ ನೆರವನ್ನು ಒದಗಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸಿ ಸಬಲರನ್ನಾಗಿಸುವುದು ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಪ್ರಮುಖ ಧ್ಯೇಯ.**





Download From : www.kpscvaani.com

**ಸಮಗ್ರ ಗಂಗಾ ಕಲ್ಯಾಣ ಯೋಜನೆ:**

ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ 1.5 ಎಕರೆಯಿಂದ 5 ಎಕರೆ ವಿಸ್ತೀರ್ಣದ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಅಥವಾ ತೆರೆದ ಬಾವಿ ನಿರ್ಮಿಸಿ, ಪಂಪ್ ಮೋಟಾರ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಕನಿಷ್ಟ 1 ಎಕರೆ ಜಮೀನು ಹೊಂದಿರುವ ರೈತರಿಗೂ ಈ ಯೋಜನೆಯಡಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.

ಘಟಕ ವೆಚ್ಚವಾಗಿ 4.50 ಲಕ್ಷ ರೂಗಳನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳ ಫಲಾನುಭವಿಗಳಿಗೆ ಒದಗಿಸಲಾಗುವುದು. (ಗರಿಷ್ಟ 4 ಲಕ್ಷ ರೂ ಸಹಾಯಧನ ಹಾಗೂ 50 ಸಾವಿರ ರೂ ಅವಧಿಸಾಲಗಳಾಗಿರುತ್ತದೆ. ಸಾಲದ ಮೊತ್ತವನ್ನು ಶೇಕಡ 6 ರ ಬಡ್ಡಿ ದರದಲ್ಲಿ 10 ಅರ್ಧ ವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.)

ಉಳಿದ 24 ಜಿಲ್ಲೆಗಳ ಫಲಾನುಭವಿಗಳಿಗೆ ಘಟಕ ವೆಚ್ಚವಾಗಿ 3.50 ಲಕ್ಷ ರೂಗಳನ್ನು ಒದಗಿಸಲಾಗುವುದು. (ಗರಿಷ್ಟ 3 ಲಕ್ಷ ರೂ ಸಹಾಯಧನ ಹಾಗೂ 50 ಸಾವಿರ ರೂ ಅವಧಿಸಾಲಗಳಾಗಿರುತ್ತದೆ. ಸಾಲದ ಮೊತ್ತವನ್ನು ಶೇಕಡ 6 ರ ಬಡ್ಡಿ ದರದಲ್ಲಿ 10 ಅರ್ಧ ವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.)

**ಉದ್ಯಮ ಶೀಲತಾ ಯೋಜನೆ:**

ಸಣ್ಣದಾಗಿ ಆದಾಯಗಳಿಸುವ ವಿವಿಧ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ನಿರುದ್ಯೋಗಿ ಪುರುಷರು ಮತ್ತು ಮಹಿಳೆಯರಿಗೆ ಬ್ಯಾಂಕ್ ಮುಖಾಂತರ ಮಂಜೂರಾಗುವ ಸಾಲದ ಘಟಕಗಳಿಗೆ ನಿಗಮದಿಂದ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಘಟಕದ ಶೇಕಡ 70 ರಷ್ಟು ಅಥವಾ ಗರಿಷ್ಠ ರೂ 1.00 ಲಕ್ಷದವರೆಗೆ ಸಹಾಯಧನವನ್ನು ಉದ್ಯಮ ಶೀಲತಾ ಯೋಜನೆಯಡಿ ಒದಗಿಸಲಾಗುವುದು.

**ಮೈಕ್ರೋ ಕ್ರೆಡಿಟ್ ಯೋಜನೆ:**

ಮಹಿಳೆಯರನ್ನು ಸಬಲರನ್ನಾಗಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಆರಂಭಿಸಲಾಗಿದೆ. ಹಾಗಾಗಿ ಮಹಿಳಾ ಸ್ವ ಸಹಾಯ ಸಂಘದ ಮೂಲಕ ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಕನಿಷ್ಟ 10 ಮಹಿಳೆಯರು ಇರುವ ಸ್ವ ಸಹಾಯ ಗುಂಪುಗಳು ಸ್ವಯಂ ಉದ್ಯೋಗ ಕೈಗೊಂಡು ಉತ್ತಮ ಆದಾಯಗಳಿಸುವ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿ ಆರ್ಥಿಕ ಸ್ವಾವಲಂಬನೆಯನ್ನು ಹೊಂದಲು ಈ ಯೋಜನೆಯಡಿ ನೆರವನ್ನು ಕಲ್ಪಿಸಲಾಗುವುದು. ಗುಂಪು ಚಟುವಟಿಕೆಗೆ ಉತ್ತೇಜನ ನೀಡಿ ಉತ್ಪಾದನಾ/ಸೇವಾ ಘಟಕಗಳನ್ನು ಆರಂಭಿಸುವ ಮೂಲಕ ಮಹಿಳೆಯರು ಆದಾಯಗಳಿಸುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

ಈ ಯೋಜನೆಯಲ್ಲಿ ಕನಿಷ್ಟ 10 ಮಹಿಳಾ ಸದಸ್ಯರಿರುವ ಸ್ವ ಸಹಾಯ ಗುಂಪಿನ ಪ್ರತಿ ಸದಸ್ಯರಿಗೆ ರೂ 25,000/- ದಂತೆ ಒಟ್ಟು 2.50 ಲಕ್ಷ ರೂ ಹಣವನ್ನು ಮಂಜೂರು ಮಾಡಲಾಗುವುದು. ಘಟಕ ವೆಚ್ಚದ ಪೈಕಿ ಪ್ರತಿ ಫಲಾನುಭವಿಗೆ 15 ಸಾವಿರ ರೂ ಸಹಾಯಧನವನ್ನು ಮತ್ತು 10 ಸಾವಿರ ರೂ ಸಾಲದ ರೂಪದಲ್ಲಿ ಆರ್ಥಿಕ ನೆರವನ್ನು ಕಲ್ಪಿಸಲಾಗುವುದು.

**ಏತ ನೀರಾವರಿ:**

ಏತ ನೀರಾವರಿ ಯೋಜನೆಯು 4 ರಿಂದ 6 ಲಕ್ಷರೂಗಳ ಘಟಕ ವೆಚ್ಚವನ್ನು ಹೊಂದಿದೆ. ಈ ಯೋಜನೆಯಲ್ಲಿ ನದಿ, ನಾಲೆ ಮತ್ತು ನೈಸರ್ಗಿಕ ಹಳ್ಳ ಕೊಳ್ಳಗಳ ಅಕ್ಕ ಪಕ್ಕದಲ್ಲಿನ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ನೆಲದಲ್ಲಿ ಪಿ.ವಿ.ಸಿ ಪೈಪ್‌ಗಳನ್ನು ಅಳವಡಿಸಿ ನೀರಿನ ಮೂಲದಿಂದ ಪೈಪ್ ಮೂಲಕ ನೀರನ್ನು ಹಾಯಿಸಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಕನಿಷ್ಟ 3 ಫಲಾಪೇಕ್ಷಿಗಳಿಗೆ ಕನಿಷ್ಟ 8 ಎಕರೆ ಹಾಗೂ ಮೇಲ್ಪಟ್ಟ ಜಮೀನುಗಳಿಗೆ 4 ಲಕ್ಷ ಸಹಾಯಧನದಲ್ಲಿ ಹಾಗೂ ಕನಿಷ್ಟ 4 ಫಲಾನುಭವಿಗಳ ಮೇಲ್ಪಟ್ಟು ಗರಿಷ್ಟ 15 ಎಕರೆವರೆಗಿನ ಜಮೀನುಗಳಿಗೆ 6 ಲಕ್ಷ ರೂ ಸಹಾಯಧನದಲ್ಲಿ ಸಾಮೂಹಿಕ ಏತ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.

**ಭೂ ಒಡೆತನ ಯೋಜನೆ:**

ಇದರಡಿ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಕನಿಷ್ಟ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಅಥವಾ ಕನಿಷ್ಟ ಅರ್ಧ ಎಕರೆ (20 ಗುಂಟೆ) ಭಾಗಾಯ್ತು ಜಮೀನನ್ನು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ಖರೀದಿಸಿ ನೋಂದಣಿ ಮಾಡಿಕೊಡಲಾಗುವುದು.

ಈ ಯೋಜನೆಯ ಘಟಕ ವೆಚ್ಚ 15 ಲಕ್ಷ ರೂ ಗಳಾಗಿದ್ದು, ಈ ಪೈಕಿ 7.50 ರೂ ಲಕ್ಷ ಸಹಾಯಧನ ಹಾಗೂ ರೂ 7.50 ಲಕ್ಷ ಸಾಲವಾಗಿರುತ್ತದೆ. ಸಾಲದ ಮೊತ್ತವನ್ನು ಶೇಕಡ 6 ರ ಬಡ್ಡಿ ದರದಲ್ಲಿ 20 ಅರ್ಧ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗುತ್ತದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚವನ್ನು 20 ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

ಒಟ್ಟಿನಲ್ಲಿ ಪರಿಶಿಷ್ಟ ಜಾತಿಯ ಜನಾಂಗದವರ ಏಳಿಗೆಗಾಗಿ ಮೇಲ್ಕಂಡ ಯೋಜನೆಗಳನ್ನು ನಿಗಮದ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ದುರ್ಯೋಧನ ಎಂ. ಐಹೊಳೆ ಅವರು ನಿಗಮದ ಪ್ರಸ್ತುತ ಅಧ್ಯಕ್ಷರಾಗಿದ್ದು, ಟಿ.ಕುಮಾರ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿಗಮವು ನಂ. 17/5, ಓಬ್ಲಾಂಗ್ ಬ್ಲಾಕ್, 2ನೇ ಮಹಡಿ, ಯೂನಿಟಿ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು-2 ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಫಲಾನುಭವಿಗಳು ಹೆಚ್ಚಿನ ಮಾಹಿತಿಗೆ ನಿಗಮದ ದೂರವಾಣಿ ಸಂಖ್ಯೆ 080-22215222 ಅಥವಾ ವೆಬ್‌ಸೈಟ್ https://adijambava.karnataka.gov.in ಅಥವಾ ಇಮೇಲ್ adijambava2019@gmail.com ಮುಖಾಂತರ ಸಂಪರ್ಕಿಸಬಹುದು.



Download From : www.kpscvaani.com



# ವಿಭಿನ್ನ ಭತ್ತದ ತಳಿಯ

## ಸಂರಕ್ಷಣೆಯಲ್ಲಿ ತೊಡಗಿರುವ ಕೃಷಿಕ





**ಸುಮಾರು ನೂರ ಎಂಟು ಪಾರಂಪರಿಕ ಭತ್ತದ ತಳಿಯ ಸಂರಕ್ಷಣೆಯಲ್ಲಿ ತೊಡಗಿರುವ ಶಿರಸಿಯ ರಾಮಕೃಷ್ಣ ಗಜಾನನ ಭಟ್ ಅವರು ಸದ್ದಿಲ್ಲದೇ ಕೃಷಿ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುತ್ತಿದ್ದಾರೆ.**

ಗಣಪತಿ ಹಾಸ್ಪುರ

ಅಲ್ಲಿ ಸುತ್ತ-ಮುತ್ತಲೆಲ್ಲಾ ಅಡಿಕೆ ತೋಟ, ಮಧ್ಯೆ ಒಂದಿಷ್ಟು ಭತ್ತದ ಕೃಷಿ. ಅದರಲ್ಲಿಯೂ ವೈವಿಧ್ಯವಿದೆ. ಇರುವಷ್ಟು ಭತ್ತದ ಭೂಮಿಯಲ್ಲಿ ತಮಗೆ ಊಟಕ್ಕೆ ಬೇಕಾಗುವಷ್ಟು ಭತ್ತವನ್ನು ಬೆಳೆದುಕೊಳ್ಳುವ ಬದಲು ಅವರು ಭತ್ತದ ವೈವಿಧ್ಯ ತಳಿಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಸುಮಾರು "108 ತಳಿ"ಯನ್ನು ಕೃಷಿ ಮಾಡಿರುವುದು ವಿಶೇಷ. ಹಾಗಂತ ಇದೇನು ಭತ್ತ ಸಂಶೋಧನೆಗೆ ಸೇರಿದ ಜಾಗವಲ್ಲ. ಇದು ಉತ್ಸಾಹದಿಂದ ಕೃಷಿ ಮಾಡುತ್ತಾ, ಅದರಲ್ಲಿಯೇ ಬದುಕನ್ನು ಕಟ್ಟಿಕೊಂಡಿರುವ ಸಾಮಾನ್ಯ ಕೃಷಿಕನ ಸ್ವಂತ ಭೂಮಿ.

ನಿಜ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಮೇಲಿನ ಓಣಿಕೇರಿ ಸಮೀಪದ ದೇವತೆಮನೆಯ ರಾಮಕೃಷ್ಣ ಗಜಾನನ ಭಟ್ ಅವರೇ ಆ ಭೂಮಿಯ ಒಡೆಯರು. ಇವರು ಪಾರಂಪಾರಿಕ ಭತ್ತದ ತಳಿ ಸಂರಕ್ಷಣೆಯಲ್ಲಿ ಸ್ವ-ಇಚ್ಛೆಯಿಂದ ತೊಡಗಿಕೊಂಡಿರುವ ಸಾಹಸಿ ಕೃಷಿಕರು.



Download From : www.kpscvaani.com

61 ರ ಹರೆಯದ ಆರ್. ಜಿ. ಭಟ್ ಕಳೆದ ಹನ್ನೆರಡು ವರ್ಷಗಳಿಂದ ಈ ಸಾಹಸ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ಅರ್ಪಿಸಿಕೊಂಡು, ಸದ್ದಿಲ್ಲದೇ ಸಾಧನೆ ಮಾಡುತ್ತಿದ್ದಾರೆ.

ದೇವತೆಮನೆಯ ಆರ್. ಜಿ. ಭಟ್ ಅವರಿಗೆ ಸಂಪತ್ ಭರಿತವಾದ ಅಡಿಕೆ ತೋಟವಿದೆ. ಉಳಿದಿರುವ ಸುಮಾರು ಒಂದು ಎಕರೆ ತರಿ (ಗದ್ದೆ) ಭೂಮಿಯನ್ನು ಅಡಿಕೆ ತೋಟವಾಗಿ ಪರಿವರ್ತಿಸಿಕೊಂಡು ನೆಮ್ಮದಿಯಿಂದ ಜೀವನ ನಡೆಸಬಹುದಾಗಿತ್ತು. ಆದರೆ ಇವರಿಗೆ ಈ ಗದ್ದೆಯ ಭೂಮಿಯನ್ನು ತೋಟ ಮಾಡಲು ಮನಸ್ಸಿಲ್ಲ. ಮನೆ ಖರ್ಚಿಗಾದರೂ ಭತ್ತದ ಕೃಷಿಯನ್ನು ಮಾಡಬೇಕೆಂಬ ಉಮೇದಿ. ಭತ್ತದ ನಾಟಿ ಮಾಡುವುದರಿಂದ ಸಿಗುವ ಉಲ್ಲಾಸ, ಉತ್ಸಾಹ.... ಅಡಿಕೆ ಕೃಷಿ ಮಾಡುವುದರಿಂದ ಸಿಗಲಾರದೆಂದು ರಾಮಕೃಷ್ಣ ಗಜಾನನ ಭಟ್ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಭಟ್ ಅವರಿಗೆ 'ಭತ್ತದ ಕೃಷಿ'ಯ ಬಗ್ಗೆ ಬಹಳ ಆಸಕ್ತಿ. ಆ ಕೃಷಿಯ ನಾಟಿ ವಿಧಾನದ ಬಗ್ಗೆ, ವಿವಿಧ ಪುಸ್ತಕ, ಲೇಖನ ಓದಿಯೇ ಮನನ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಇನ್ನಷ್ಟು ತಿಳಿಯಬೇಕೆಂಬ ಹೆಬ್ಬಯಕೆಯೂ ಇದೆ. ಒಮ್ಮೆ ಅವರಿಗೆ ಹೀಗೆ ಅನ್ನಿಸಿತ್ತು. ನಮ್ಮ ಭಾಗದಲ್ಲಿ ಭತ್ತದ ಬೇಸಾಯ ವರುಷದಿಂದ ವರುಷಕ್ಕೆ ಕ್ಷೀಣವಾಗುತ್ತಿದೆ. ಒಳ್ಳೊಳ್ಳೆಯ ಭತ್ತದ ತಳಿಯು ನಮ್ಮಿಂದ ದೂರವಾಗುತ್ತಿದೆ. ಅವನ್ನು ಉಳಿಸಿಕೊಳ್ಳುವ ಮೂಲಕ ಮುಂದಿನ ಜನಾಂಗಕ್ಕೂ ಪರಿಚಯಿಸಬೇಕೆಂಬ ಆಸೆ ಮನದಲ್ಲಿ ಹೆಪ್ಪುಗಟ್ಟಿತ್ತು. ಹಾಗಾಗಿ ಆರ್. ಜಿ. ಭಟ್ ಅವರು 2005 ರಿಂದಲೇ ಪಾರಂಪರಿಕ ಭತ್ತದ ತಳಿಗಳನ್ನು ಉಳಿಸುವ ಮಹತ್ವವಾದ ಕಾರ್ಯವನ್ನು ಆರಂಭಿಸಿದರು.

ದೇವತೆಮನೆಯ ಉತ್ಸಾಹಿ ಕೃಷಿಕ ರಾಮಕೃಷ್ಣ ಭಟ್ ಅವರಿಗೆ ಅಪರೂಪದ, ವಿಶೇಷತೆ ಇರುವ ಭತ್ತದ ತಳಿಗಳನ್ನು ಶೋಧಿಸಿ ತರುವುದು, ಅದನ್ನು ವ್ಯವಸ್ಥಿತವಾಗಿ ಸಂರಕ್ಷಿಸಿ ಇಡುವುದು ಹೇಳಿದಷ್ಟು ಸುಲಭವೇನು ಆಗಿರಲಿಲ್ಲ. ಯಾವುದೇ ಊರಿನಲ್ಲಿ ಇಂಥದೊಂದು ತಳಿ ಇದೆಯೆಂದು ಸುಳಿವು ಸಿಕ್ಕಿದ ಮರುಗಳಿಗೆಯಲ್ಲಿಯೇ.... ಆ ಊರನ್ನು ಹುಡುಕಿಕೊಂಡು ಹೋಗುತ್ತಿದ್ದರು. ಇವರು

**ಭಟ್ ಅವರು ಕೇವಲ ದೇಶೀಯ ಭತ್ತದ ತಳಿಗಳನ್ನು ಸಂಗ್ರಹಿಸುವುದು, ಮತ್ತು ಅದರ ಸಂರಕ್ಷಣೆಯಲ್ಲಿ ಮಾತ್ರ ತೊಡಗಿಸಿಕೊಂಡಿಲ್ಲ. ತಮಗೆ ತಿಳಿದ ರೀತಿಯಲ್ಲಿ ಆ ಭತ್ತದ ವಿಶೇಷತೆಯ ಬಗ್ಗೆ ತಮ್ಮದೇ ಕಲ್ಪನೆಯಲ್ಲಿ ಪುಟ್ಟ ಚಾರ್ಟ್ ಅನ್ನು ಮಾಡಿ ದಾಖಲೆ ಮಾಡುತಿದ್ದಾರೆ. ಅಂದರೆ ಆ ಚಾರ್ಟ್‌ನಲ್ಲಿ ಭತ್ತದ ತಳಿಯ ಹೆಸರು, ಭತ್ತದ ಬಣ್ಣ, ಅಕ್ಕಿಯ ಬಣ್ಣ, ಗಾತ್ರ, ಅದು ಬೆಳೆಯುವ ಅವಧಿ, ಅದರ ಎತ್ತರ, ಅದು ಯಾವ ಕಾಲದ (ಮುಂಗಾರಿನ ಬೆಳೆಯೋ? ಹಿಂಗಾರಿನದೋ?) ಬೆಳೆ, ಆ ತಳಿ ಮಳೆ ಆಶ್ರಿತವೇ? ಅಥವಾ ನೀರಾವರಿಯೇ, ಇಳುವರಿ, ಪ್ರತಿ ಎಕರೆಗೆ ಹುಲ್ಲಿನ ಪ್ರಮಾಣ, ಈ ತಳಿಯನ್ನು ಗುರುತಿಸಲು ಇರುವ ಮುಖ್ಯ ಲಕ್ಷಣಗಳು.... ಹೀಗೆ ವಿವಿಧ ಮಾಹಿತಿಗಳನ್ನು ಬಹಳ ಅಚ್ಚುಕಟ್ಟಾಗಿ ದಾಖಲಿಸುತ್ತಾ ಇರುವುದು ವಿಶೇಷ.**





ಹೋದ ಸಮಯದಲ್ಲಿ ಭತ್ತದ ಬೀಜ ಸಿಗುತ್ತದೆ ಎನ್ನುವ ಗ್ಯಾರಂಟಿಯೇನು ಇರಲಿಲ್ಲ. ಹೋದ ಕಡೆ ಎಲ್ಲಾ, ಕಳೆದ ವರುಷದವರೆಗೆ ಆ ತಳಿಯ ಬೀಜವಿತ್ತು, ಆದರೆ ಈ ವರ್ಷ ಬೇರೆ ತಳಿಯ ಬೀಜವಿದೆ ಎಂಬ ಸಿದ್ಧ ಉತ್ತರ ಲಭಿಸುತ್ತಿತ್ತು. ಎಷ್ಟೋ ಸಂದರ್ಭದಲ್ಲಿ ಊಟ-ನಿದ್ದೆ ಬಿಟ್ಟು ಹಳೆಯ ದೇಶೀಯ ಭತ್ತದ ಬೀಜಕ್ಕಾಗಿ ಹುಡುಕಾಡಿದ್ದಾರೆ. ಭತ್ತದ ತಳಿಯನ್ನು ಹುಡುಕಿಕೊಂಡು ಹೋದ ಕಡೆಗಳಲ್ಲಿ ನಿರಾಸೆಯಾದರೂ.... ಪಾರಂಪರಿಕ ಭತ್ತದ ಬೀಜ ಸಂಗ್ರಹಿಸಬೇಕೆಂಬ ಉತ್ಸಾಹ, ಛಲ, ಅವರಲ್ಲಿ ಕಮರಿ ಹೋಗಲಿಲ್ಲ. ಒಮ್ಮೊಮ್ಮೆ ನಿರೀಕ್ಷೆ ಹುಸಿಯಾದರೂ, ಮತ್ತೆ ಮತ್ತೆ ಪ್ರಯತ್ನ ಮಾಡಿ ವಿವಿಧ ತಳಿಯ ಭತ್ತದ ಬೀಜವನ್ನು ಸಂಗ್ರಹಿಸಿದರು. ಅದು ಸಣ್ಣ ಸಾಧನೆಯೇನು ಅಲ್ಲಾ.

ಈ ಉತ್ಸಾಹಿ ಕೃಷಿಕರು ಶಿರಸಿ ತಾಲೂಕಿನ ಮಂಜುಗುಣಿ, ದೇವನಳ್ಳಿ, ಯಾಣ.... ಮುಂತಾದ ಹಳ್ಳಿಗಳಲ್ಲದೇ ಸಿದ್ದಾಪುರ, ಅಂಕೋಲಾ ತಾಲೂಕಿನ ಅನೇಕ ಹಳ್ಳಿಗಳನ್ನು ತಿರುಗಾಡಿ ಭಿನ್ನ ತಳಿಯ ಭತ್ತದ ಬೀಜ ಸಂಗ್ರಹಿಸಿದ್ದಾರೆ. ಮಾತ್ರವಲ್ಲ, ದಕ್ಷಿಣ ಕನ್ನಡ, ಚಿಕ್ಕಮಗಳೂರು.... ಹೀಗೆ ಹೊರ ಜಿಲ್ಲೆಗಳಿಗೂ ಹೋಗಿ ನಾನಾ ತರದ ಭತ್ತದ ಬೀಜವನ್ನು ಹುಡುಕಿಕೊಂಡು



Download From : www.kpscvaani.com

## ಭಿನ್ನ ತಳಿಗಳು

ರಾಮಕೃಷ್ಣ ಭಟ್ ಅವರು ನಿಷ್ಠೆಯಿಂದ ವಿಭಿನ್ನ ತಳಿಗಳನ್ನು ಬೆಳೆಸಿದ್ದಾರೆ. ಅವರಲ್ಲೀಗ ಅಂಕುರ ಸೋನಾ, ಅಮೃತ, ಉಮಾ, ಕಾರ ಚಿಟಗೆ, ಕುಂಕುಮ ಸಾಲಿ, ಗಂಧ ಶಾಲೆ, ಗೌರಿ, ಘನಸಾಲ, ಚಳ್ಳ ಭತ್ತ, ಜಡ್ಡ ಭತ್ತ, ಜೇನುಗೂಡು, ನೀರ ಮುಳಗ, ಬಂಗಾರಗುಂಡು, ಬಾಸುಮತಿ, ಮುಟ್ಟಳಗ, ರತ್ನಚೋಡಿ, ರಾಮಗಲ್ಲು, ಸುಮತಿ, ಗುಲ್ವಾಡಿ ಸಣ್ಣ, ಥೈಲ್ಯಾಂಡ್ ಭತ್ತ, ಕರಿಕಂಟಕ, ಅಂಬೆಮೊಹಲಿ.... ಸೇರಿದಂತೆ 108 ಬಗೆಯ ವೈವಿಧ್ಯಮಯ ತಳಿಯ ಭತ್ತದ ಕೃಷಿ ಮಾಡಿದ್ದಾರೆ. ನಾಲ್ಕಡಿ ಎತ್ತರದಿಂದ ಆರು ಅಡಿ ಎತ್ತರದವರೆಗೂ ಹುಲುಸಾಗಿ ಬೆಳೆದ ತರತರದ ತಳಿಗಳು ಅಲ್ಲಿವೆ. ಅವುಗಳನ್ನು ನೋಡಲು ತಮ್ಮೆರಡು ಕಣ್ಣುಗಳೇ ಸಾಲದೇನೋ ಅನ್ನಿಸುತ್ತದೆ.

ಇವರು ತಮ್ಮ ಗದ್ದೆಯಲ್ಲಿ ಶ್ರದ್ಧೆ, ಆಸಕ್ತಿ, ಛಲದಿಂದ ನಾಟಿ ಮಾಡಿದ ನಾನಾ ತರದ ಭತ್ತದ ತಳಿಗಳನ್ನು ಬಹಳ ಜವಾಬ್ದಾರಿಯಿಂದ ಆರೈಕೆ ಮಾಡುತ್ತಾರೆ. ಆಮೇಲೆ, ಅದರ ಕೊಯ್ಲಿನಲ್ಲಿಯೂ ಒಂದೊಂದು ತಳಿಯ ಬೀಜ ಮಿಶ್ರಣವಾಗದಂತೆ ಪ್ರತ್ಯೇಕವಾಗಿ ಇಟ್ಟುಕೊಂಡು, ಪ್ಲಾಸ್ಟಿಕ್ ಕವರಿನಲ್ಲಿಟ್ಟು ಸಂರಕ್ಷಣೆ ಮಾಡುತ್ತಾರೆ. ಈ ಪಾರಂಪರಿಕ ತಳಿ ಸಂರಕ್ಷಣೆಯ ಕಾರ್ಯವನ್ನು ನಾನು ಯಾವುದೇ ಕಾರ್ಮಿಕರಿಂದ ಮಾಡಿಸುವುದಿಲ್ಲ. ತುಸು ಸಮಯ ಹಿಡಿದರೂ, ನಾನೆ ಆ ಕಾರ್ಯವನ್ನು ನಿರ್ವಹಿಸುತ್ತೇನೆಂದು ಆರ್. ಜಿ. ಭಟ್ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇವರ ಸಾಹಸ ಪ್ರವೃತ್ತಿಯನ್ನು ಕಂಡು ಅನೇಕ ಸಂಘಟನೆಗಳು ಪುರಸ್ಕರಿಸಿವೆ. 2014 ರ ಧಾರವಾಡದ ಕೃಷಿ ಮೇಳದಲ್ಲಿ, 2017 ರಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿಯವರು ಗುರುತಿಸಿ ಗೌರವಿಸಿರುವುದು ಹೆಮ್ಮೆಯ ಸಂಗತಿ. ಅದು ಅವರ ಸಾಧನೆಗೆ ಸಂದ ಗೌರವವಾಗಿದೆ.

ಈ ಪಾರಂಪರಿಕ ಭತ್ತದ ತಳಿ ಸಂರಕ್ಷಣೆಯನ್ನು ತಪಸ್ಸಿನಂತೆ ಸ್ವೀಕರಿಸಿ, ಹಠದಿಂದ ಆ ಕೆಲಸವನ್ನು ಕೈಗೆತ್ತಿಕೊಂಡಿರುವ ದೇವತೆಮನೆಯ ಆರ್. ಜಿ. ಭಟ್ ಅವರಿಗೆ ಒಂದಿಷ್ಟು ಆಸೆಗಳಿವೆ. ನೂರಾರು ಭತ್ತದ ತಳಿಗಳನ್ನು ಸಂಗ್ರಹಿಸಿ, ಅವನ್ನು ಸಂರಕ್ಷಿಸಿದ ಹೆಮ್ಮೆಯಿದೆ. ನನ್ನಲ್ಲಿರುವ ತಳಿಗಳನ್ನು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಸಂರಕ್ಷಿಸಬೇಕೆಂಬ ದೊಡ್ಡ ಆಸೆಯಿದೆ. ಹಾಗಾಗಿ ಯಾರಾದರು ಕೃಷಿ ವಿಜ್ಞಾನಿಗಳಿಂದ ನನ್ನ ಪ್ರಯತ್ನಕ್ಕೆ ಸಹಾಯ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ತಂದು ತಮ್ಮ ಸಂಗ್ರಹದ ಗ್ಯಾಲರಿಯನ್ನು ವಿಸ್ತರಿಸಿಕೊಂಡಿದ್ದಾರೆ. 2005 ರಲ್ಲಿ ಭತ್ತದ ಬೀಜ ಸಂಗ್ರಹ ಆರಂಭಿಸಿದಾಗ ಇವರ ಬಳಿ ಕೇವಲ ನಾಲ್ಕೈದು ತಳಿಯ ಭತ್ತದ ಬೀಜ ಮಾತ್ರವಿತ್ತು. ನಿರಂತರ ಪ್ರಯತ್ನ, ನಿಷ್ಠೆ, ಛಲ, ಉತ್ಸಾಹದಿಂದ ಆ ಘನ ಕಾರ್ಯದಲ್ಲಿ ತೊಡಗಿಕೊಂಡು, ತಪಸ್ಸಿನಂತೆ ಆ ಕೆಲಸವನ್ನು ಕೈಗೊಂಡಿದ್ದರಿಂದ 2015 ರಲ್ಲಿ ಇವರ ಬಳಿ 210 ಕ್ಕೂ ಹೆಚ್ಚು ತಳಿಗಳು ದಾಸ್ತಾನಾಗಿದ್ದವು. ಬೇರೆ ಬೇರೆ ಕಾರಣಗಳಿಂದ ಈ ಪಾರಂಪರಿಕ ಭತ್ತದ ಬೀಜಗಳನ್ನು ಸಂರಕ್ಷಿಸಿ ಇಡಲು ಸಾಧ್ಯವಾಗಲಿಲ್ಲ. ಆದರೂ ಈಗ ಸದ್ಯ ಅವರ ಬಳಿ 108 ತಳಿಗಳನ್ನು ಕಾಣಬಹುದು.

### ಒಂದು ಗದ್ದೆ ಮೀಸಲು

'ಪಾರಂಪರಿಕ ತಳಿ ಸಂರಕ್ಷಣೆ' ಸುಲಭದ ಕೆಲಸವಲ್ಲ. ಅದು ವ್ಯಕ್ತಿಯೊಬ್ಬರು ದೀಕ್ಷೆ ಪಡೆದಂತೆ. ಕೇವಲ ಉತ್ಸಾಹವೊಂದು ಇದ್ದರೆ ಸಾಲದು. ನಿರಂತರ ಪ್ರಯತ್ನವೂ ಇರಬೇಕು. ಅದು ಸೂಕ್ಷ್ಮ ಹಾಗೂ ನಾಜೂಕಿನಿಂದ ಮಾಡುವ ಕೆಲಸವಾಗಿರುವುದರಿಂದ, ತುಸು ತಾಳ್ಮೆಯೂ ಅವಶ್ಯಕ.

ದೇವತೆಮನೆಯ ಪ್ರಗತಿಪರ ಕೃಷಿಕರಾದ ರಾಮಕೃಷ್ಣ ಭಟ್ ಅವರಿಗೆ ಆ ಗುಣವಿಶೇಷತೆಗಳು ಇರುವುದರಿಂದಲೇ, ಹಠದಿಂದ ಆ ಮಹತ್ವದ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಎಷ್ಟೇ ಕಷ್ಟವಾದರೂ ತಳಿ ಸಂರಕ್ಷಣೆಯಲ್ಲಿ ಹೆಗಲೊಡ್ಡಿ ನಿಂತಿದ್ದಾರೆ. ಅವರು ಪ್ರತೀ ವರುಷವೂ ತಮ್ಮಲ್ಲಿರುವ ನಾನಾ ರೀತಿಯ ಭತ್ತದ ಬೀಜಗಳನ್ನು ಮೊಳಕೆ ಬರಿಸಿ ನಾಟಿ ಮಾಡುತ್ತಾರೆ. ಈ ವೈವಿಧ್ಯಮಯ ಬೀಜಗಳನ್ನು ನಾಟಿ ಮಾಡುವುದಕ್ಕಾಗಿಯೇ ಇವರು ಒಂದು ಗದ್ದೆಯನ್ನು ಮೀಸಲಿಟ್ಟಿದ್ದಾರೆ. ಈ ವರ್ಷವೂ ಕೂಡ ತಮ್ಮ ಒಂದು ಗದ್ದೆಯಲ್ಲಿ 108 ಬಗೆಯ ಭತ್ತದ ಬೀಜವನ್ನು ವ್ಯವಸ್ಥಿತವಾಗಿ ಹಾಕಿ ಕೃಷಿ ಮಾಡಿದ್ದಾರೆ.

### ತಳಿಗಳ ದಾಖಲಾತಿ

ಆರ್. ಜಿ. ಭಟ್ ಅವರು ಕೇವಲ ದೇಶೀಯ ಭತ್ತದ ತಳಿಗಳನ್ನು ಸಂಗ್ರಹಿಸುವುದು, ಮತ್ತು ಅದರ ಸಂರಕ್ಷಣೆಯಲ್ಲಿ ಮಾತ್ರ ತೊಡಗಿಸಿಕೊಂಡಿಲ್ಲ. ತಮಗೆ ತಿಳಿದ ರೀತಿಯಲ್ಲಿ ಆ ಭತ್ತದ ವಿಶೇಷತೆಯ ಬಗ್ಗೆ ತಮ್ಮದೇ ಕಲ್ಪನೆಯಲ್ಲಿ ಪುಟ್ಟ ಚಾರ್ಟ್ ಅನ್ನು ಮಾಡಿ ದಾಖಲೆ ಮಾಡುತಿದ್ದಾರೆ. ಅಂದರೆ ಆ ಚಾರ್ಟ್‌ನಲ್ಲಿ ಭತ್ತದ ತಳಿಯ ಹೆಸರು, ಭತ್ತದ ಬಣ್ಣ, ಅಕ್ಕಿಯ ಬಣ್ಣ, ಗಾತ್ರ, ಅದು ಬೆಳೆಯುವ ಅವಧಿ, ಅದರ ಎತ್ತರ, ಅದು ಯಾವ ಕಾಲದ (ಮುಂಗಾರಿನ ಬೆಳೆಯೋ? ಹಿಂಗಾರಿನದೋ?) ಬೆಳೆ, ಆ ತಳಿ ಮಳೆ ಆಶ್ರಿತವೇ? ಅಥವಾ ನೀರಾವರಿಯೇ, ಇಳುವರಿ, ಪ್ರತಿ ಎಕರೆಗೆ ಹುಲ್ಲಿನ ಪ್ರಮಾಣ, ಈ ತಳಿಯನ್ನು ಗುರುತಿಸಲು ಇರುವ ಮುಖ್ಯ ಲಕ್ಷಣಗಳು.... ಹೀಗೆ ವಿವಿಧ ಮಾಹಿತಿಗಳನ್ನು ಬಹಳ ಅಚ್ಚುಕಟ್ಟಾಗಿ ದಾಖಲಿಸುತ್ತಾ ಇರುವುದು ವಿಶೇಷ.

ಮಲೆನಾಡಿನ ಪ್ರದೇಶದಲ್ಲಿ ಈಗ ಭತ್ತದ ಕೃಷಿ ವಿರಳವಾಗುತ್ತಿದೆ. ಉತ್ಸಾಹದಿಂದ ಮಾಡುವವರು ಸಹಾ ಒಂದೇ ಜಾತಿಯ ಭತ್ತದ ಬೀಜ ಹಾಕಿ ನಾಟಿ ಮಾಡುವವರೇ ಹೆಚ್ಚು. ಒಂದಕ್ಕಿಂತ ಹೆಚ್ಚು ತಳಿಗಳನ್ನು ಹಾಕಿದರೆ, ಅದರ ಕೊಯ್ಲು, ಸಂಸ್ಕರಣೆ ಮಾಡುವುದು ತುಂಬಾ ಕಷ್ಟವೆನ್ನುವ ಕಾರಣಕ್ಕೆ ಒಂದೇ ತಳಿಯ ಕೃಷಿಯನ್ನು ಮಾಡುತ್ತಾರೆ. ಈ ಪ್ರದೇಶದ ವಾಸ್ತವದ ಸಂಗತಿ ಹೀಗಿರುವಾಗ, ದೇವತೆಮನೆಯ ಆರ್. ಜಿ. ಭಟ್ ಅವರು ಮನೆ ಖರ್ಚಿಗಾಗಿ ಒಂದು ತಳಿ (ಈ ವರ್ಷ ಮುಟ್ಟಳಗ ಜಾತಿ ಭತ್ತ) ಯನ್ನು ಹಾಗೂ ಒಂದು ಗದ್ದೆಯಲ್ಲಿ ನಾನಾ ರೀತಿ ತಳಿಯ ಭತ್ತವನ್ನು ನಾಟಿ ಮಾಡಿ, ಪಾರಂಪರಿಕ ತಳಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಕಾರ್ಯವೆಂದರೂ ಅತಿಶಯೋಕ್ತಿ ಆಗಲಾರದು.

ಭತ್ತದ ತಳಿಯ ಬಗ್ಗೆ ಆಸಕ್ತಿ ಹೊಂದಿರುವ ಕೃಷಿಕರು ಮತ್ತು ಕೃಷಿ ವಿಜ್ಞಾನಿಗಳು ರಾಮಕೃಷ್ಣ ಗಜಾನನ ಭಟ್ ಅವರನ್ನು ದೂರವಾಣಿ ಸಂಖ್ಯೆ 9480562825 ಮೂಲಕ ಸಂಪರ್ಕಿಸಬಹುದು.



Download From : www.kpscvaani.com

# ರೈತರ ಸೇವೆಗೆ ಕೃಷಿ ಸಂಜೀವಿನಿ

ಹೆಚ್. ಶಿವಣ್ಣ

**ಕಾಲಕಾಲಕ್ಕೆ ಮಣ್ಣು, ಹವಾಮಾನ, ಕೀಟನಾಶಕಗಳು, ರೋಗಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ಮತ್ತು ಪರಿಹಾರವನ್ನು ಒದಗಿಸುವ ಸಲುವಾಗಿ "ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ" ಸೇವೆಯನ್ನು ಸರ್ಕಾರವು ಪ್ರಾರಂಭಿಸಿದೆ.**

ಕರ್ನಾಟಕ ಸರ್ಕಾರ ರೈತರ ಮನೆ ಬಾಗಿಲಿಗೆ ತಲುಪುವಂತ ಮತ್ತೊಂದು ಮಹತ್ವದ ಯೋಜನೆಗೆ ಚಾಲ್ತಿ ನೀಡುವ ಮೂಲಕ 2020–21 ರ ಬಜೆಟ್‌ನಲ್ಲಿ ಘೋಷಿಸಿದಂತೆ 'ಕೃಷಿ ಸಂಜೀವಿನಿ' ಹೆಸರಿನ ರೈತ ಸ್ನೇಹಿ ಯೋಜನೆಯನ್ನು ರಾಜ್ಯದ ರೈತರಿಗೆ ಸಮರ್ಪಿಸಿದೆ.

ರೈತರ ಪಾಲಿಗಿದು ಅತ್ಯಂತ ಮಹತ್ವದ ಮತ್ತು ಉಪಯೋಗವಾಗುವಂತಹ ಯೋಜನೆ ಇದಾಗಿದೆ. ನೈಸರ್ಗಿಕ ವಿಕೋಪಗಳಾದ ಅತಿವೃಷ್ಠಿ-ಅನಾವೃಷ್ಠಿ ಹಾಗೂ ಚಂಡಮಾರುತಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಬೆಳೆಗಳಿಗೆ ಕಾಡುವ ಕೀಟ ಮತ್ತು ರೋಗಬಾಧೆ, ಮಣ್ಣಿನ ಫಲವತ್ತತೆ ಕುರಿತ ಮಾಹಿತಿಗಳನ್ನು 'ಕೃಷಿ ಸಂಜೀವಿನಿ' ಮೂಲಕ ರೈತರಿಗೆ ತಿಳಿಸಿಕೊಡಲಾಗುತ್ತದೆ.

ಕೃಷಿ ಇಲಾಖೆಯ ವತಿಯಿಂದ ಆಯೋಜಿಸಿರುವ ಕೃಷಿ ಸಂಜೀವಿನಿ ಒಂದು 'ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ'. ಆಯಾ ಜಿಲ್ಲೆಗಳಲ್ಲಿ ಸಂಚರಿಸುವ ಈ ಸಂಚಾರಿ ಕೃಷಿ ಚಿಕಿತ್ಸಾಲಯದಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ.

ಸುಧಾರಿತ ಕೃಷಿ ಉತ್ಪಾದನಾ ತಾಂತ್ರಿಕತೆ, ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ, ಸಮರ್ಪಕ ಗೊಬ್ಬರ ಬಳಕೆ ಬಗ್ಗೆ ಮಾಹಿತಿ, ಮಣ್ಣಿನ ಪೋಷಕಾಂಶಗಳ ಪರೀಕ್ಷೆ ಮತ್ತು ಪೋಷಕಾಂಶಗಳ ಕೊರತೆ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಜೊತೆಗೆ ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಬೆಳೆಗಳನ್ನು ಬೆಳೆಯುವ ಬಗ್ಗೆ ಸಲಹೆ ನೀಡುವುದು ಸೇರಿದೆ.

2020–21 ಆಯವ್ಯಯದಲ್ಲಿ ಘೋಷಿಸಿದಂತೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರಾಜ್ಯ ಸರ್ಕಾರದ ಅನುದಾನವು ಸೇರಿದಂತೆ 40 ಸಂಚಾರಿ ಆರೋಗ್ಯ ಚಿಕಿತ್ಸಾಲಯಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯನಿರ್ವಹಿಸಲಿವೆ.





Download From : www.kpscvaani.com

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ 2022ರ ವೇಳೆಗೆ ರೈತರ ಆದಾಯ ದ್ವಿಗುಣಗೊಳ್ಳಬೇಕು ಎಂಬ ಆಶಯದಂತೆ ರೈತರಿಗೆ ನೆರವಾಗಲು ರಾಜ್ಯ ಸರ್ಕಾರ ಮುಂದಾಗಿದೆ.

ಬೆಳೆಗಳ ಉತ್ಪಾದನಾ ವೆಚ್ಚ ಕಡಿತ, ಬೆಳೆಹಾನಿ ನಿಯಂತ್ರಣ ಹಾಗೂ ಲಾಭದಾಯಕ ಕೃಷಿ ಅನುಕೂಲಕ್ಕಾಗಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ–ಕೃಷಿ ಸಂಜೀವಿನಿ ಜಾರಿಗೆ ತರಲಾಗುತ್ತಿದ್ದು, ರೈತರ ಅಭಿವೃದ್ಧಿಗೆ ಇದು ಪೂರಕವಾಲಿದೆ.

ಸುಧಾರಿತ ಕೃಷಿ ಪದ್ಧತಿ, ಕೃಷಿಯಲ್ಲಿ ತೊಡಗುವವರಿಗೆ ಉತ್ತೇಜನ, ಕೃಷಿ ಉತ್ಪಾದನಾ ತಾಂತ್ರಿಕತೆ, ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ ರಾಜ್ಯ ಸರ್ಕಾರದ ನಿಲುವಾಗಿದ್ದು, ರಸಗೊಬ್ಬರ ಬಳಕೆ, ರೋಗ–ಕೀಟಗಳ ಹತೋಟಿ, ಮಣ್ಣಿನಲ್ಲಿರುವ ಪೋಷಕಾಂಶಗಳ ಬಗ್ಗೆ ಮಾರ್ಗೋಪಾಯಗಳನ್ನು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಕೃಷಿ ಸಂಜೀವಿನಿ ನಿರ್ವಹಿಸಲಿದೆ.

ರೈತರಿಗೆ ಅತ್ಯಂತ ಹೆಚ್ಚು ಉಪಯೋಗವಾಗಲಿರುವ 'ಕೃಷಿ ಸಂಜೀವಿನಿ'ಯನ್ನು ರೈತರು ಸದುಪಯೊಗ ಪಡಿಸಿಕೊಂಡು ಯಶಸ್ವಿಯಾಗಬೇಕು.

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



ರೈತ ಬೆಳೆದ ಬೆಳೆಯ ಬಗ್ಗೆ ನಿರಂತರ ಮಾಹಿತಿ ಸಂಗ್ರಹಿಸಿ, ಕಾಲಕಾಲಕ್ಕೆ ಯಾವುದೇ ಕೀಟ ಹಾಗೂ ರೋಗಬಾಧೆಗಳಿಲ್ಲದೆ ಉತ್ತಮ ಫಸಲು ತೆಗೆಯುವ ಹಾಗೆ ಮಾರ್ಗೋಪಾಯಗಳನ್ನು ನೀಡಲಾಗುತ್ತದೆ. ಕೃಷಿ ಇಲಾಖೆಯ ಅಧಿಕಾರಿಗಳು, ತಜ್ಞರು, ವಿಶ್ವವಿದ್ಯಾನಿಲಯದ ಕೃಷಿ ವಿಜ್ಞಾನಿಗಳು ಯಾವುದೇ ಪ್ರದೇಶದಲ್ಲಿ ಕೃಷಿ ಬೆಳೆಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ಪರಿಹರಿಸಿ, ರೈತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಮುಖ್ಯವಾಗಿ ರೈತರ ಪ್ರದೇಶಗಳಿಗೆ ತೆರಳಿ ಬೆಳೆ ಪರೀಕ್ಷೆ ಮಾಡಿ ಸಲಹೆ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ.

ರೈತ ಬಳಸುವ ಗೊಬ್ಬರಗಳು ಕಲಬೆರಕೆಯೇ, ನಕಲಿಯೇ ಅಥವಾ ಕಳಪೆಗುಣಮಟ್ಟದ್ದೇ ಎಂಬುದರ ಬಗ್ಗೆ ಸ್ಥಳೀಯವಾಗಿ ರೈತರನ್ನು ಬೇಟಿ ಮಾಡಿ ಗೊಬ್ಬರವನ್ನು ಪರೀಕ್ಷಿಸುವ ಪ್ರಾತ್ಯಕ್ಷಿಕೆಗಳನ್ನೂ ನೀಡಲಿದ್ದಾರೆ. ಇದರಿಂದ ರೈತ ತನ್ನ ಹೊಲದಲ್ಲಿ ತಾನೇ ರಸಗೊಬ್ಬರಗಳನ್ನು ಪರೀಕ್ಷಿಸಿಕೊಳ್ಳಬಹುದಾಗಿದೆ.

**"155313" ಕೃಷಿ ಸಂಜೀವಿ ಸಹಾಯವಾಣಿ:**

ಈ ಯೋಜನೆಯಡಿ ಕೃಷಿ ಸಂಜೀವಿನಿ ಸಹಾಯವಾಣಿಯು ಚಾಲ್ತಿಗೆ ಬಂದಿದ್ದು, ರೈತರು ಯಾವುದೇ ಶುಲ್ಕವಿಲ್ಲದೆ 155313 ನಂಬರ್‌ಗೆ ಕರೆ ಮಾಡಿದಲ್ಲಿ, ಜಿಲ್ಲಾ ಮಟ್ಟದ ಅಧಿಕಾರಿಗಳು ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿದ್ದಾರೆ. ಅವಶ್ಯಕತೆ ಬಿದ್ದಲ್ಲಿ, ಕೃಷಿ ಸಂಜೀವಿನಿ ವಾಹನದಲ್ಲೇ ಸ್ಥಳಕ್ಕೆ ಭೇಟಿ ನೀಡಿ ರೈತರೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ಪರಿಹಾರ ಸೂಚಿಸಲಿದ್ದಾರೆ. ಅಲ್ಲದೇ, ಆಯಾ ಪ್ರದೇಶದ ರೈತರಿಗೆ ಬೆಳೆಗಳ ಬಗ್ಗೆ, ಹವಾಮಾನದ ಬಗ್ಗೆ, ರೈತರ ನೋಂದಾಯಿತ ಮೊಬೈಲ್‌ಗಳಿಗೆ ಸಂದೇಶವನ್ನೂ ರವಾನಿಸಲಾಗುತ್ತದೆ.

ಒಟ್ಟಾರೆ ರೈತರ ಬೆಳೆ ಹಾನಿಯನ್ನು ತಗ್ಗಿಸಿ, ಉತ್ತಮ ಬೆಳೆ ನಿರ್ವಹಣೆ ಮತ್ತು ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ ರೈತರ ಬದುಕಲ್ಲಿ ನೆಮ್ಮದಿ ತರುವುದು ಕೃಷಿ ಸಂಜೀವಿನಿಯ ಕೆಲಸವಾಗಲಿದೆ. ಹಾಗಾಗಿ ರೈತರು ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ 155313 ದೂರವಾಣಿಗೆ ಉಚಿತ ಕರೆ ಮಾಡಬಹುದಾಗಿದೆ.

**ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ಸಂಜೀವಿನಿ ನೀಡುವ ಉದ್ದೇಶ:**

ರಾಜ್ಯದ ಹೋಬಳಿ ಮಟ್ಟದಲ್ಲಿ ಸ್ಥಾಪಿಸಲಾಗಿರುವ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ 'ರೈತ ಸಂಜೀವಿನಿ' ಸಂಚಾರಿ ಕೃಷಿ ಆರೋಗ್ಯ ಚಿಕಿತ್ಸಾಲಯಗಳನ್ನು ನೀಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಹಾಲಿ 40 ಸಂಚಾರಿ ಘಟಕಗಳ ಕಾರ್ಯ ವೈಖರಿಯನ್ನು ಹಾಗೂ ರೈತರಿಗೆ ಇದರಿಂದಾಗುತ್ತಿರುವ ಅನುಕೂಲಗಳನ್ನು ಗಮನಿಸಿ, ಮುಂದಿನ ದಿನಗಳಲ್ಲಿ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಂದೊಂದು ಕೃಷಿ ಸಂಜೀವಿನಿ ಸಂಚಾರಿ ಸಸ್ಯ ಚಿಕಿತ್ಸಾ ವಾಹನಗಳನ್ನು ನೀಡಲು ಸರ್ಕಾರವು ಉದ್ದೇಶಿಸಿದೆ.

ಜನವರಿ 7 ರಂದು ವಿಧಾನಸೌಧದ ಮುಂಭಾಗದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ('ಕೃಷಿ ಸಂಜೀವಿನಿ') 40 ವಾಹನಗಳನ್ನು ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್, ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಹಾಗೂ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ■



Download From : www.kpscvaani.com

# ಪ್ರಕೃತಿ ಪ್ರಿಯರ ಸ್ವರ್ಗ ಮೈದಾನಹಳ್ಳಿ

**ಪ್ರಕೃತಿ ಮತ್ತು ವನ್ಯಜೀವಿ ಪ್ರಿಯರಿಗೆ ಒಂದು ದಿನದ ಪ್ರವಾಸ ಕೈಗೊಳ್ಳಲು ತುಮಕೂರು ಜಿಲ್ಲೆಯ ಮೈದಾನಹಳ್ಳಿ ಪ್ರಶಸ್ತ ಪ್ರವಾಸಿ ತಾಣವಾಗಿದೆ.**

ಡಾ. ಬಿ. ಆರ್. ಮಮತಾ
(ಅನುವಾದ ಕೆಂಗೇರಿ ರಮೇಶ್)

ಬೆಂಗಳೂರಿನ ಪಕ್ಕದಲ್ಲಿಯೇ ಇರುವ ತುಮಕೂರು ಜಿಲ್ಲೆ ಪರಿಸರ ಕಾಪಾಡುವ ವ್ಯವಸ್ಥೆಯ ತವರೂರು ಎಂದರೆ ಬಹಳ ಜನ ನಂಬುವುದಿಲ್ಲ. ಜಯಮಂಗಲಿ ಬ್ಲ್ಯಾಕ್‌ಬಕ್ ರಿಸರ್ವ್ (ಹಿಂದೆ ಮೈದಾನಹಳ್ಳಿ ಎಂದು ಕರೆಯಲಾಗತ್ತಿದ್ದ) ಪ್ರಕೃತಿ ಪ್ರಿಯರ ಸ್ವರ್ಗವಾಗಿರುವ ಮೈದಾನಹಳ್ಳಿ ತುಮಕೂರು ಕಾಪಾಡಿಕೊಂಡು ಬಂದಿರುವ ರಹಸ್ಯಗಳಲ್ಲಿ ಒಂದು. ವನ್ಯಜೀವಿಗಳ ವೈವಿಧ್ಯತೆಯನ್ನು ನೋಡುವ, ಕೇಳುವ ಮತ್ತು ಅನುಭವಿಸುವ ಅನನ್ಯ ಅವಕಾಶವನ್ನು ಒದಗಿಸುವ ಇದು ವೈವಿಧ್ಯಮಯ ಹಕ್ಕಿಗಳ ತಾಣವೂ ಹೌದು. ಅಳಿವಿನಂಚಿನಲ್ಲಿರುವ ಬ್ಲ್ಯಾಕ್‌ಬಕ್‌ಗೆ ನೆಲೆಯಾಗಿರುವ ಈ ಪ್ರದೇಶ, ಅನೇಕ ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತಿನ ವೈವಿಧ್ಯಪೂರ್ಣ ಸಂಗ್ರಹ ತಾಣವಾಗಿದೆ.

ಹೆಸರೇ ಸೂಚಿಸುವಂತೆ 'ಮೈದಾನಹಳ್ಳಿ' ಸಮತಟ್ಟಾದ ತೆರೆದ ಭೂ ಪ್ರದೇಶವಾಗಿದ್ದು, ಜಯಮಂಗಲಿ ಬ್ಲ್ಯಾಕ್‌ಬಕ್ ಧಾಮಕ್ಕೆ ಅಂಟಿಕೊಂಡಂತೆಯೇ ಇರುವ ಊರು. ತುಮಕೂರಿನ ಏಕೈಕ ಸಂರಕ್ಷಿತ ಪ್ರದೇಶವಾದ ಇದು, ಮಧುಗಿರಿಯಿಂದ ಕೇವಲ 15 ಕಿ.ಮೀ ಅಂತರದಲ್ಲಿದೆ. ರಾಣೆಬೆನ್ನೂರಿನ ಬ್ಲ್ಯಾಕ್‌ಬಕ್ ವನ್ಯಜೀವಿ ಧಾಮದ ನಂತರ ಕರ್ನಾಟಕದಲ್ಲಿ ಅತಿಹೆಚ್ಚು ಬ್ಲ್ಯಾಕ್‌ಬಕ್ ಹೊಂದಿರುವ ವನ್ಯಜೀವಿಗಳ ಧಾಮ ಇದಾಗಿದೆ. ಇಲ್ಲಿನ ತೆರೆದ ಹುಲ್ಲುಗಾವಲು,











Download From : www.kpscvaani.com



ಬ್ಲ್ಯಾಕ್‌ಬಕ್‌ಗಳನ್ನು ಹೊರತುಪಡಿಸಿ, ಇಲ್ಲಿ ಬಾನೆಟ್ ಮಕಾಕ್, ಜಂಗಲ್‌ಕ್ಯಾಟ್, ಸ್ಮಾಲ್ ಇಂಡಿಯನ್ ಸಿವೆಟ್, ಇಂಡಿಯನ್ ಗ್ರೇ ಮಂಗೂಸ್, ಇಂಡಿಯನ್ ಫಾಕ್ಸ್, ಇಂಡಿಯನ್ ಗ್ರೇ ವುಲ್ಫ್, ಪಾರ್‌ಕ್ಯೂಪೈನ್, ಕಾಡುಹಂದಿಗಳು ಬಾವಲಿ ಮತ್ತು ಇಲಿಗಳ ಕೆಲವು ಪ್ರಬೇಧಗಳು ಕಂಡು ಬರುತ್ತವೆ.

ನಡೆದಾಡುತ್ತಿದ್ದಂತೆಯೇ ಈ ಪ್ರಾಣಿಗಳನ್ನು ನೋಡಲು ಅನುಕೂಲ ಮಾಡಿಕೊಟ್ಟಿದೆ.

ಬೆಳ್ಳಂಬೆಳಗ್ಗೆಯೇ ಹೊರಟ ನಾವು ಮೈದಾನಹಳ್ಳಿಯನ್ನು ತಲುಪಿದಾಗ, ಸೂರ್ಯ ಆಗ ತಾನೇ ಕಣ್ಣುಬಿಡುತ್ತಿದ್ದ. ಮೈಲುಗಟ್ಟಲೆ ಹಸಿರು ಹುಲ್ಲುಗಾವಲು, ಮಧ್ಯೆ ನೀಲಗಿರಿ ಮರ ಮತ್ತಿತರ ಸಣ್ಣ ಪೊದೆಗಳು ನೋಡಲು ಮನೋಹರವಾಗಿತ್ತು.

ಜಯಮಂಗಲಿ ಬ್ಲ್ಯಾಕ್‌ಬಕ್ ರಿಸರ್ವ್, ತುಮಕೂರಿನ ಮೊಟ್ಟ ಮೊದಲ ಸಂರಕ್ಷಿತ ಪ್ರದೇಶವಾಗಿದ್ದು, ಸಮುದಾಯ ಮತ್ತು ಸರ್ಕಾರದ ಸಹ ನಿರ್ವಹಣೆಯ ಅತ್ಯುತ್ತಮ ಉದಾಹರಣೆಯಾಗಿದೆ. ವನ್ಯಜೀವಿ ತಜ್ಞ ಸಂಜಯ ಗುಬ್ಬಿ, ಈ ಪ್ರದೇಶದ ನಿರ್ಮಾಣ ಹಂತದಿಂದಲೂ ತೊಡಗಿಸಿಕೊಂಡಿದ್ದವರು. ಇದರ ಹಿಂದೊಂದು ಕುತೂಹಲಕರ ಕಥೆಯಿದೆ. ಅವರೇ ಹೇಳುವಂತೆ "1987 ರಲ್ಲಿ, ಸ್ಥಳೀಯರು ಇಲ್ಲಿ ಬ್ಲ್ಯಾಕ್‌ಬಕ್ ಇರುವ ಬಗ್ಗೆ ತುಮಕೂರು ವಿಭಾಗದ ಅರಣ್ಯ ಇಲಾಖೆಯ ಗಮನಕ್ಕೆ ತಂದಾಗ, ಅರಣ್ಯ ಇಲಾಖೆ ತಕ್ಷಣವೇ ಈ ಪ್ರದೇಶವನ್ನು ಸಂರಕ್ಷಿಸತೊಡಗಿದರು.



ಹುಲ್ಲಿನ ಮೇಲೆ ನಡೆದಾಡುವುದು ಆಹ್ಲಾದಕರವಾಗಿತ್ತು. ನಡೆದಾಡುತ್ತಿದ್ದಂತೆ ಹುಲ್ಲಿನ ಮಧ್ಯೆ ಕಾಡು ಹೂಗಳನ್ನು ಕಾಣಬಹುದಿತ್ತು. ಲಂಟಾನಾ ಕಾಮರಾವನ್ನೇ ಹೋಲುವ ಸಣ್ಣ ಸಣ್ಣ ಗುಲಾಬಿ ಮತ್ತು ಹಳದಿ ಬಣ್ಣದ ಹೂಗಳು ಹುಲ್ಲಿನ ( ಮೈಡೆನ್ ಗ್ರಾಸ್) ಮಧ್ಯೆ ಎದ್ದು ಕಾಣುತ್ತಿದ್ದವು. ನೀಲಿ–ನೇರಳೆ ಬಣ್ಣದ ಬುಶ್ ಲ್ಯುಪೈನ್ (ಲ್ಯುಪಿನಸ್ ಅಲ್‌ಬಿಫಾರ್ನ್ಸ್), ಮಂಕಿ ಫ್ಲವರ್ (ಮಿಮ್ಯುಲಸ್ ಆರಾಟಿಯಾಕಸ್) ಮತ್ತಿತರ ಕಾಡು ಹೂಗಳು ಹಸಿರು ಹುಲ್ಲಹಾಸಿನ ಮೇಲೆಲ್ಲಾ ಚೆಲ್ಲಿದಂತಿದ್ದವು.

**ಈ ಪ್ರದೇಶದ ಪರಿಸರವು ಅನೇಕ ಅಪರೂಪದ ಪಕ್ಷಿಗಳಿಗೆ ಅನುಕೂಲ ವಾತಾವರಣ ಕಲ್ಪಿಸಿದೆ. ಹೀಗಾಗಿ ಇಲ್ಲಿ ವಿವಿಧ ಬಗೆಯ ಪಕ್ಷಿಗಳು ವಾಸವಿದ್ದು, ಪಕ್ಷಿ ಪ್ರಿಯರಿಗೆ ಪ್ರೀತಿಯ ಸ್ಥಳವಾಗಿದೆ. ಈ ಹಕ್ಕಿಗಳನ್ನು ಬಿಟ್ಟಕಣ್ಣು ಬಿಟ್ಟಕೊಂಡು ನೋಡುತ್ತಿದ್ದಾಗ, 'ನಿಮಗೆ ಗೊತ್ತಾ, ಇಲ್ಲಿ 125 ಪ್ರಬೇಧದ ಹಕ್ಕಿಗಳಿದ್ದು, 37**



Download From : www.kpscvaani.com



**ತುಮಕೂರಿನ ಪ್ರಕೃತಿ ಪ್ರಿಯರ ಮುಂದುವರೆದ ಶ್ರಮ ಈ ಪ್ರದೇಶವನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಯಿತು. ಈ ಪ್ರದೇಶದ ಸ್ವಲ್ಪ ಭಾಗಕ್ಕೆ ಬೇಲಿ ಹಾಕಿ, ನರ್ಸರಿಯೊಂದನ್ನು ಪ್ರಾರಂಭಿಸಿದರು. ತುಮಕೂರಿನ ಪ್ರಕೃತಿಪ್ರಿಯರ ಪರಿಶ್ರಮದ ಫಲವಾಗಿ ಈ ಪ್ರದೇಶಕ್ಕೆ, ವನ್ಯಜೀವಿ ಧಾಮದಂತೆ ಸಂರಕ್ಷಿತ ವಲಯವೆಂಬ ಸ್ಥಾನ ಲಭಿಸಿತು. ಈ ಪ್ರದೇಶದ ಬಗ್ಗೆ 1997ರಲ್ಲಿ ಸ್ಥಿತಿಗತಿ ಸಮೀಕ್ಷೆಯ ವರದಿಯನ್ನು ತುಮಕೂರಿನ ವೈಲ್ಡ್‌ಲೈಫ್ ನೇಚರ್ ಕ್ಲಬ್ ಪ್ರಕಟಿಸಿತು. ಈ ವರದಿಯಿಂದಾಗಿ ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗವು ಈ ಪ್ರದೇಶದ ಡಾಟಾ ಕಲೆ ಹಾಕಿ, 'ಕನ್ಸರ್ವೇಷನ್ ರಿಸರ್ವ್" ಎಂದು ಘೋಷಿಸಲು ಸಾಧ್ಯವಾಯಿತು. ಫೆಬ್ರವರಿ 2007 ರಲ್ಲಿ 798.33 ಎಕರೆ ಪ್ರದೇಶವನ್ನು ಅಂತಿಮವಾಗಿ ಜಯಮಂಗಲಿ ಬ್ಲ್ಯಾಕ್‌ಬಕ್ ಕನ್ಸರ್ವೇಷನ್ ರಿಸರ್ವ್ ಎಂದು ಘೋಷಿಸಲಾಯಿತು."**

**ಪ್ರವರ್ಗಗಳನ್ನು ಇಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ 22 ಕ್ಕೂ ಹೆಚ್ಚು ಪ್ರವರ್ಗಗಳು ವಲಸೆ ಹಕ್ಕಿಗಳು' ಎಂದು ಸಂಜಯ್ ಗುಬ್ಬಿ ಅವರು ಹೇಳಿದಾಗ ನಾನು ಆಶ್ಚರ್ಯ ಚಕಿತಳಾದೆ. "ಈ ಹಕ್ಕಿಗಳು ಕಾಣಸಿಗುವ ಕರ್ನಾಟಕದ ಕೆಲವೇ ಅಪರೂಪದ ತಾಣಗಳಲ್ಲಿ ಇದೊಂದು. ಇಂಡಿಯನ್ ಕರ್ಸರ್ (ಕರ್ಸೋರಿಯಸ್ ಕೋರೋಮ್ಯಾಂಡಲಿಕಸ್) ಮತ್ತು ಪೈಂಟೆಡ್ ಸ್ಯಾಂಡ್‌ಗ್ರೌಸ್ (ಟೆರೋಕಲ್ಸ್ ಇಂಡಿಕಸ್ ಇಂಡಿಕಸ್) ಕಾಣಸಿಗುತ್ತದೆ. ಸುತ್ತಮುತ್ತಲಿನ ಕೆಲವು ಗ್ರಾಮಸ್ಥರು ದಿ ಗ್ರೇಟ್ ಇಂಡಿಯನ್ ಬಸ್ಟರ್ಡ್‌ನ್ನು ಈ ಹಿಂದೆ ಕಂಡಿರುವುದಾಗಿ ತಿಳಿಸಿದ್ದಾರೆ" ಎಂದರು ಸಂಜಯ್.**

ತಲೆಯ ಮೇಲೆ ಗಿರಿಗಿಟ್ಟಲೆ ಸುತ್ತುತ್ತಿದ್ದ ಹಕ್ಕಿಗಳನ್ನು ಹಾಗೂ ಕೆಳಗೆ ರೆಕ್ಕೆ ಬಡಿಯುತ್ತಿದ್ದ ಬಣ್ಣಬಣ್ಣದ ಪಾತರಗಿತ್ತಿಯರನ್ನು ನನ್ನ ಕ್ಯಾಮರಾದಲ್ಲಿ ಸೆರೆಹಿಡಿಯಲು ಹೆಣಗಾಡುತ್ತಿದ್ದೆ. ದಣಿವಾರಿಸಿಕೊಳ್ಳಲೆಂದೋ ಅಥವಾ ಕಂಡ ಬೇಟೆಯನ್ನು ಹಿಡಿಯಲೆಂದೋ ಹಲವು ಹಕ್ಕಿಗಳು ಸುಯ್ ಎಂದು ಆಗ್ಗಾಗ್ಗೆ ಧುಮುಕುತ್ತಿದ್ದವು. ರಾಪ್ಟರ್ಸ್, ಕಾಡು ಹಕ್ಕಿಗಳು, ಎಲ್ಲೋ-ವ್ಯಾಟೆಲ್ಡ್ ಲಾಪ್‌ವಿಂಗ್ಸ್, ಕ್ರಸ್ಟೆಡ್-ಸ್ಪ್ಯಾರೋ, ಲಾರ್ಕ್, ಸತರನ್ ಗ್ರೇ ಶ್ರೈಕ್ ಮತ್ತು ರೆಡ್ ಕಾಲರ್ಡ್ ಡವ್ ಮುಂತಾದ ಹಕ್ಕಿಗಳು ಕಣ್ಣಿಗೆ ಕಾಣಸಿಕಿದ್ದು ಅದೃಷ್ಟವೇ ಸರಿ.

ಎಷ್ಟೋ ಹೊತ್ತಿನವರೆಗೆ ನಮಗೆ ಬ್ಲ್ಯಾಕ್‌ಬಕ್‌ಗಳ ಸುಳಿವೇ ಸಿಗಲಿಲ್ಲ. ರ್ಯಾಲ್ಫ್ ವಾಲ್ಡೋ ಎಮರ್‌ಸನ್‌ನ ಈ ಮಾತುಗಳು ನನಗೆ ನೆನಪಿಗೆ ಬಂದವು "ಪ್ರಕೃತಿಯ ಓಘಕ್ಕೆ ಹೊಂದಿಕೊಳ್ಳಿರಿ: ತಾಳ್ಮೆ ಅವಳ ರಹಸ್ಯ" ನಮ್ಮ ಸಂತೋಷಕ್ಕಾಗಿ ಅವುಗಳನ್ನು ಸ್ಟೇಜ್ ಮೇಲೆ ಕಾಣಿಸಿಕೊಳ್ಳುವ ಪಾತ್ರಧಾರಿಗಳಂತೆ ಕಾಣಿಸಿಕೊಳ್ಳಿ ಎಂದು ನಿರೀಕ್ಷಿಸುವುದು ಅತಿಯಾಗುತ್ತದೆ. ಅಲ್ಲವೇ. ಇನ್ನೇನು ನಮ್ಮ ತಾಳ್ಮೆಯ ಕಟ್ಟೆ ಒಡೆಯುತ್ತದೆ ಎನ್ನುವಾಗಲೇ, ಉದ್ದಕ್ಕೂ ಚಾಚಿರುವ ಹುಲ್ಲು ಆಸಿನ ಮೇಲೆ ಬಹಳ ಸಾವಧಾನವಾಗಿ ಅಡ್ಡಾಡುತ್ತಿದ್ದ ಬ್ಲ್ಯಾಕ್‌ಬಕ್‌ಗಳ ಹಿಂಡೊಂದನ್ನು ಕಂಡು ದಂಗುಬಡಿದುಬಿಟ್ಟೆವು.
ತಿರುಚಿಕೊಂಡಂತಿರುವ ಕೊಂಬುಗಳನ್ನು ಹೊಂದಿದ, ಕಪ್ಪಗೆ ಮಿರ ಮಿರ ಮಿಂಚುವ ಗಂಡು ಮತ್ತು ಹೆಣ್ಣು ಬ್ಲಾಕ್‌ಬಕ್‌ಗಳು, ಹಿಂದೆಯೇ ಹಿಂಬಾಲಿಸಿಕೊಂಡು ಹೋಗುವ ತಮ್ಮ ಮರಿಗಳು. ಅವುಗಳ ನಡಿಗೆಯ ಬೆಡಗು ಕಣ್ತುಂಬಿಕೊಳ್ಳುವಂಥದ್ದು. ಹಸಿರು ಹುಲ್ಲಿನ ಮೇಲೆ ಚಂಗನೆ ಹಾರಿ ನೆಗೆಯುವುದು ಒಂದು ಮಾಯಾಲೋಕವನ್ನೇ ಸೃಷ್ಟಿಸಿದಂತಿತ್ತು. ಇದ್ದಕ್ಕಿದ್ದಂತೆ ನಮ್ಮ ಇರುವಿಕೆಯನ್ನು ಗಮನಿಸಿದ ಅವು ಧಿಡೀರನೆ ನೆಗೆದು ಕಣ್ಮರೆಯಾದವು.

ಬ್ಲ್ಯಾಕ್‌ಬಕ್‌ಗಳನ್ನು ಹೊರತುಪಡಿಸಿ, ಇಲ್ಲಿ ಬಾನೆಟ್ ಮಕಾಕ್, ಜಂಗಲ್ ಕ್ಯಾಟ್, ಸ್ಮಾಲ್ ಇಂಡಿಯನ್ ಸಿವೆಟ್, ಇಂಡಿಯನ್ ಗ್ರೇ ಮಂಗೂಸ್, ಇಂಡಿಯನ್ ಫಾಕ್ಸ್, ಇಂಡಿಯನ್ ಗ್ರೇ ವುಲ್ಫ್, ಪಾರ್‌ಕ್ಯೂಪೈನ್, ಕಾಡುಹಂದಿಗಳು ಬಾವಲಿ ಮತ್ತು ಇಲಿಗಳ ಕೆಲವು ಪ್ರಬೇಧಗಳು ಕಂಡು ಬರುತ್ತವೆ. ಇಲ್ಲಿ ಹಾವು ಮತ್ತು ಇನ್ನಿತರ ಸರೀಸೃಪಗಳ ಪ್ರಬೇಧಗಳೂ ಇರುವುದರಿಂದ ಎಚ್ಚರಿಕೆಯಿಂದ ಹೆಜ್ಜೆಗಳನ್ನಿರಿಸುವಂತೆ ಸೂಚಿಸಿದರು.

ಸೂರ್ಯ ಮುಳುಗುತ್ತಿದ್ದಂತೆಯೇ, ಇಡೀ ಪ್ರದೇಶದಿಂದ ಹೊಮ್ಮುವ ವಿವಿಧ ಬಗೆಯ ಸದ್ದು ಒಂದು ಸಂಗೀತಮಯ ರಸ ಸಂಜೆಯನ್ನಾಗಿಸಿತ್ತು. ಮೈದಾನಹಳ್ಳಿಯು ಪ್ರಾಕೃತಿಕ ಸೌಂದರ್ಯದ ಬೀಡಾಗಿದೆ. ಪ್ರಕೃತಿ ಪ್ರಿಯರನ್ನು ತನ್ನತ್ತ ಸೆಳೆಯುತ್ತಾ, ಪ್ರಕೃತಿಯನ್ನು ಕಾಪಿಡುತ್ತಾ ಬಂದಿರುವ ರಮ್ಯ ತಾಣ.

ಬೆಂಗಳೂರು-ತುಮಕೂರು-ಕೊರಟಗೆರೆ-ಮಧುಗಿರಿ-ಹಿಂದುಪುರ ರಸ್ತೆ-ಪುರುವರ (ಮಧುಗಿರಿಯಿಂದ 10 ಕಿ.ಮೀ) ಐಡಿ ಹಳ್ಳಿಯಿಂದ ಎಡಕ್ಕೆ ತಿರುಗಿ, 8 ಕಿ.ಮೀ ನಂತರ ಬಲಕ್ಕೆ ತಿರುಗಿದರೆ "ಜಯಮಂಗಲಿ ಬ್ಲ್ಯಾಕ್‌ಬಕ್ ರಿಸರ್ವ್" ಅನ್ನು ತಲುಪಬಹುದಾಗಿದೆ. ■



Download From : www.kpscvaani.com

**ಕಾ**ಮಿನಿ ನದಿ ಸಮುದ್ರ ಸೇರುವ ಉಡುಪಿಯ ಕಾಪು ತಾಲೂಕಿನ ಪಡುಬಿದ್ರೆಯ ಎಂಡ್ ಪಾಯಿಂಟ್ ಬೀಚ್‌ನ 1 ಕಿಮೀ ಉದ್ದ ಮತ್ತು ಸುಮಾರು 600 ಮೀಟರ್ ವ್ಯಾಪ್ತಿಯ ಪ್ರದೇಶಕ್ಕೆ ಬ್ಲೂಫ್ಲ್ಯಾಗ್ ಬೀಚ್ ಎಂದು ಅಂತಾರಾಷ್ಟ್ರೀಯ ಮಾನ್ಯತೆ ದೊರೆತಿದೆ.

ಡೆನ್ಮಾರ್ಕ್‌ನ ಫೌಂಡೇಶನ್ ಫಾರ್ ಎನ್ವಿರಾನ್ಮೆಂಟಲ್ ಎಜುಕೇಷನ್ ಸಂಸ್ಥೆಯು ಈ ಬೀಚ್‌ಗೆ ಸ್ವಚ್ಛ, ಸುಂದರ ಮತ್ತು ಸುರಕ್ಷಿತ ಪ್ರವಾಸಿ ಕಡಲ ತೀರ ಎಂಬ ಅಂತಾರಾಷ್ಟ್ರೀಯ ಬ್ಲೂಫ್ಲ್ಯಾಗ್ ಪ್ರಮಾಣಪತ್ರವನ್ನು ನೀಡಿದೆ. ಇದರಿಂದ ಬ್ಲೂಫ್ಲ್ಯಾಗ್ ಬೀಚ್ ಎಂಬ ಮಾನ್ಯತೆ ಪಡೆದ ರಾಜ್ಯದ ಎರಡನೇ ಬೀಚ್ ಎನಿಸಿಕೊಂಡಿದೆ. ರಾಜ್ಯದಲ್ಲಿ ಈ ಮಾನ್ಯತೆ ಪಡೆದ ಮೊದಲ ಬೀಚ್ ಉತ್ತರ ಕನ್ನಡ ಜಿಲ್ಲೆಯ ಕಾಸರಕೋಡು ಬೀಚ್.







# ಪಡುಬಿದ್ರೆ ಬೀಚ್‌ಗೆ
## ಬ್ಲೂಫ್ಲ್ಯಾಗ್ ಕಿರೀಟ

**ದೇವಾಲಯಗಳಿಗೆ ಹಾಗೂ ಸುಂದರ ಕಡಲ ತೀರಗಳಿಗೆ ಉಡುಪಿ ಜಿಲ್ಲೆಯು ಪ್ರಸಿದ್ಧವಾಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಇಲ್ಲಿನ ಪಡುಬಿದ್ರೆ ಬೀಚ್ ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು, ಬ್ಲೂಫ್ಲ್ಯಾಗ್ ಮಾನ್ಯತೆಯನ್ನು ಪಡೆದುಕೊಂಡಿದೆ.**

ಬಿ.ಶಿವಕುಮಾರ್



Download From : www.kpscvaani.com

ಇದುವರೆಗೂ ದೇಶದ 8 ಬೀಚ್‌ಗಳು ಬ್ಲೂಫ್ಲ್ಯಾಗ್ ವಿಶ್ವ ಮಾನ್ಯತೆಯನ್ನು ಪಡೆದುಕೊಂಡಿವೆ. ಅದರಲ್ಲಿ ಎರಡು ನಮ್ಮ ರಾಜ್ಯದ ಬೀಚ್‌ಗಳು ಎಂಬುದು ಹೆಮ್ಮೆಯ ವಿಷಯ.

ಪಡುಬಿದ್ರೆ ಬೀಚ್‌ನಲ್ಲಿನ ಪರಿಸರ ನಿರ್ವಹಣೆ, ಸುರಕ್ಷತೆ, ಸ್ವಚ್ಛತೆ ಮುಂತಾದ ಮಾನದಂಡದ ಆಧಾರದಲ್ಲಿ, ಕೇಂದ್ರದ ನಿರ್ಣಾಯಕ ಮಂಡಳಿ, ಪರಿಸರ ತಜ್ಞರು ಮತ್ತು ವಿಜ್ಞಾನಿಗಳನ್ನೊಳಗೊಂಡ ರಾಷ್ಟ್ರೀಯ ಸ್ವತಂತ್ರ ತಂಡವು ಬ್ಲೂಫ್ಲ್ಯಾಗ್ ಮಾನ್ಯತೆಗಾಗಿ ಅಂತಾರಾಷ್ಟ್ರೀಯ ನಿರ್ಣಾಯಕ ಮಂಡಳಿಗೆ ಶಿಫಾರಸ್ಸು ಮಾಡಿತ್ತು. ನಿರ್ಣಾಯಕ ಮಂಡಳಿಯ ಶಿಫಾರಸ್ಸಿನ ಮೇಲೆ ಪಡುಬಿದ್ರೆ ಬೀಚ್ ಈಗ ಬ್ಲೂಫ್ಲ್ಯಾಗ್ ಪ್ರಮಾಣ ಪತ್ರವನ್ನು ಪಡೆದುಕೊಂಡು ಅಂತಾರಾಷ್ಟ್ರೀಯ ಮಾನ್ಯತೆಯನ್ನು ಪಡೆದುಕೊಂಡಿದೆ.

ಅಂತಾರಾಷ್ಟ್ರೀಯ ಮಾನ್ಯತೆಯನ್ನು ಪಡೆಯುವಂತಾಗಲು ಪಡುಬಿದ್ರೆ ಬೀಚ್‌ನಲ್ಲಿ ನೀಡಲಾಗಿರುವ ಸೌಲಭ್ಯಗಳೇ ಕಾರಣ ಎಂದರೆ ತಪ್ಪಾಗಲಾರದು. ಸ್ವಚ್ಛ, ಉತ್ತಮ ಪರಿಸರ ಮತ್ತು ಗುಣಮಟ್ಟದ ನೀರನ್ನು ಹೊಂದಿರುವ ಕಡಲತೀರಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಮುಂದಾಗಿತ್ತು. ಹಾಗಾಗಿ ಈ ಯೋಜನೆಗೆ ಕೇಂದ್ರ ಸರ್ಕಾರ 8 ಕೋಟಿ ರೂ ಹಾಗೂ ರಾಜ್ಯ ಸರ್ಕಾರ 2.5 ಕೋಟಿ ರೂ ಅನುದಾನವನ್ನು ನೀಡಲಾಗಿತ್ತು. ಗುರುಗಾಂವ್‌ನ ಎ ಟು ಝಡ್ ಸಂಸ್ಥೆ ಪಡುಬಿದ್ರೆ ಬೀಚ್ ಕಾಮಗಾರಿಯ ಗುತ್ತಿಗೆಯನ್ನು ಪಡೆದುಕೊಂಡಿತ್ತು.



**ಪಡುಬಿದ್ರೆ ಬೀಚ್‌ಗೆ ಬ್ಲೂಫ್ಲ್ಯಾಗ್ ಮಾನ್ಯತೆ ದೊರೆತಿರುವುದರಿಂದ, ಜಿಲ್ಲೆಯ ಪ್ರವಾಸೋದ್ಯಮಕ್ಕೆ ಪೂರಕ ವಾತಾವರಣ ದೊರೆತಿದೆ. ಹಾಗಾಗಿ ಬೀಚ್ ಸಮೀಪ ಇರುವ ದ್ವೀಪವನ್ನು 5.4 ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಯೋಜನೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಪೆಡಲ್ ಬೋಟಿಂಗ್ ವ್ಯವಸ್ಥೆಯನ್ನು ಕೂಡ ಮಾಡಲು ಉದ್ದೇಶಿಸಲಾಗಿದೆ ಎನ್ನುತ್ತಾರೆ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಚಂದ್ರಶೇಖರ್ ನಾಯಕ್ ಅವರು.**

ಈ ಬೀಚ್‌ನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಜೈವಿಕ ಶೌಚಾಲಯಗಳನ್ನು ಮತ್ತು ಬಟ್ಟೆ ಬದಲಾವಣೆ ಕೊಠಡಿ, ಮತ್ತು ಸ್ನಾನದ ಕೊಠಡಿಯನ್ನು ನಿರ್ಮಾಣ ಮಾಡಲಾಗಿದೆ. ಅಲ್ಲದೆ ಮಕ್ಕಳ ಆಟಕ್ಕೆ ಮತ್ತು ಮನರಂಜನೆಗೆ ಚಟುವಟಿಕೆಗಳನ್ನು ಸ್ಥಾಪಿಸಲಾಗಿದೆ. ವಯೋವೃದ್ಧರು ಪರಿಸರವನ್ನು ಆಸ್ವಾದಿಸುತ್ತಾ, ಸುಂದರ ವಾತಾರಣದಲ್ಲಿ ಮೆಲ್ಲಗೆ ಹಜ್ಜೆ ಹಾಕಲು ಹಸಿರು ಹುಲ್ಲಿನ ಹಾಸು, ಜಾಗಿಂಗ್ ಟ್ರಾಕ್‌ಗಳನ್ನು ಮಾಡಲಾಗಿದೆ. ಇನ್ನು ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಬೀಚ್‌ನ ಸುತ್ತಮುತ್ತ ಸಿಸಿಟಿವಿಯನ್ನು ಕೂಡ ಅಳವಡಿಸಲಾಗಿದೆ. ಹಾಗೂ ಪ್ರಥಮ ಚಿಕಿತ್ಸಾ ಕೊಠಡಿ ವ್ಯವಸ್ಥೆಯನ್ನು ಮಾಡಲಾಗಿದೆ. ಸ್ವಚ್ಛ ಪರಿಸರ ನಿರ್ಮಾಣದ ಹಿನ್ನೆಲೆಯಲ್ಲಿ ಈ ಸ್ಥಳದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ಮತ್ತು ಪ್ರವಾಸಿಗರ ವಾಹನ ನಿಲುಗಡೆಗೆ ವಿಶಾಲ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಈ ಪ್ರವಾಸಿ ತಾಣದಲ್ಲಿ ಇನ್ನೊಂದು ವಿಶೇಷತೆಯಿದೆ. ಅದೇನೆಂದರೆ, ಪಡುಬಿದ್ರೆ ಬೀಚ್‌ನಲ್ಲಿ ಸೌರಶಕ್ತಿಯನ್ನು ಬಳಕೆ ಮಾಡಲಾಗುತ್ತಿದೆ. ಸೌರಶಕ್ತಿಯಿಂದ 40 ಕೆವಿ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಪ್ರವಾಸಿ ಸ್ಥಳಕ್ಕೆ ಅಗತ್ಯವಿರುವ ವಿದ್ಯುತ್ ಅನ್ನು ಇದು ಪೂರೈಸುತ್ತದೆ.

ಬ್ಲೂಫ್ಲ್ಯಾಗ್ ಮಾನ್ಯತೆ ಹೊಂದಿರುವ ಬೀಚ್‌ಗಳು ಅತ್ಯಂತ ಸುರಕ್ಷಿತವಾಗಿದ್ದು, ಅಂಗವಿಕಲರು ಸೇರಿದಂತೆ ಎಲ್ಲಾ ವಯೋಮಾನದವರೂ ಅತ್ಯಂತ ಸುರಕ್ಷಿತವಾಗಿ ಬೀಚ್‌ನಲ್ಲಿ ಕಾಲ ಕಳೆಯಬಹುದು, ವಿದೇಶಿ ಪ್ರವಾಸಿಗರು ಬ್ಲೂಫ್ಲ್ಯಾಗ್ ಮಾನ್ಯತೆ ಹೊಂದಿರುವ ಕಡಲತೀರಗಳಲ್ಲಿ ಪರಿಸರ ಸ್ನೇಹಿ ವಾತಾವರಣ, ಅತ್ಯುತ್ತಮವಾದ ನೀರಿನ ಗುಣಮಟ್ಟ, ಸುರಕ್ಷತೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸ ಮಾಡಲು ಬಯಸುತ್ತಾರೆ. ಹಾಗಾಗಿ ಪಡುಬಿದ್ರೆ ಬೀಚ್ ಈಗ ಜಾಗತಿಕವಾಗಿ ಗುರುತಿಸಲ್ಪಟ್ಟಿದೆ. ಮುಂದೆ ಉಡುಪಿಗೆ ಭೇಟಿ ನೀಡಿದಾಗ ಮರೆಯದೇ ಪಡುಬಿದ್ರೆ ಬೀಚ್‌ಗೂ ಹೋಗಿ ಬನ್ನಿ.





Download From : www.kpscvaani.com



# ಸ್ವಯಂ ದೀಪ

## ಕಲಿವೀಡು ಕಲಾ ಕೃಷಿ ಶಾಲೆ

**ಕೊರೊನಾ ಕಾಲದಲ್ಲಿ ಮೂಡಿದ ಹೊಂಗಿರಣ "ಸ್ವಯಂದೀಪ ಕಲಿವೀಡು ಕಲಾ ಕೃಷಿ ಶಾಲೆ"ಯು ಭೂಮಿ-ರಂಗಭೂಮಿ ಕಲಿಕೆಯ ತಾಣವಾದ ಸುಮನ ಸಂಗಮ ಕಾಡುತೋಟವಾಗಿದೆ.**

ಮಂಜುನಾಥ ಡಿ. ಡೊಳ್ಳಿನ



ಕಳೆದ ವರ್ಷದ ಆರಂಭದಿಂದಲೇ ತನ್ನ ಕಾಣದ ಬಾಹುಗಳನ್ನು ಬಿಚ್ಚತೊಡಗಿದ ಕೊರೊನಾ ವೈರಾಣುವಿನ ನಿಯಂತ್ರಣಕ್ಕೆ, ಒಂದು ರಾಜ್ಯ, ಒಂದು ದೇಶ ಮಾತ್ರವಲ್ಲ ಇಡೀ ಜಗತ್ತೇ ತತ್ತರಿಸಿದ್ದು ಇದೀಗ ಇತಿಹಾಸದ ಪುಟಗಳಿಗೆ ಸೇರುತ್ತಿರುವ ಸಮಕಾಲೀನ ಸಂಗತಿ.

ಕೊರೊನಾ ತಡೆಗಟ್ಟಲು ದೇಶದಾದ್ಯಂತ ಜಾರಿಗೊಂಡ ಲಾಕ್‌ಡೌನ್‌ನಿಂದ ಎಲ್ಲಾ ಚಟುವಟಿಕೆಗಳು ಏಕಕಾಲಕ್ಕೆ ಸ್ಥಗಿತವಾದವು. ಶಾಲೆ, ಕಾಲೇಜು, ಬಸ್, ರೈಲು ಸಂಚಾರ, ವ್ಯಾಪಾರ–ವಹಿವಾಟು, ಕೈಗಾರಿಕಾ ಚಟುವಟಿಕೆಗಳು ಸ್ತಬ್ಧವಾಗಿ, ಮುಂದೇನು ಎಂದು ದಿಕ್ಕುತೋಚದ ಸ್ಥಿತಿಯನ್ನು ಕಳೆದ 2020 ರ ಇಡೀ ವರ್ಷದುದ್ದಕ್ಕೂ ಎದುರಿಸಬೇಕಾಯಿತು. ಕಲೆ, ರಂಗಭೂಮಿ ನೆಚ್ಚಿಕೊಂಡು ಆ ರಂಗದಲ್ಲಿ ಬದುಕು ಕಟ್ಟಿಕೊಳ್ಳಲು ಪ್ರಾರಂಭಿಕ ಹೆಜ್ಜೆ ಇರಿಸಿದ್ದ ಉದಯೋನ್ಮುಖ ಕಲಾವಿದರ ಪಾಲಿಗಂತೂ ಸಿಡಿಲಾಘಾತವೇ ಬಡಿದಂತಾಗಿತ್ತು. ಅಂತಹ ಕೊರೊನಾದ ಕರಾಳ ದಿನಗಳಲ್ಲಿ ಯುವಕಲಾವಿದರಿಗೆ ಧಾರವಾಡ ಸಮೀಪದ ಸುಮನ ಸಂಗಮ ಕಾಡುತೋಟದ ನಡುವೆ ಭರವಸೆಯ ಬೆಳ್ಳಿಕಿರಣ ಗೋಚರಿಸಿತು, ಮರುಭೂಮಿಯಲ್ಲಿ ಓಯಾಸಿಸ್ ದೊರೆತು ಹಸಿವು ಮತ್ತು ಜ್ಞಾನ ದಾಹಗಳೆರಡನ್ನೂ ಹಿಂಗಿಸುವ ಹಾದಿ ದೊರಕಿಸಿಕೊಟ್ಟಿತು.

**ಸುಮನ ಸಂಗಮ ಕಾಡುತೋಟ:**

ಧಾರವಾಡದ ಹೆಸರಾಂತ ಸ್ತ್ರೀರೋಗ ತಜ್ಞ, ಗಾಂಧಿಶಾಂತಿ ಪ್ರತಿಷ್ಠಾನದ ಅಧ್ಯಕ್ಷರೂ, ಕವಿಯೂ ಆಗಿರುವ



Download From : www.kpscvaani.com

ಡಾ.ಸಂಜೀವ ಕುಲಕರ್ಣಿ ಅವರು, ಧಾರವಾಡ ಹೊರವಲಯದ ದಡ್ಡಿಕಮಲಾಪುರ ಸಮೀಪ ಸುಮಾರು ಎರಡು ದಶಕಗಳ ಹಿಂದೆ 17 ಎಕರೆ ಬೋಳಾದ ಜಮೀನನ್ನು ಖರೀದಿಸಿ, ಇಂದು ಸಹಜ, ಸಾವಯವ ಮತ್ತು ನೈಸರ್ಗಿಕ ಕೃಷಿ ಪದ್ಧತಿಗಳಲ್ಲಿ ವೈವಿಧ್ಯಮಯ ಸಸ್ಯ, ಪ್ರಾಣಿ, ಪಕ್ಷಿಗಳಿಂದ ಕೂಡಿದ ಸಮೃದ್ಧ, ದಟ್ಟ ಕಾಡು ತೋಟವನ್ನಾಗಿ ಪರಿವರ್ತಿಸಿದ್ದಾರೆ.

ಸುಮನ ಸಂಗಮ ಎಂಬ ಹೆಸರಿನ ಈ ಕಾಡು ತೋಟದಲ್ಲಿ ಹಸಿರು ಪರಿಸರದ ಮಧ್ಯೆ ಅವರು ತಮ್ಮ ಸುಸ್ಥಿರ ಕೃಷಿ, ಜಲಸಂಗ್ರಹ, ಗಾಂಧಿ ಮಾದರಿಯ ಸರಳ ಜೀವನ, ಯೋಗ, ಧ್ಯಾನಗಳ ಚಟುವಟಿಕೆಗಳಿಗೆ ಪೂರಕವಾಗಿ ಹಲವು ಕಾರ್ಯಗಳನ್ನು ಮಾಡುತ್ತಿದ್ದಾರೆ. ಮೈನಾ ಹೊಂಡ, ಸಂಪಿಗೆ ಹೊಂಡ, ರಘು ತೀರ್ಥ, ಬೆಳದಿಂಗಳ ಹೊಂಡ, ಅಲ್ಲಮನ ಬಯಲು, ಕದಳಿ ಕೊಳ, ಬೋಧಿ ಕೆರೆಗಳ ಮೂಲಕ ಜಲಸಂಗ್ರಹ ಮತ್ತು ಅಂತರ್ಜಲಮಟ್ಟ ಹೆಚ್ಚಳದ ಪ್ರಯತ್ನಗಳನ್ನು ಕಾರ್ಯಗತಗೊಳಿಸಿದ್ದಾರೆ.

ಪೂರ್ಣ ಚಂದ್ರ, ಅರ್ಧ ಚಂದ್ರ, ಅಷ್ಟಾವಕ್ರ ಸಭಾ ಮಂಟಪಗಳು, ಝೆನ್ ಧ್ಯಾನ ವಲಯ, ಆಹಾರ ಉದ್ಯಾನ ಹೀಗೆ ವಿಭಿನ್ನ ಮತ್ತು ವಿಶಿಷ್ಟವಾಗಿ ಹತ್ತು ಹಲವು ಯಶಸ್ವಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಮಾವು, ಚಿಕ್ಕು, ಹಲಸು, ಸೀತಾ ಫಲ, ರಾಮ ಫಲ, ಹನುಮಾನ್ ಫಲ, ಬೆಣ್ಣೆಹಣ್ಣು, ನಕ್ಷತ್ರ ಹಣ್ಣು ಸೇರಿದಂತೆ ಹಲವಾರು ಜಾತಿಗಳ ವನ್ಯಸಂಕುಲ ಇಲ್ಲಿದೆ. ಸುಮಾರು ಐದೂವರೆ ಸಾವಿರ ವರ್ಷ ಬಾಳುವ ಆನೆ ಹುಣಸೆ, ಸರ್ವ ಸಾಂಬಾರ, ಕುಂಕುಮ ಹೀಗೆ ವೈವಿಧ್ಯಮಯ ಗಿಡಗಳಿವೆ. ತೋಟದಲ್ಲಿಯೇ ಸಿಗುವ ವಸ್ತುಗಳಿಂದಲೇ ನಿರ್ಮಿಸಿದ ಸರಳ, ಸುಂದರ ಮನೆಗಳು ಸುಮನ ಸಂಗಮ ಕಾಡು ತೋಟದಲ್ಲಿವೆ.

**ಸ್ವಯಂ ದೀಪ ಕಲಿವೀಡು ಕಲಾ ಕೃಷಿ ಶಾಲೆ:**

ಡಾ.ಸಂಜೀವ ಕುಲಕರ್ಣಿಯವರು ತಮ್ಮ ಪರಿಚಿತ ಹಲವು ರಂಗಾಸಕ್ತ ಯುವಕರು ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಏನು ಮಾಡಬೇಕೆಂಬ ಚಿಂತನೆಯಲ್ಲಿದ್ದದನ್ನು ಗಮನಿಸಿದರು. ಆ ಯುವಜನರಿಗಾಗಿ ಭೂಮಿ–ರಂಗಭೂಮಿ ಎರಡರಲ್ಲಿಯೂ ಕಲಿಯುವ, ಸಾಧಿಸುವ ಮಾರ್ಗಗಳನ್ನು ಕಂಡುಕೊಳ್ಳಲು ಸ್ವಯಂ ದೀಪ ಕಲಿವೀಡು ಕಲಾ ಕೃಷಿ ಶಾಲೆ ಪರಿಕಲ್ಪನೆಯೊಂದಿಗೆ ಯೋಜನೆಯೊಂದನ್ನು ರೂಪಿಸಿ, ಅನುಷ್ಠಾನಗೊಳಿಸಿದರು. ಆ ಮೂಲಕ ಸುಮಾರು 12 ಯುವಕ, ಯುವತಿಯರಿಗೆ ತೋಟದಲ್ಲಿ ಉಚಿತ, ಊಟ, ವಸತಿ ಹಾಗೂ ಸ್ಟೈಫಂಡ್‌ನೊಂದಿಗೆ ಕೃಷಿ ಹಾಗೂ ಕಲಾ ಕಲಿಕೆಗಳನ್ನು ಸ್ವಯಂ ಆಗಿಯೇ ಕೈಗೊಳ್ಳುವ ವಿನೂತನ ಮಾರ್ಗ ಕಲ್ಪಿಸಿದರು. ಸುಮಾರು ಹತ್ತು ತಿಂಗಳ ಅವಧಿಯ ಈ ಅನೌಪಚಾರಿಕ ಶಿಕ್ಷಣದ ಫಲವಾಗಿ ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಈ ತೋಟದ ಶಾಲೆಗೆ ಬಂದ ಯುವಜನರು ಕೃಷಿ, ಅಧ್ಯಯನ ಹಾಗೂ ರಂಗ ಪ್ರಯೋಗಗಳನ್ನು ಮುಂದುವರೆಸಿದರು. ಭೂಮಿ ಮತ್ತು ರಂಗಭೂಮಿಯಲ್ಲಿ ಬದುಕು ಕಟ್ಟಿಕೊಳ್ಳುವ ಭರವಸೆಯನ್ನು ತಮ್ಮದಾಗಿಸಿಕೊಂಡರು. ಕೊರೊನಾದ ಕರಾಳ ದಿನಗಳನ್ನು ಕಲಿಕೆಗೆ ವರದಾನವಾಗಿಸಿಕೊಂಡ ಸ್ವಯಂ ದೀಪ ಕಲಿವೀಡು ಬಳಗದ ವಿಭಿನ್ನ ನಡೆ, ಕಾಡಿನ ನಡುವೆ ಹೊಸ ರಂಗಕುಸುಮಗಳನ್ನೂ ಕೂಡ ಅರಳಿಸಿದ್ದು ಸಾಮಾನ್ಯ ಸಂಗತಿಯಲ್ಲ.

**ಕಾಡಿನ ಮಧ್ಯೆ ಹರಿದ ನಾದ ಝರಿ, ಕತ್ತಲ ಹಾಡು ಶಿಬಿರ:**

ನಾಗರಿಕತೆಯ ಹೆಸರಿನಲ್ಲಿ ಸಂವೇದನೆಗಳನ್ನೇ ಕಳೆದುಕೊಂಡು ಯಾಂತ್ರಿಕವಾಗಿ ನೆಮ್ಮದಿಯಿಲ್ಲದ ಬದುಕು ಸವೆಸುತ್ತಿರುವ ಈ ದಿನಗಳಲ್ಲಿ, ಇಂತಹ ಕೊರಗು ದೂರ ಮಾಡಲು ಹಾಡಿನ ಮೂಲಕ ಉತ್ಸಾಹ, ಜೀವ ಚೈತನ್ಯ ಚಿಗುರಿಸಿ ಪ್ರಕೃತಿ ಜೊತೆಗೆ ಸಹಜವಾಗಿ, ಸಮಾಧಾನವಾಗಿ ಬದುಕುವ ಹಾದಿಯನ್ನು ತೋರಲು ಶ್ರಮಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮಣಿನಾಲ್ಕೂರ ಗ್ರಾಮದವರಾದ ಅವರು ತಮ್ಮ ಕತ್ತಲಹಾಡು ಕಾರ್ಯಕ್ರಮಗಳ ಮೂಲಕ ನಾಡಿನಾದ್ಯಂತ ಹಣತೆಯ ಬೆಳಕು ಹರಡುತ್ತಿದ್ದಾರೆ.



ನಮ್ಮ ಅಂತರಂಗದೊಂದಿಗೆ ಸಂವಹನ ಮಾಡುವ, ಬದುಕಿನ ಭಾರವನ್ನು ಹಗುರಾಗಿಸಿ, ಒತ್ತಡಗಳಿಂದ ನಿರಾಳವಾಗಿಸುವ ವಿಧಾನಗಳನ್ನು ಹಾಡುಗಳ ಮೂಲಕ ಯುವಜನರ ಎದೆಗೆ ಇಳಿಸಲು ಐದು ದಿನಗಳ ಅವಧಿಯ ಕತ್ತಲಹಾಡು ಶಿಬಿರವನ್ನು ಈ ಕಾಡು ತೋಟದಲ್ಲಿ ನಡೆಸಿ, ಇಲ್ಲಿನ ವಿದ್ಯಾರ್ಥಿಗಳು ಮತ್ತು ಆಸಕ್ತರಿಗೆ ಸಂಗೀತದ ಸರಳ ಪಾಠಗಳ ಜೊತೆಗೆ ಒತ್ತಡ ರಹಿತವಾದ ಬದುಕು ನಿರ್ವಹಿಸಲು ಸಾಧ್ಯವಿರುವ ಸರಳತೆಯನ್ನು ಅವರು ಮನವರಿಕೆ ಮಾಡಿಕೊಟ್ಟರು.

ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ಕೊಪ್ಪಳ, ಬೆಂಗಳೂರು, ಬೆಳಗಾವಿ ಸೇರಿದಂತೆ ನಾಡಿನ ಹಲವು ಭಾಗಗಳಿಂದ ಬಂದ ಯುವಕ ಯುವತಿಯರು ಕೊರೊನಾ ಲಾಕ್‌ಡೌನ್ ಅವಧಿಯನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಲು ಸಾಧ್ಯವಾದುದರ ಬಗ್ಗೆ ಸಂತಸಗೊಂಡಿದ್ದಾರೆ.

ಈ ಕಾಡು ತೋಟದ ಮಧ್ಯೆ ಕೃಷಿ ಚಟುವಟಿಕೆಗಳೊಂದಿಗೆ, ಹಾಡು, ಸ್ವರ, ನಾದ, ರಂಗಭೂಮಿಯ ಮೂಲಕ ತಾವು ಕಲಿತದ್ದು ವಿನೂತನ ಅನುಭವ. ತಮ್ಮೊಳಗಿನ ಅನೇಕ ಸಂದೇಹಗಳಿಗೆ ಪರಿಹಾರ ನೀಡಿ ಹೊಸ ಭರವಸೆಯನ್ನು ಕಂಡುಕೊಳ್ಳಲು ಸ್ವಯಂದೀಪ ಕಲಿವೀಡು ಮತ್ತು ಕತ್ತಲಹಾಡು ಶಿಬಿರ ಸಾಧ್ಯವಾಗಿಸಿದೆ ಎಂದು ಇಲ್ಲಿನ ವಿದ್ಯಾರ್ಥಿಗಳು ಮತ್ತು ಶಿಬಿರಾರ್ಥಿಗಳು ಆತ್ಮವಿಶ್ವಾಸದ ನುಡಿಗಳನ್ನಾಡುತ್ತಾರೆ.

ಸಹಜ, ಸರಳ, ಸುಸ್ಥಿರ ಕೃಷಿ, ಕಲೆ, ಸಾಹಿತ್ಯ, ಹಾಡುಗಳ ಮೂಲಕ ಮಾತ್ರ ಎಂತಹ ದುರ್ಭರ ದಿನಗಳಲ್ಲಿಯೂ ಜೀವಸೆಲೆ ಕಂಡುಕೊಳ್ಳಬಹುದು. ಅರಿವಿನ ದೀಪಕ್ಕೆ ಎಣ್ಣೆ ಸುರಿಯಬಹುದು ಎಂಬುದನ್ನು ಸಾಕಾರಗೊಳಿಸುತ್ತಿರುವ ಧಾರವಾಡದ ಸುಮನ ಸಂಗಮ ಕಾಡುತೋಟದ ಸ್ವಯಂದೀಪ ಕಲಿವೀಡು ಕಲಾ ಕೃಷಿ ಶಾಲೆ ಕೊರೊನಾದ ಕರಾಳ ದಿನಗಳಲ್ಲಿಯೇ ಮೂಡಿದ ಹೊಂಗಿರಣವಾಗಿದೆ. ಡಾ.ಸಂಜೀವ ಕುಲಕರ್ಣಿ ಅವರ ಸಂಪರ್ಕ ಸಂಖ್ಯೆ: 94481 43100.



Download From : www.kpscvaani.com



# ದೇಹದಾನ

## ಸಾವಿನಾಚೆಗೂ ಸಮಾಜ ಸೇವೆ

ಸಂಗಮೇಶ ಎನ್ ಜವಾದಿ

**ಪ್ರಪಂಚದಲ್ಲಿ ದಾನ ಮಾಡುವವರು ದೇವರಿಗೆ ಸಮಾನರು ಮತ್ತು ಪೂಜೆಗೆ ಯೋಗ್ಯರು ಎನ್ನುವ ಮಾತು ಲೋಕದ ರೂಢಿಯಲ್ಲಿದೆ. ಸಮಾಜದ ಉನ್ನತಿಗೆ ಪ್ರತಿಫಲಾಪೇಕ್ಷೆ ಇಲ್ಲದೇ ಸ್ವಯಂ ಸ್ಫೂರ್ತಿಯಿಂದ ಕೊಡುಗೆ ನೀಡುವವರೇ ಶ್ರೇಷ್ಠ ಮಾನವೀಯ ಮೌಲ್ಯಗಳನ್ನು ಸಾರುವ ಮಹಾದಾನಿಗಳು.**

ಮರಣ ಎಂದರೆ ಜೀವಿಯ ಅಂತ್ಯ ಅಥವಾ ಕೊನೆ ಎಂದರ್ಥ. ಇನ್ನೊಂದು ಅರ್ಥದಲ್ಲಿ ಈ ಜಗತ್ತಿನಲ್ಲಿ ಕಣ್ಮರೆಯಾಗುವುದು. ಜನನದಂತೆ ಮರಣವೂ ನಿಸರ್ಗ ಸೃಷ್ಟಿ, ಅದನ್ನು ತಪ್ಪಿಸಲು ಯಾರಿಂದಲೂ ಇಲ್ಲಿಯವರೆಗೆ ಸಾಧ್ಯವಾಗಿಲ್ಲ. ಅಲ್ಲದೆ ಸಾಧ್ಯವಾಗದೇ ಇರಬಹುದಾದ ಪ್ರಕೃತಿಯ ವಿಸ್ಮಯದ ಸಂಕೇತ ಎಂದು ನಾವು ತಿಳಿದುಕೊಂಡಿದ್ದೇವೆ.

ಅದು ಏನೇ ಇರಲಿ ಬಿಡಿ, ಈಗ ನಮ್ಮ ಕಣ್ಣು ಮುಂದೆ ಕಾಣುವ ಜೀವನದ ಅಂತ್ಯದ ಬಗ್ಗೆ ವಿಚಾರ ಮಾಡೋಣ. ಮರಣವೆಂದರೆ ದೇಹದಿಂದ ಆತ್ಮ ಸ್ವತಂತ್ರವಾಗುವುದು ಎಂಬ ಭಾವನೆ ಜಗತ್ತಿನ ಎಲ್ಲ ದೇಶದ ಜನಸಾಮಾನ್ಯರಲ್ಲಿಯೂ ಇದೆ. ಎಲ್ಲಾ ಧರ್ಮಗಳಲ್ಲಿಯೂ ಸಹ ಮರಣ ಸಂಬಂಧ ಕಲ್ಪನೆಗಳಲ್ಲಿ ಸಾದೃಶ್ಯವಿದೆ. ಮನುಷ್ಯ ಸಹಜವಾದ ಆಸೆ, ಭೀತಿ, ನಿರೀಕ್ಷೆ, ಆಶೋತ್ತರಗಳನ್ನು ಮರಣದ ಕಲ್ಪನೆ ಪ್ರತಿಬಿಂಬಿಸುತ್ತದೆ. ಸಾವು ಜೀವಿಯೊಂದರಲ್ಲಿ ಇರುವ ಈ ಲೋಕದ ಎಲ್ಲಾ ಜೈವಿಕ ಕಾರ್ಯಗಳು ಮುಕ್ತಾಯ ಆಗುತ್ತವೆ. ವಯಸ್ಸಾದಾಗ, ಅಪೌಷ್ಟಿಕತೆ, ರೋಗ, ಹಸಿವು, ನಿರ್ಜಲೀಕರಣ, ಅಪಘಾತಗಳು, ಹಾಗೂ ಇನ್ನಿತರ ಹಲವಾರು ಸಮಸ್ಯೆಗಳಿಂದ ಸಾವು ಬರಬಹುದು. ಕರುಳು ಬಳ್ಳಿಯ ಸಂಬಂಧಗಳನ್ನು ಕಡಿದುಕೊಂಡು ಮತ್ತೆ ಮರಳಿ ಬರದ ಲೋಕಕ್ಕೆ ಹೋಗುವ ಪ್ರಸಂಗಕ್ಕೆ ನಾವೆಲ್ಲರೂ ಮೂಕ ಸಾಕ್ಷಿಗಳಾಗಿದ್ದೇವೆ.

ಆದರೆ ಮರಣ ನಂತರ ಸಹ ನಾವು ಸಮಾಜ ಸೇವೆ ಮಾಡಬಹುದೆಂದು ಅನೇಕ ಜನರಿಗೆ ತಿಳಿದಿಲ್ಲ. ಅಂದರೆ ಸಾವಿನಾಚೆಗೂ ಸಮಾಜಸೇವೆ ಎಂಬ ಅರ್ಥದಲ್ಲಿ ನಮ್ಮ ಜೀವನವನ್ನು ಪಾವನಗೊಳಿಸಬಹುದಾದ ಮಹತ್ವದ ಕೆಲಸ ಸ್ನೇಹಿತರೇ. ಸಾವಿನಾಚೆಗೂ ಸಮಾಜ ಸೇವೆ ಎಂದರೆ ನಾವು ಮರಣ ಹೊಂದಿದ ನಂತರ ನಮ್ಮ ದೇಹವನ್ನು ಹೂಳದೇ (ಮಣ್ಣು ಮಾಡದೇ) ಅಥವಾ ಸುಡದೇ, ನೇರವಾಗಿ ದೇಹವನ್ನು ಸಂಬಂಧಪಟ್ಟ ಆರೋಗ್ಯ ಇಲಾಖೆಗೆ ಹಸ್ತಾಂತರ ಮಾಡುವುದು. ನಮ್ಮ ದೇಹದ

**ದೇಹದಾನ ಹೇಗೆ ಮಾಡುವುದು:**

ಹತ್ತಿರದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅರ್ಜಿ ನಮೂನೆಗಳನ್ನು ಪಡೆದು ಅದನ್ನು ಸಂಪೂರ್ಣವಾಗಿ ಓದುವ ಮೂಲಕ ಮನಗಂಡು ಅದನ್ನು ತುಂಬಿದ ನಂತರ ಸಂಬಂಧ ಪಟ್ಟ ವೈದ್ಯಕೀಯ ಅಧಿಕಾರಿಗಳ ಹತ್ತಿರ ನೋಂದಾಯಿಸಬೇಕು. ಇದಕ್ಕೆ ಮನೆಯವರ ಒಪ್ಪಿಗೆ ಪಡೆದು ಅವರು ಸಹ ಸಹಿ ಮಾಡಲೇಬೇಕು. ಆಗಲೇ ಆ ಅರ್ಜಿಗೊಂದು ಬೆಲೆ ಬರುತ್ತದೆ. ನೋಂದಾವಣಿಯೇನು ಕಡ್ಡಾಯವೇನಲ್ಲ. ಮೃತಪಟ್ಟ ವ್ಯಕ್ತಿಯ ಕುಟುಂಬದವರು ಮನಸ್ಸು ಮಾಡಿದರೆ ವೈದ್ಯಕೀಯ ವಿದ್ಯಾಲಯಕ್ಕೆ ದೇಹವನ್ನು ದಾನ ಮಾಡಬಹುದಾಗಿದೆ.



Download From : www.kpscvaani.com

ಅಂಗಾಂಗಗಳು ವೈದ್ಯಕೀಯ ವಿದ್ಯಾರ್ಥಿಗಳ ಸಂಶೋಧನೆ ಮತ್ತು ಕಲಿಕೆಗೆ ಸಹಾಯವಾಗುತ್ತದೆ. ಅಲ್ಲದೆ ಹೊಸ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರೇರಣೆ ನೀಡುತ್ತದೆ. ಪ್ರತಿ 5 ವೈದ್ಯಕೀಯ ವಿದ್ಯಾರ್ಥಿಗಳಿಗೆ ಒಂದು ಶವದ ಅಗತ್ಯತೆ ಇದೆ. ಹಾಗಾಗಿ ನಾವು ಸತ್ತು ಹೋದ ನಂತರ ಸಮಾಜ ಸೇವೆ ಮಾಡಿದಂತಾಗುವುದಿಲ್ಲವೇ? ಖಂಡಿತವಾಗಿಯೂ ಸೇವೆ ಮಾಡಿದ ಹಾಗೆ ಆಗುತ್ತದೆ.

ಆದ್ದರಿಂದ ನಾವು ಈ ದಿಸೆಯಲ್ಲಿ ಯೋಚನೆ ಮಾಡುವುದು ಅವಶ್ಯಕತೆ ಇದೆ. ನಮ್ಮ ಸಾವಿನ ನಂತರ ದೇಹದಾನ ಮಾಡುವ ಕ್ರಿಯೆಯೂ ವೈಜ್ಞಾನಿಕವಾಗಿ ಸಾಧ್ಯವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ದೇಹದಾನದ ಪ್ರಕ್ರಿಯೆ ಅತ್ಯಂತ ಸರಳ ಹಾಗೂ ಸುಲಭವಾದುದು. ದೇಹದಾನ ಪಡೆಯುವ ವೈದ್ಯಕೀಯ ವಿದ್ಯಾಲಯ ಸಂಸ್ಥೆಯಲ್ಲಿ ನಿರ್ದಿಷ್ಟ ಅರ್ಜಿಗಳು ಲಭ್ಯವಿದ್ದು, ಅದನ್ನು ಸಂಪೂರ್ಣವಾಗಿ ತುಂಬಿ, ತುಂಬಿದ ನಂತರ ಸಂಸ್ಥೆಗೆ ನೀಡಿದರೆ ಅಲ್ಲಿನ ಅಧಿಕಾರಿಗಳು ನೊಂದಾಯಿಸಿಕೊಳ್ಳುತ್ತಾರೆ. ದೇಹದಾನ ಅರ್ಜಿಯೇ ದೇಹದಾನ ಸಮ್ಮತಿಯ ಉಯಿಲು. ಹಾಗಾಗಿ ಉಯಿಲಿನಲ್ಲಿ ದೇಹದಾನ ಮಾಡುವ ವ್ಯಕ್ತಿಯ ಎಲ್ಲ ವಿವರಗಳು, ದೇಹದಾನದಿಂದ ಹಾಗೂ ನಂತರದ ಪ್ರಕ್ರಿಯೆಗಳಿಗೆ ಒಪ್ಪಿಗೆ ನಿಬಂಧನೆ ಹಾಗೂ ವಾರಸುದಾರರ ಒಪ್ಪಿಗೆ ಇರುತ್ತದೆ. ಇದನ್ನು ಸಲ್ಲಿಸಿದ ನಂತರ ಸಂಸ್ಥೆಯು ತನ್ನ ಅನುಮೋದನೆ ಸೂಚಕವಾಗಿ ದೇಹದಾನ ಪ್ರಮಾಣ ಪತ್ರ ನೀಡುತ್ತದೆ. ಅದರಲ್ಲಿ ದೇಹದಾನ ಮಾಡಿದ ವ್ಯಕ್ತಿಯ ಪೂರ್ಣ ವಿವರ, ಮರಣಾನಂತರ ಬಂಧುಗಳು ಮಾಡಬೇಕಾದ ಕ್ರಿಯೆಗಳ ವಿವರಗಳು ಪ್ರಮಾಣ ಪತ್ರದಲ್ಲಿರುತ್ತದೆ. ಆ ಗುರುತು ಚೀಟಿಯನ್ನು ದೇಹದಾನ ಮಾಡಿದ ವ್ಯಕ್ತಿಯು ಯಾವಾಗಲೂ ತನ್ನ ಬಳಿ ಇಟ್ಟುಕೊಂಡಿರುವುದು ಅವಶ್ಯಕ. ಆಗ ಆತನಿಗೆ ಯಾವುದೇ ಆಕಸ್ಮಿಕ ಉಂಟಾದಾಗ ಅವರ ಅಂತಿಮ ಇಚ್ಛೆಯನ್ನು ನೆರವೇರಿಸಲು ಅನುಕೂಲವಾಗುತ್ತದೆ.

ಮರಣ ಹೊಂದಿದ ಕೂಡಲೇ ದೇಹದಾನ ಪಡೆಯುವ ಸಂಸ್ಥೆಗೆ ತಕ್ಷಣ ದೂರವಾಣಿ ಮೂಲಕ ತಿಳಿಸಬೇಕು. ಮೃತಪಟ್ಟ ಆರು ಗಂಟೆಯೊಳಗೆ ದೇಹವನ್ನು ಸಂಸ್ಥೆಗೆ ತಲುಪಿಸಿದರೆ ದೇಹದಾನಿಯ ನೇತ್ರಗಳನ್ನು ತೆಗೆದು ಅಂಧರ ಬಾಳಿಗೆ ಬೆಳಕನ್ನು ನೀಡಲಾಗುತ್ತದೆ. ಸಂಬಂಧಿಸಿದ ಸಂಸ್ಥೆಯವರೇ ಸುದ್ದಿ ತಲುಪಿದ ಕೂಡಲೇ ಬಂದು, ಮೃತದೇಹವನ್ನು ತೆಗೆದುಕೊಂಡು ಹೋಗುತ್ತಾರೆ.

ಈಗಾಗಲೇ ಸಾವಿರಾರು ಸಾರ್ವಜನಿಕರು ದೇಹದಾನಕ್ಕೆ ಮುಂದಾಗಿ ನೋಂದಣಿ ಮಾಡಿದ್ದಾರೆ, ಮತ್ತು ಮಾಡಿಸುತ್ತಿದ್ದಾರೆ. ಸತ್ತ ಮೇಲೆ ಮಣ್ಣಾಗುವ, ಹಿಡಿ ಬೂದಿಯಾಗುವ ದೇಹವನ್ನು ವೈಜ್ಞಾನಿಕ ಸಂಶೋಧನೆಗೆ ನೀಡುವುದು ಒಳ್ಳೆಯ ಬೆಳವಣಿಗೆ ತಾನೇ. ಹೀಗಾಗಿ ನಮ್ಮ 12ನೇ ಶತಮಾನದ ಶಿವಶರಣರು ಮರಣವೇ ಮಾನವಮಿ ಎಂದರು.

ವೈದ್ಯಕೀಯ ವಿಜ್ಞಾನ ಮುಂದುವರಿಬೇಕು ಅಂದರೆ ನಮ್ಮ ಕೊಡುಗೆ ತುಂಬ ಮಹತ್ವದ್ದಾಗಿದೆ. ಮರಣಾನಂತರ ಮಣ್ಣಾಗುವ ದೇಹವನ್ನು ವೈದ್ಯಕೀಯ ಸಂಸ್ಥೆ ಕಾಲೇಜುಗಳಿಗೆ ದಾನ ಮಾಡುವುದರಿಂದ ಅನೇಕ ಲಾಭವಿದೆ. ಇದರಿಂದ ವೈದ್ಯಕೀಯ ವಿಜ್ಞಾನ ಅಭಿವೃದ್ಧಿಯಾಗುತ್ತದೆ. ಅನೇಕ ವಿದ್ಯಾರ್ಥಿಗಳ ಕಲಿಕೆಗೆ ಸಹಾಯವಾಗುತ್ತದೆ. ಆಸಕ್ತರು ವೈದ್ಯಕೀಯ ಕಾಲೇಜು ಸಂಸ್ಥೆಗಳಿಗೂ ದೇಹದಾನ ಮಾಡಬಹುದು.

ಜೀವಿತಾವಧಿಯಲ್ಲಿ ನಾವು ಒಳ್ಳೆಯ ಕೆಲಸ ಮಾಡಿದ್ದಿವೋ ಇಲ್ಲವೋ, ಆದರೆ ಕೊನೇ ಪಕ್ಷ ಸತ್ತ ಮೇಲಾದರೂ ಒಂದು ಒಳ್ಳೆಯ ಕೆಲಸ ನಿಮ್ಮಿಂದಾರೆ ಅದು ಜೀವನದ ನಂತರ ಸಾರ್ಥಕತೆ ಎಂಬುದು ನೂರಕ್ಕೆ ನೂರರಷ್ಟು ಸತ್ಯ. ಸಾವಿನಾಚೆಗೂ ಸಮಾಜ ಸೇವೆ ಎಂಬ ಮಾತಿಗೆ ಸತ್ವ ಬರುತ್ತದೆ. ಸಮಾಜ ಎಷ್ಟೇ ಮುಂದುವರೆದಿದ್ದರೂ ಕೆಲವೊಂದು ವಿಚಾರಗಳಲ್ಲಿ ಜನರನ್ನು ಬದಲಿಸುವುದು ಕಷ್ಟ. ಹಾಗಾಗಿ ಅಂಗಾಂಗದಾನ ದೇಹದಾನದ ವಿಚಾರ ಬಂದರೆ ಹಿಂದೆ ಸರಿಯುವವರೇ ಹೆಚ್ಚು. ನಾವು ಸತ್ತರು ಕೂಡ ದೇಹದಾನ ಮತ್ತು ಅಂಗಾಂಗ ದಾನದಿಂದ ಇನ್ನೊಬ್ಬರ ಜೀವನದ ಮೂಲಕ ಜೀವಂತವಾಗಿ ಇರಬಹುದಾಗಿದೆ. ಆದ್ದರಿಂದ ಈ ದಿಸೆಯಲ್ಲಿ ನಾವೆಲ್ಲರೂ ದೇಹದಾನಕ್ಕೆ ನೋಂದಾಯಿಸಿಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗೋಣ.




ಸಾಮಾನ್ಯವಾಗಿ ಸ್ವರ್ಗ – ನರಕ ಎಂಬ ಕಲ್ಪನೆಯಲ್ಲಿ ತೇಲಾಡುತ್ತಿರುವ ನಮ್ಮ ಮುಗ್ಧ ಜನರು, ಪುನರ್ ಜನ್ಮ ನಂಬಿದ ನಮ್ಮ ಹಿರಿಯರು ಯೋಚನೆ ಮಾಡುವುದು ಹೀಗೆ, ಸತ್ತ ವ್ಯಕ್ತಿಯನ್ನು ಮಣ್ಣು ಮಾಡದಿದ್ದರೆ ಹೇಗೆ? ಅವರಿಂದ ನಮಗೇನಾದರೂ ತೊಂದರೆಯಾಗಬಹುದಲ್ಲವೇ ಎಂಬ ಅಂಜಿಕೆ ಒಂದು ಕಡೆ, ಆದರೆ ಮತ್ತೊಂದು ಕಡೆ ನಮ್ಮ ಹಿರಿಯರ ಸಮಾಧಿಗಳ ಪೂಜೆಯನ್ನು ಮಾಡುವ ವಿಧಾನ ಇದಿಯಲ್ಲಾ ಎಂಬ ಅರ್ಥ ಹೀನ ಪ್ರಶ್ನೆಗಳು, ನಂಬಿಕೆಗಳಿಂದ ದೇಹ ದಾನ ಮಾಡಲು ಹಿಂಜರಿಯುವವರೇ ಹೆಚ್ಚು. ಸಂಶೋಧನೆಗೆ ಉಪಯೋಗಿಸಿ ಆದ ಮೇಲೆ ದೇಹವನ್ನು ಎಲ್ಲೆಂದರಲ್ಲಿ ಎಸೆಯುತ್ತಾರೆ, ವ್ಯಕ್ತಿಯ ದೇಹವನ್ನು ಗೌರವಿಸುವುದಿಲ್ಲ ಎಂಬ ಅಪವ್ಯಾಖ್ಯಾನಗಳು ಬೆಸೆದಿವೆ.

ಆ ನಮ್ಮ ದೇಹಕ್ಕೆ ನಿಜವಾದ ವ್ಯಾಖ್ಯಾನ ಸಿಗುವುದೆ ಇಲ್ಲಿ, ಶವಕ್ಕೆ ದೇವರ ನಿಜರೂಪವಾದ ಪಕ್ಕದ ಸ್ವರೂಪ ನೀಡಿ, ಸಂಕೀರ್ಣ ಶರೀರ ರಚನೆಯ ಅಧ್ಯಯನ ಮಾಡಿ, ಪಂಚಭೂತಗಳ ವಿಂಗಡನೆ ಮಾಡಿ, ಸಾಧ್ಯವಿರುವ ಎಲ್ಲಾ ಪ್ರಯೋಗಗಳ ನಂತರ ದೇಹವನ್ನು ಮೂಲ ರೂಪಕ್ಕೆ ತರುವ ಮೂಲಕ ಅವರವರ ಧರ್ಮದ ಅನುಸಾರವಾಗಿ ಸಂಸ್ಕಾರವನ್ನೂ ಮಾಡುತ್ತಾರೆ ಎಂಬುದು ನಾವೆಲ್ಲರೂ ತಿಳಿದುಕೊಳ್ಳಬೇಕಾದ ಸತ್ಯ ಸಂಗತಿ. ಮತ್ತೆ ದೇಹದ ಪ್ರತಿ ಮೂಳೆಗಳನ್ನು ಸಂಗ್ರಹಿಸಿ ಮೂಳೆಶಾಸ್ತ್ರ ವಿಭಾಗದಲ್ಲಿ ಅಧ್ಯಯನ ಮಾಡಲಾಗುತ್ತದೆ. ನಾವು ನೀವು ತಿಳಿದುಕೊಂಡ ಶವ ಸಂಸ್ಕಾರಕ್ಕಿಂತ ಶವ ಸತ್ಕಾರವೇ ಶ್ರೇಷ್ಠ ಮನುಜತ್ವವಲ್ಲವೆ ನೀವೇ ಹೇಳಿ.



Download From : www.kpscvaani.com

# ಪದಬಂಧ-15




ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಯೋಜನೆ (6)
4. ನಮ್ಮ ರಾಷ್ಟ್ರ ಪಕ್ಷಿ (3)
7. ಕೈಯಿಲ್ಲಿ ತಿರುವುಮುರುವಾಗಿದೆ (2)
9. ಅದೇ ತಾನೆ ಮೂಡುತ್ತಿರುವ ಸೂರ್ಯ (5)
12. ಮೀನುಗಾರರ ಅಭಿವೃದ್ಧಿಗಾಗಿ ಇರುವ ಯೋಜನೆ (5)
14. ಸವಿತಾಳ ಕೈಯಡುಗೆಯ ರುಚಿ! (2)
17. ಪ್ರತಿಯಲ್ಲಿರುವ ಏಳಿಗೆಕಾಣುತ್ತಿದೆಯೇ? (3)
18. ಹನ್ನೆರಡನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ನಡೆದ ಈ ಪಟ್ಟಣ, ಬೀದರ ಜಿಲ್ಲೆಯ ತಾಲೂಕು ಕೇಂದ್ರವೂ ಆಗಿದೆ (6)

## ಮೇಲಿಂದ ಕೆಳಕ್ಕೆ

2. ಎಲೆ ಅಡಕೆಯ ಚೀಲ (2)
3. ಪಾಂಡುರಾಜನ ತಮ್ಮ (3)
5. ಹಾಸ್ಯ ಈ ವಿಧವಾಗಿ ಬಂದಿದೆಯಲ್ಲಾ? (3)
6. ರಾಷ್ಟ್ರೀಯ ವಿಜ್ಞಾನ ದಿನವನ್ನು ಇವರ ಸ್ಮರಣಾರ್ಥ ಆಚರಿಸಲಾಗುತ್ತದೆ (5)
8. ಲಲಿತ ಕಲೆಗಳನ್ನು ಬಲ್ಲವನು (4)
9. ಊಟ ಮಾಡದಿರುವಿಕೆ(4)
10. ನರಕಾಧಿಪತಿ ಇಲ್ಲಿದ್ದಾನೆ(2)
11. ಸಂತತಿಯಲ್ಲಿರುವ ಸಾಧು ತಿರುಗಿದ್ದಾನಲ್ಲಾ? (2)
13. ಹೂವಿನಲ್ಲಿರುವ ಹುಡಿ (3)
15. ಸರಸದ ವಿರುದ್ಧ ಪದ (3)
16. ಶುನಕದ ಹತ್ತಿರವಿರುವ ಗಿಳಿ (2)

## ಉತ್ತರ

**ಮೇಲಿಂದ ಕೆಳಕ್ಕೆ**

2. ಸಂಚಿ 3. ವಿದುರ 5. ವಿನೋದ 6. ಸಿ ವಿ ರಾಮನ್
8. ಕಲಾವಿದ 9. ಉಪವಾಸ 10. ಯಮ 11. ತಸಂ
13. ಪರಾಗ 15. ವಿರಸ 16.ಶುಕ

**ಎಡದಿಂದ ಬಲಕ್ಕೆ**

1. ಕೃಷಿಸಂಜೀವಿನಿ 4. ನವಿಲು 7. ರಕ 9. ಉದಯರವಿ
12. ಮತ್ಸ್ಯಸಂಪದ 14. ಸವಿ 17. ಪ್ರಗತಿ 18. ಬಸವಕಲ್ಯಾಣ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Download From : www.kpscvaani.com



ಜನವರಿ 16 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದಲ್ಲಿ ಕೋವಿಡ್-19 ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ವ್ಯವಹಾರ ಮತ್ತು ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಡಾ.ಕೆ ಸುಧಾಕರ್, ಸಂಸದ ಪಿ.ಸಿ.ಮೋಹನ್ ಹಾಗೂ ಮತ್ತಿತರು ಉಪಸ್ಥಿತರಿದ್ದರು.



ಜನವರಿ 14 ರಂದು ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆ ನಿಲ್ದಾಣದವರೆಗಿನ 6 ಕಿ.ಮೀ ಉದ್ದದ ವಿಸ್ತರಿತ ಹಸಿರು ಮಾರ್ಗಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರ ರಸಗೊಬ್ಬರ ಸಚಿವರಾದ ಸದಾನಂದ ಗೌಡ, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಮತ್ತು ಸಚಿವರುಗಳು ಉಪಸ್ಥಿತರಿದ್ದರು.

Download From : www.kpscvaani.com

RNI No. KAR/KAN/2017/75029
Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

# ಕೊರೋನಾ ಭಯ ಬೇಡ !
# ಜಾಗೃತಿ ಇರಲಿ !



ವಿಶ್ವದಾದ್ಯಂತ ಹರಡಿದ ಕೊರೋನಾ ವೈರಾಣು ಇಡೀ ಜಗತ್ತನ್ನೇ ತಲ್ಲಣಗೊಳಿಸಿದೆ. ಕಳೆದ ಒಂದು ವರ್ಷದಿಂದ ವೈದ್ಯಲೋಕಕ್ಕೆ ಸವಾಲಾಗಿದ್ದ ಈ ಸಾಂಕ್ರಾಮಿಕ ರೋಗಕ್ಕೆ ಸತತ ಪ್ರಯೋಗ ಮತ್ತು ಯಶಸ್ವಿ ಪರೀಕ್ಷೆಯಿಂದಾಗಿ ಇದೀಗ ಕೋವಿಡ್-19 ಲಸಿಕೆ ಲಭಿಸಿದೆ. ರೋಗ ಮತ್ತು ಲಸಿಕೆ ಬಗ್ಗೆ ಎಲ್ಲರ ಮನಸ್ಸಿನಲ್ಲಿ ಮನೆ ಮಾಡಿದ್ದ ಆತಂಕಕ್ಕೆ ತೆರೆ ಬೀಳಲಿದ್ದು, ಯಾರಿಗೆ, ಯಾವಾಗ ಮತ್ತು ಎಷ್ಟು ಲಸಿಕೆ ಲಭ್ಯತೆಯ ಅಂಶಗಳನ್ನು ಸಾರ್ವಜನಿಕ ಮಾಹಿತಿಗಾಗಿ ನೀಡಲಾಗಿದೆ.

## ನಿಮ್ಮ ಸಂದೇಹಾತ್ಮಕ ಪ್ರಶ್ನೆಗಳಿಗೆ ನಮ್ಮ ಉತ್ತರ

- ಕೋವಿಡ್-19 ಲಸಿಕೆಯನ್ನು ಲಭ್ಯತೆ ಮತ್ತು ಅಗತ್ಯತೆಯನುಸಾರ ಹಂತ-ಹಂತವಾಗಿ ನೀಡಿಕೆ.
- ಕೊರೊನಾ ವಿರುದ್ಧ ಹೋರಾಡಿದ ಕೊರೋನಾ ವಾರಿಯರ್ಸ್‌ಗಳಿಗೆ ಮೊದಲ ಆದ್ಯತೆ. ನಂತರದಲ್ಲಿ ವಯೋವೃದ್ಧರು / ಕಾಯಿಲೆ ಪೀಡಿತರಿಗೆ ಲಸಿಕೆ ನೀಡಿಕೆ.
- 28 ದಿನಗಳ ಅಂತರದಲ್ಲಿ ಒಟ್ಟು ಎರಡು ಬಾರಿ ಲಸಿಕೆ ನೀಡಿಕೆ. ಪ್ರತಿಯೊಬ್ಬರೂ ಲಸಿಕೆಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು.
- ನೋಂದಣಿಗೆ ಭಾವಚಿತ್ರವಿರುವ ಗುರುತಿನ ಚೀಟಿ ಒದಗಿಸಬೇಕು. ಲಸಿಕೆ ನೀಡಿಕೆ ಸಮಯದಲ್ಲಿ ಅದನ್ನು ಹಾಜರುಪಡಿಸಬೇಕು.
- ಲಸಿಕೆ ನೀಡುವ ದಿನಾಂಕ, ಸ್ಥಳ ಮತ್ತು ಸಮಯವನ್ನು ನೋಂದಣಿ ಸಮಯದಲ್ಲಿ ತಾವು ನೀಡಲಾದ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ರವಾನೆ.
- ಲಸಿಕೆ ಪಡೆದ ನಂತರ ಸ್ಥಳದಲ್ಲೇ ಅರ್ಧ ಗಂಟೆ ವಿಶ್ರಾಂತಿ ಪಡೆಯುವುದು ಕಡ್ಡಾಯ.
- ಕೊರೋನಾ ಪೀಡಿತರು ಮತ್ತು ಪೀಡಿತರಾಗಿ ಗುಣಮುಖರಾದವರು 14 ದಿನಗಳ ಕ್ವಾರಂಟೈನ್ ಕಡ್ಡಾಯ, ನಂತರವಷ್ಟೇ ಲಸಿಕೆ ನೀಡಿಕೆ.

**ಮುಖದ ಮೇಲೆ ಕೋಪ ಬೇಡ ! ಮುಖಗವಸು ಇರಲಿ !!**

Download From : www.kpscvaani.com